# ಅಧ್ಯಾಯ 1

# ಥೆಸಲೋನಿಕದ ವಿಶ್ವಾಸಿಗಳಿಗೋಸ್ಕರ ಕೃತಜ್ಞತಾಸ್ತುತಿ ಸಲ್ಲಿಕೆ

## ವಂದಿಸುವದು (1:1)

**[1]ತಂದೆಯಾದ ದೇವರಲ್ಲಿಯೂ ಕರ್ತನಾದ ಯೇಸು ಕ್ರಿಸ್ತನಲ್ಲಿಯೂ ಇರುವ ಥೆಸಲೋನಿಕದವರ ಸಭೆಗೆ ಪೌಲ ಸಿಲ್ವಾನ ತಿಮೊಥೆಯ ಎಂಬ ನಾವು ಬರೆಯುವದೇನಂದರೆ – ನಿಮಗೆ ಕೃಪೆಯೂ ಶಾಂತಿಯೂ ಆಗಲಿ.**

**ವಚನ 1.** ಪ್ರಥಮ ಶತಮಾನದಲ್ಲಿ, ಈ ವಿಧವಾದ ಪತ್ರಿಕೆಗಳು ಹೆಚ್ಚುಕಡಿಮೆ ಯಾವಾಗಲೂ ಮೊದಲು ಲೇಖಕನ ಹೆಸರು ಉಲ್ಲೇಖಿಸಲ್ಪಟ್ಟು ನಂತರ ಆ ಪತ್ರಿಕೆಯು ಸಂಬೋದಿಸಲ್ಪಡುವವರ ಬಿರುದು ತಿಳಿಸಲ್ಪಡುವ ಮೂಲಕ ಆರಂಭಗೊಳ್ಳುತ್ತಿದ್ದವು (ಉದಾಹರಣೆಗೆ ನೋಡಿರಿ, 1 ಕೊರಿಂಥ 1:1, 2; ಗಲಾತ್ಯ 1:1, 2; 1 ಪೇತ್ರ 1:1), ಅದರೊಂದಿಗೆ ವಂದಿಸುವಿಕೆಯನ್ನು ಸೇರ್ಪಡೆಗೊಳಿಸಲಾಗುತ್ತಿತ್ತು. ಆ ಪ್ರಾಚೀನ ನಮೂನೆಯನ್ನು ಅನುಸರಿಸುವವನಾಗಿ, ಪೌಲನು ಮೊದಲು ತನ್ನ ಮತ್ತು ಆತನ ಇಬ್ಬರು ಜೊತೆಗೆಲಸದವರ ಹೆಸರುಗಳನ್ನು ಈ ಪತ್ರಿಕೆಯಲ್ಲಿ ಪ್ರಸ್ತಾಪಿಸುತ್ತಾನೆ.

ಲೇಖಕನು ಅಪೊಸ್ತಲನಾದ **ಪೌಲ**, ಆತನು ಯೇಸುವಿನ ಪರಲೋಕಾರೋಹಣದ ಬಳಿಕ ಪರಿವರ್ತನೆಗೊಂಡಿದ್ದನು (ಅಪೊಸ್ತಲರ ಕೃತ್ಯಗಳು 9; 1 ಕೊರಿಂಥ 15:8) ಮತ್ತು ಅನ್ಯಜನರಿಗೆ ಅಪೊಸ್ತಲನಾದನು (ಅಪೊಸ್ತಲರ ಕೃತ್ಯಗಳು 9:15). ಅಪೊಸ್ತಲನಾಗಿ ಆತನಿಗಿರುವ ಅಧಿಕಾರದ ಕುರಿತು ಥೆಸಲೋನಿಕದಲ್ಲಿ ಸಂಶಯವು ಇದ್ದಿರಲಿಲ್ಲವಾದ ಕಾರಣ, ಆತನು ಬೇರೆ ಪತ್ರಿಕೆಗಳಲ್ಲಿರುವಂತೆಯೇ ಇಲ್ಲಿ ತನ್ನನ್ನು ಅಪೊಸ್ತಲನೆಂದು ಅರ್ಹವನ್ನು ಸಹ ಮಾಡಿಕೊಳ್ಳಲಿಲ್ಲ (1 ಕೊರಿಂಥ 1:1; 9:1). ವಾಸ್ತವಿಕದಲ್ಲಿ, ಪತ್ರಿಕೆಯು ಪೌಲನ ಕೃತಿಯಾಗಿರುತ್ತದೆ (2:18), ಆದರೆ ಬಹುಶಃ ಸೌಜನ್ಯತೆಯ ಕಾರಣದಿಂದ ಆತನು ವಂದಿಸುವಿಕೆಯಲ್ಲಿ ತನ್ನ ಇಬ್ಬರು ಸಹಪಾಠಿಗಳನ್ನು ಹೆಸರಿಸುತ್ತಾನೆ.

**ಸಿಲ್ವಾನ** (ಒಂದು ರೋಮನ್ ಹೆಸರು), ಹೆಸರಿಸಲ್ಪಟ್ಟ ಎರಡನೆಯ ವ್ಯಕ್ತಿಯಾಗಿದ್ದು, ಈತನು ಪೌಲನ ಸಂಗಡ ಯೆರೂಸಲೇಮಿನಿಂದ ಅಂತಿಯೋಕ್ಯಕ್ಕೆ ಕಳುಹಿಸಿ ಕೊಡಲ್ಪಟ್ಟ ಒಬ್ಬ ಪ್ರವಾದಿಯಾಗಿದ್ದ ಸೀಲನೇ ಆಗಿರುತ್ತಾನೆಂದು ಸ್ಪಷ್ಟವಾಗಿರುತ್ತದೆ (ಅಪೊಸ್ತಲರ ಕೃತ್ಯಗಳು 15:22, 32) ಮತ್ತು ಅದೇ ವ್ಯಕ್ತಿಯು ಪೌಲನ ಎರಡನೆಯ ಪ್ರಯಾಣದಲ್ಲಿ ಆತನ ಪ್ರಮುಖ ಸಹಾಯಕನಾಗಿ ಆತನೊಂದಿಗೆ ಹೋದ ವೇಳೆಯಲ್ಲಿ ಥೆಸಲೋನಿಕದ ಸಭೆಯು ಸ್ಥಾಪಿಸಲ್ಪಟ್ಟಿತ್ತು (ಅಪೊಸ್ತಲರ ಕೃತ್ಯಗಳು 15:40; 17:1-9). ಇದಾದ ಬಳಿಕ, ಆತನ ಹೆಸರು ಇನ್ನೊಂದು ಸಾರಿಯಷ್ಟೆ ಪ್ರಸ್ತಾಪಿಸಲ್ಪಟ್ಟಿರುತ್ತದೆ, ಆಗ ಪೇತ್ರನು 1 ಪೇತ್ರನ ಪತ್ರಿಕೆಯನ್ನು ಬರೆಯುವ ವೇಳೆಯಲ್ಲಿ ಆತನು ಪೇತ್ರನ ಸಂಗಡ ಕ್ರಿ.ಶ. 60-65ರ ವೇಳೆ ಆತನು ಕರೆಯುವಂಥ ಬಾಬೆಲ ಎಂದು ಕರೆಯುವ ಸ್ಥಳದಲ್ಲಿದ್ದನು (1 ಪೇತ್ರ 5:12). ಆತನು ಥೆಸಲೋನಿಕದವರಿಗೆ ಬರೆದ ಮೊದಲನೆಯ ಪತ್ರಿಕೆಯನ್ನು ಬರೆಯುವದಕ್ಕೆ ಪೌಲನಿಗೆ ಲೇಖಕನಾಗಿದ್ದಿರಬಹುದಾದ ಸಾಧ್ಯತೆಯಿರುತ್ತದೆ, ಆದರೆ ನಾವು ನಿಖರವಾಗಿ ಹೇಳುವದಕ್ಕಾಗುವದಿಲ್ಲ.

**ತಿಮೊಥೆಯ**, ಪ್ರಸ್ತಾಪಿಸಲ್ಪಟ್ಟಿರುವ ಮೂರನೆಯ ವ್ಯಕ್ತಿಯಾಗಿದ್ದು, ಈತನು ಒಬ್ಬ ಗ್ರೀಕ್ ತಂದೆ ಮತ್ತು ಒಬ್ಬ ಇಬ್ರಿಯ ತಾಯಿಯ ಮಗನಾಗಿದ್ದನು, ಮತ್ತು ಲುಸ್ತ್ರದಲ್ಲಿ ವಾಸಿಸಿದ್ದನು. ಆತನು ಒಬ್ಬ ಯುವಕನಾಗಿ ಸುನ್ನತಿ ಮಾಡಿಸಲ್ಪಟ್ಟಿದ್ದನು ಮತ್ತು ಪೌಲನಿಂದ ಒಬ್ಬ ಜೊತೆಗೆಲಸದವನಾಗಿ ಕರೆದೊಯ್ಯಲ್ಪಟ್ಟಿದ್ದನು (ಅಪೊಸ್ತಲರ ಕೃತ್ಯಗಳು 16:1-3). ಆತನ ತಾಯಿ ಮತ್ತು ಅಜ್ಜಿಯರು ಕ್ರಿಸ್ತನಲ್ಲಿ ವಿಶ್ವಾಸಿಗಳಾಗಿ ಬದಲಾಗಿದ್ದ ಇಬ್ರಿಯ ಭಕ್ತಿವಂತ ಸ್ತ್ರೀಯರಾಗಿದ್ದರೆಂಬುದು ಸ್ಪಷ್ಟವಾಗಿರುತ್ತದೆ (2 ತಿಮೊಥೆ 1:5; 3:4-15). ಪೌಲನು ಆತನ ಬಗ್ಗೆ ಗಮನಾರ್ಹವಾದ ರೀತಿಯಲ್ಲಿ ಉನ್ನತ ಭಾವನೆಯನ್ನು ಇಟ್ಟುಕೊಂಡಿದ್ದನು (ಫಿಲಿಪ್ಪಿ 2:19, 20).

ಪೌಲನು ಥೆಸಲೋನಿಕದವರ **ಸಭೆಗೆ** ಬರೆದನು. "ಸಭೆ" ಎಂಬುದಕ್ಕಿರುವ ἐκκλησία (*ekklēsia*) ಎಂಬ ಪದದ ಅರ್ಥವು, "ಸಭೆ" ಅಥವಾ ಕೂಟ ಎಂದಾಗಿರುತ್ತದೆ. ಶಾಸ್ತ್ರಗಳು ದೇವರ ಒಟ್ಟುಗೂಡಿದ ಸಭೆ (ಮತ್ತಾಯ 16:18), ಮಾತ್ರವಲ್ಲದೆ ಸ್ಥಳೀಯ ಸಭೆಗಳ ಕುರಿತು ಮಾತಾಡುತ್ತವೆ (1 ಕೊರಿಂಥ 1:2). ಲೌಕಿಕ ಕೂಟಗಳನ್ನು ಸೂಚಿಸುವದಕ್ಕೆ ಸಹ ಅದೇ ಪದವು ಬಳಸಲ್ಪಡುತ್ತದೆ, ಉದಾಹರಣೆಗೆ ಅಪೊಸ್ತಲರ ಕೃತ್ಯಗಳು 19:32ರಲ್ಲಿರುವಂತೆ ಎಫೆಸದಲ್ಲಿನ ಸಭೆ. ಸನ್ನಿವೇಶದಲ್ಲಿನ ತಿದ್ದುಪಡಿ ಪದಗಳು ಮಾತ್ರವೇ ಅದು ಯಾವ ರೀತಿಯ ಸಭೆಯಾಗಿತ್ತೆಂಬುದರ ವ್ಯತ್ಯಾಸವನ್ನು ಗುರುತಿಸಲು ಸಾಧ್ಯಗೊಳಿಸುತ್ತದೆ. ಈ ಸಭೆಯು **ಥೆಸಲೋನಿಕದವರ** ಸಭೆಯಾಗಿತ್ತು, ಅಂದರೆ ಅದರಲ್ಲಿ ಥೆಸಲೋನಿಕ ಪಟ್ಟಣದ ನಿವಾಸಿಗಳು ಸೇರಿದ್ದರು ಎಂಬದೆ. ಇಲ್ಲಿ ಮತ್ತು 2 ಥೆಸಲೋನಿಕ 1:1ರಲ್ಲಿ, "ಥೆಸಲೋನಿಕದವರ ಸಭೆ" ಎಂಬ ನಿರ್ದಿಷ್ಟವಾದ ಪದಗಳು ಬಳಸಲ್ಪಟ್ಟಿರುತ್ತವೆ. ಸಾಧಾರಣವಾಗಿ, ಕೆಲವು ಸ್ಥಳಗಳಲ್ಲಿ ಪೌಲನು "ದಲ್ಲಿ" ಇರುವ ಸಭೆ ಅಥವಾ ದೇವಜನರು ಎಂಬದಾಗಿ ಸಂಬೋಧಿಸಿರುತ್ತಾನೆ. ಇಲ್ಲಿ, ಆತನು ಸ್ವಲ್ಪ ವ್ಯತ್ಯಾಸವಾಗಿ, ಒಂದು ನಿರ್ದಿಷ್ಟವಾದ ಸ್ಥಳದಲ್ಲಿ ನಿವಾಸಿಸುತ್ತಿರುವ ಜನರ ಒಂದು ಸಮೂಹವನ್ನು ಸೂಚಿಸುತ್ತಿದ್ದಾನೆ. ಆ ಎರಡು ಪತ್ರಿಕೆಗಳು ಅತಿ ಆರಂಭದ ಪತ್ರಿಕೆಗಳಾಗಿದ್ದದರಿಂದ

ಪೌಲನು "ಇನ್ನೂ ತನ್ನ ರೂಢಿಯಾದ ಶೈಲಿಯಲ್ಲಿ ಭದ್ರವಾಗಿ ನೆಲೆಯೂರಿರಲಿಲ್ಲ" ಎಂಬ ಕಾರಣಕ್ಕಾಗಿಯೇ ಆ ವಿಶಿಷ್ಟವಾದ ಪದಗುಚ್ಛವನ್ನು ಬಳಸಿದನೆಂಬುದಾಗಿ Leon Morrisನ ನಂಬಿಕೆಯಾಗಿರುತ್ತದೆ.[1] ಹೇಗೂ, ಪೌಲನ ಬರೆವಣಿಗೆಯ ಶೈಲಿಯಲ್ಲಿ ಈ ವಿಧವಾದ ಬೆಳವಣಿಗೆಯಾಯಿತೆಂದು ಭಾವಿಸಿಕೊಳ್ಳುವದು ಒಂದು ಆಧಾರಪೂರ್ವಕ ಕಲ್ಪನೆಯಾಗಿರುವದಿಲ್ಲ.

ಅಷ್ಟುಮಾತ್ರವಲ್ಲದೆ, ಅವರ ಸಭೆಯು ಥೆಸಲೋನಿಕದಲ್ಲಿ ವಾಸಿಸುವ ಎಲ್ಲರನ್ನೂ ಒಳಗೊಂಡಿರಲಿಲ್ಲ, ಆದರೆ ಕೇವಲ **ತಂದೆಯಾದ ದೇವರಲ್ಲಿಯೂ ಕರ್ತನಾದ ಯೇಸುವಿನಲ್ಲಿಯೂ ಇರುವ**ವರನ್ನು ಮಾತ್ರವೇ ಒಳಗೊಂಡಿತ್ತು. ಎಲ್ಲಾ ಮಾನವರು ಪಾಪದ ನಿಮಿತ್ತವಾಗಿ ದೇವರಿಂದ ಬೇರ್ಪಟ್ಟಿರುತ್ತಾರೆ (ರೋಮಾ 3:10, 23), ಆದರೆ ಆತನೊಂದಿಗೆ ಸಂಧಾನಪಡಿಸಲ್ಪಟ್ಟಿದ್ದಾರೆ (2 ಕೊರಿಂಥ 5:19) ಮತ್ತು ಆ ಕಾರಣದಿಂದ "ದೇವರಲ್ಲಿದ್ದಾರೆ," ಆತನು ಅವರಿಗೆ ಆತ್ಮೀಕ ಅರ್ಥದಲ್ಲಿ ತಂದೆಯಾಗಿರುತ್ತಾನೆ (ರೋಮಾ 8:14-16; ಗಲಾತ್ಯ 4:6, 7). ಆ ಸಂಧಾನಪಡಿಸಲ್ಪಟ್ಟವರು "ಕ್ರಿಸ್ತನಲ್ಲಿ ಸೇರುವದಕ್ಕೆ" ದೀಕ್ಷಾಸ್ನಾನ ಮಾಡಿಸಿಕೊಂಡವರಾಗಿದ್ದರು (ರೋಮಾ 6:3, 4; ಗಲಾತ್ಯ 3:26, 27). ಹೀಗೆ ದೇವರಲ್ಲಿ ಮತ್ತು ಕ್ರಿಸ್ತನಲ್ಲಿದ್ದವರಾಗಿದ್ದ ಥೆಸಲೋನಿಕದವರಿಗೆ ಈ ಪತ್ರಿಕೆಯು ಬರೆಯಲ್ಪಟ್ಟಿರುತ್ತದೆ.

ಥೆಸಲೋನಿಕದವರಿಗೆ ದೇವರ **ಕೃಪೆ** (χάρις, *charis*), ದೇವರ ದಯೆ ದೊರಕಲಿ ಎಂದು ಪೌಲನು ಹಾರೈಸಿದನು. ಗ್ರೀಕ್ ಸಂಸ್ಕೃತಿಯ ವಂದಿಸುವಿಕೆಯಲ್ಲಿ ಅನೇಕ ಸಾರಿ "ಕೃಪೆ"ಯು ಸೇರ್ಪಡೆಗೊಳಿಸಲ್ಪಡುತ್ತಿತ್ತು. ಅದರ ಜೊತೆಯಲ್ಲಿ, ಪೌಲನು **ಶಾಂತಿ** (εἰρήνη, *eirēnē*) ದೊರಕಲಿ ಎಂದು ಹಾರೈಸುವದನ್ನು ಸೇರ್ಪಡೆಗೊಳಿಸುತ್ತಾನೆ. ಗ್ರೀಕ್ ರಿಗಾದರೋ, ಶಾಂತಿ ಎಂದರೆ ಮೂಲಭೂತವಾಗಿ ಯುದ್ಧದ ಅನುಪಸ್ಥಿತಿ ಎಂದರ್ಥವಾಗಿತ್ತು. ಹೇಗೂ, ಇಬ್ರಿಯ ಭಾಷೆಯಲ್ಲಿ, ಅದು ಇಬ್ರಿಯ ಪದವಾದ שָׁלוֹם (*shalom*) ಎಂಬದರ ಅರ್ಥವನ್ನು ಪಡೆದುಕೊಳ್ಳುತ್ತಿತ್ತು, ಅದರಲ್ಲಿ ಸಮೃದ್ಧಿ ಮತ್ತು ಆತ್ಮದ ಪರಿಪೂರ್ಣತೆ, ಒಟ್ಟಾರೆ ಸೌಖ್ಯವಾದ ಜೀವನ ಎಂಬುದು ಅಡಕವಾಗಿತ್ತು. ಯೆಹೂದಿ ವಂದಿಸುವಿಕೆಯು ಸಾಮಾನ್ಯವಾಗಿ *shalom*ನ್ನು ಒಳಗೊಂಡಿರುತ್ತದೆ.

## ಥೆಸಲೋನಿಕದವರಿಗೋಸ್ಕರ ಕೃತಜ್ಞತಾಸ್ತುತಿ ಸಲ್ಲಿಕೆ (1:2-4)

**2-3ನಾವು ನಂಬಿಕೆಯ ಫಲವಾದ ನಿಮ್ಮ ಕೆಲಸವನ್ನೂ ಪ್ರೀತಿಪೂರ್ವಕವಾದ ನಿಮ್ಮ ಪ್ರಯಾಸವನ್ನೂ ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೇಲಣ ನಿರೀಕ್ಷೆಯಿಂದುಂಟಾದ ನಿಮ್ಮ ಸ್ಥೈರಣೆಯನ್ನೂ ನಮ್ಮ ತಂದೆಯಾದ ದೇವರ ಮುಂದೆ ಎಡೆಬಿಡದೆ ಜ್ಞಾಪಕಮಾಡಿಕೊಂಡು ನಮ್ಮ ಪ್ರಾರ್ಥನೆಗಳಲ್ಲಿ ನಿಮಗೋಸ್ಕರ ವಿಜ್ಞಾಪನೆಮಾಡುವಾಗ ನಿಮ್ಮೆಲ್ಲರ ವಿಷಯದಲ್ಲಿ ದೇವರಿಗೆ ಯಾವಾಗಲೂ ಕೃತಜ್ಞತಾಸ್ತುತಿ ಸಲ್ಲಿಸುತ್ತೇವೆ. 4ದೇವರು ಪ್ರೀತಿಸಿದ ಸಹೋದರರೇ, ಆತನು ನಿಮ್ಮನ್ನು ಆದುಕೊಂಡನೆಂಬುದನ್ನೂ.**

**ವಚನಗಳು 2-3.** ಪೌಲನು **ದೇವರಿಗೆ . . . ಕೃತಜ್ಞತಾಸ್ತುತಿ ಸಲ್ಲಿಸಿ**ದನು, ಇದೇ ರೀತಿಯಲ್ಲಿಯೇ ಆತನು ತನ್ನ ಪತ್ರಿಕೆಗಳನ್ನು ಅನೇಕ ಸಾರಿ "ಕೃತಜ್ಞತಾಸ್ತುತಿ ಅರ್ಪಿಸು"

ಎಂಬ ಪದಗುಚ್ಛದ ಯಾವದಾದರೂ ಒಂದು ರೂಪದಿಂದ ಆರಂಭಿಸುತ್ತಿದ್ದನು, ಅದು ಗ್ರೀಕ್ ನ εὐχαριστέω (*eucharisteō*) ಎಂಬ ಪದದಿಂದ ಬಂದದ್ದಾಗಿದೆ (ನೋಡಿರಿ 2 ಥೆಸಲೋನಿಕ 1:3; 1 ಕೊರಿಂಥ 1:4). ಥೆಸಲೋನಿಕದವರಲ್ಲಿ ಬಹಳಷ್ಟು ಒಳ್ಳೇದು ಇರುವದು ಸ್ಪಷ್ಟವಾಗಿರುತ್ತದೆ. ಅವರು ಪೌಲನಿಗೆ ಪ್ರೋತ್ಸಾಹವಾಗುವದಕ್ಕೆ ಕಾರಣವಾಗಿದ್ದರು (1:8-10). ಆತನು [ತನ್ನ] **ಪ್ರಾರ್ಥನೆಗಳಲ್ಲಿ ನಿಮಗೋಸ್ಕರ ವಿಜ್ಞಾಪನೆ ಮಾಡುವಾಗ** ಎಂದು ಹೇಳುತ್ತಾನೆ. ಪೌಲನ ಪ್ರಾರ್ಥನೆಗಳು ನಿರ್ದಿಷ್ಟವಾದ ಸಭೆಗಳನ್ನು ಮಾತ್ರವಲ್ಲದೆ ನಿರ್ದಿಷ್ಟವಾದ ವ್ಯಕ್ತಿಗಳನ್ನು ಸಹ ಒಳಗೊಂಡಿರುತ್ತಿದ್ದವು (2 ತಿಮೊಥೆ 1:3). ಅಷ್ಟುಮಾತ್ರವಲ್ಲದೆ, ಆತನು **ಯಾವಾಗಲೂ** ದೇವರಿಗೆ ಕೃತಜ್ಞತಾಸ್ತುತಿ ಮಾಡಿದನು ಎಂಬುದನ್ನು ಗಮನಿಸುವದು ಮಹತ್ವಪೂರ್ಣವಾಗಿರುತ್ತದೆ. ಆತನು ಕೃತಜ್ಞತಾಭಾವ ದೊಡನೆ ನಿಯತಕ್ರಮವಾಗಿ ಪ್ರಾರ್ಥಿಸುತ್ತಿದ್ದನು (5:17, 18).

**ಎಡೆಬಿಡದೆ ಜ್ಞಾಪಕಮಾಡಿಕೊಂಡು** ಎಂಬುದು 2ನೇ ವಚನದಲ್ಲಿನ ಯೋಚನೆಯ ಮುಂದುವರಿಕೆ ಎಂದು ತೋರುತ್ತದೆ. ತಮ್ಮ ಪ್ರಾರ್ಥನೆಗಳಲ್ಲಿ "ದೇವರಿಗೆ ಕೃತಜ್ಞತಾಸ್ತುತಿ" ಸಲ್ಲಿಸುವದರ ಜೊತೆಗೆ, ಆತನು ಹಾಗೂ ಆತನ ಜೊತೆಗಾರರು ಥೆಸಲೋನಿಕದವರ ಪರಿಶ್ರಮಗಳನ್ನು "ಎಡೆಬಿಡದೆ ಜ್ಞಾಪಕಮಾಡಿಕೊಳ್ಳುತ್ತಿದ್ದರು" ಎಂಬದಾಗಿ ಹೇಳುತ್ತಾನೆ. ಈ ಪ್ರಾರ್ಥನೆಗಳು **ತಂದೆಯಾದ ದೇವರ** ಮುಂದೆ ಮಾಡಲ್ಪಟ್ಟವು ಎಂಬುದನ್ನು ಪ್ರಸ್ತಾಪಿಸುತ್ತಾನೆ. ಅಂದರೆ, ಅವುಗಳನ್ನು ಪ್ರಾರ್ಥನೆಯ ಮೂಲಕ ದೇವರ ಸಿಂಹಾಸನ ಮುಂದೆ ಇಡಲಾಗಿರುತ್ತದೆ. ಆತನು ನಮ್ಮ ತಂದೆಯಾಗಿದ್ದಾನಾದ್ದರಿಂದ ಧೈರ್ಯವಾಗಿ ಆತನ ಸಿಂಹಾಸನದ ಮುಂದೆ ಹೋಗುವವರಾಗಿದ್ದೇವೆ (ಇಬ್ರಿಯ 4:16).

ಅವರು ದೇವರಿಗೆ ಕೃತಜ್ಞತಾಸ್ತುತಿ ಸಲ್ಲಿಸಿದ ನಿರ್ದಿಷ್ಟವಾದ ಕಾರ್ಯಗಳೆಂದರೆ ಥೆಸಲೋನಿಕದವರ **ನಂಬಿಕೆಯಿಂದ** ಉಂಟಾದ **ಕೆಲಸ, ಪ್ರೀತಿ**ಯಿಂದ ಉತ್ತೇಜನಗೊಂಡ **ಪ್ರಯಾಸ, ನಿರೀಕ್ಷೆಯಿಂದ** ಪ್ರೇರಣೆಗೊಂಡ **ಸೈರಣೆ** ಇವುಗಳಾಗಿದ್ದವು.

ನಂಬಿಕೆ, ನಿರೀಕ್ಷೆ, ಮತ್ತು ಪ್ರೀತಿ ಎಂಬ ಮೂರು ಅತಿ ಮುಖ್ಯ ಕ್ರೈಸ್ತೀಯ ಭೂಷಣಗಳು ಆಗಾಗ್ಗೆ ಬೇರೆ ಕಡೆಗಳಲ್ಲಿ ಒಟ್ಟೊಟ್ಟಿಗೆ ಪ್ರಸ್ತಾಪಿಸಲ್ಪಟ್ಟಿರುತ್ತವೆ (5:8; 1 ಕೊರಿಂಥ 13:13; ಕೊಲೊಸ್ಸೆ 1:3-5; 1 ಪೇತ್ರ 1:21, 22). ಅವುಗಳ ಕುರಿತು ಒತ್ತಿ ಹೇಳಲ್ಪಟ್ಟಿರುವದು ಸೂಚಿಸುವದೇನಂದರೆ ಅವುಗಳು ಕ್ರೈಸ್ತನ ಜೀವಿತದಲ್ಲಿ ಉಂಟು ಮಾಡಿದ (ಉತ್ತೇಜಿಸಿದ ಅಥವಾ ಪ್ರೇರಣೆಗೊಳಿಸಿದ) ಕಾರ್ಯಗಳ ನಿಮಿತ್ತವಾಗಿ ಅತ್ಯಂಥ ಪ್ರಾಮುಖ್ಯವಾದ ಸದ್ಗುಣಗಳಾಗಿರುತ್ತವೆ ಎಂಬುದೆ. ನಿಜವಾದ ನಂಬಿಕೆಯು ಕ್ರಿಯೆಗಳನ್ನುಂಟು ಮಾಡುತ್ತದೆ (ಯಾಕೋಬ 2:14-17; ಇಬ್ರಿಯ 11); ಗ್ರೀಕ್ ನ ἀγάπη (*agapē*) ಎಂಬದರಿಂದ ಬಂದಿರುವ, ಪ್ರೀತಿಯು ಪ್ರಯಾಸವನ್ನು, ಅಥವಾ "ಕಠಿಣ ಪರಿಶ್ರಮ"ವನ್ನು ಉಂಟು ಮಾಡಿತ್ತು; ನಿರೀಕ್ಷೆಯು ಸೈರಣೆಯನ್ನು (ಸಹನೆ ಅಥವಾ ದೃಢನಿಷ್ಠೆ) ಪ್ರೇರಣೆಗೊಳಿಸಿತ್ತು, ಅಂದರೆ ಅವರು ಹಿಂಸೆಗಳನ್ನು ಮತ್ತು ಇತರ ವಿರೋಧಗಳನ್ನು ಎದುರಿಸಿದಾಗ್ಯೂ ಅಚಲರಾಗಿ ಮುಂದುವರೆದರು ಎಂದರ್ಥವಾಗಿರುತ್ತದೆ. ಅವರು **ನಮ್ಮ ಕರ್ತನಾದ ಯೇಸು ಕ್ರಿಸ್ತನಲ್ಲಿ** ಇರುವ ನಿತ್ಯವಾದ ಮಹಿಮೆಯಲ್ಲಿ ಪಾಲುಗಾರರಾಗುವೆವೆಂಬ ನಿರೀಕ್ಷೆಯ ಕಾರಣದಿಂದ ಮುನ್ನಡೆದರು (ರೋಮಾ 8:18-25; 15:4).

Ethelbert Staufferನು *agapē* ಮೇಲಿನ ತನ್ನ ಚರ್ಚೆಯಲ್ಲಿ ಗಮನಕ್ಕೆ ತಂದದ್ದೇನೆಂದರೆ ಯೇಸು, ತನ್ನ ಜೀವನ ಮತ್ತು ಮರಣದಲ್ಲಿ, *agapē* ಎಂಬ ಪದದೊಳಗೆ ಬಣ್ಣಿಸಲಾಗಿರುವ ಒಂದು ನೂತನ ವಾಸ್ತವಿಕತೆಯನ್ನು ಸೃಷ್ಟಿಸಿದನು.[2] ಇದಕ್ಕೆ Morris ಒಮ್ಮತವನ್ನು ವ್ಯಕ್ತಪಡಿಸುತ್ತಾ ಹೀಗೆ ಹೇಳುತ್ತಾನೆ,

> ಅದು ಹೊಸ ಒಡಂಬಡಿಕೆಯಲ್ಲೆಲ್ಲಾ ಮೊಳಗುತ್ತದೆ. ಅವರು ಹೊಸ ಪದವನ್ನು ಹೊಂದಿದ್ದರು ಎಂಬುದು ಮಾತ್ರವಲ್ಲದೆ, ಅವರು ಒಂದು ಹೊಸ ಯೋಚನೆಯನ್ನು ಹೊಂದಿದ್ದರು, ಯಾಕೆಂದರೆ ಯೋಹಾನನು ಹೇಳುವ ಹಾಗೆ, ಯಾವದೇ ಮಾನವ ಚಟುವಟಿಕೆಯ ಮೂಲಕ, ದೇವರಿಗೆ ತೋರುವ ಪ್ರೀತಿಯಿಂದ ಸಹ, *agapē* ಎಂದರೆ ಏನೆಂಬುದನ್ನು ತಿಳಿದುಕೊಳ್ಳಲಾರೆವು. ಅದು ಶಿಲುಬೆಯ ಮೇಲೆ ಉಂಟು ಮಾಡಲ್ಪಟ್ಟ ಪಾಪಪರಿಹಾರದಲ್ಲಿ ತೋರಿ ಬಂದಂಥ ನಮ್ಮ ಮೇಲಿರುವ ದೇವರ ಪ್ರೀತಿಯಿಂದ ಮಾತ್ರವೇ ಅದನ್ನು ತಿಳಿದುಕೊಳ್ಳಬಹುದಾಗಿದೆ (1 ಯೋಹಾನ 4:10).[3]

ಹೊಸ ಒಡಂಬಡಿಕೆಯಲ್ಲಿ *agapē*ಗೆ ಅದರ ಅರ್ಥವನ್ನು ಕೊಡುವ ಮಾನದಂಡವು ದೇವರ ಪ್ರೀತಿಯ ಶ್ರೇಷ್ಠವಾದ ಕ್ರಿಯೆಯೇ ಆಗಿರುತ್ತದೆ. ನಿಜವಾದ *agapē* ನೋಡಿದ ಬಳಿಕ ನಾವು ಅದನ್ನು *agapē*ಯ ಪ್ರಯಾಸದಲ್ಲಿ ಅನುಕರಣೆ ಮಾಡುವದಕ್ಕೆ ಪ್ರಯತ್ನಿಸುತ್ತೇವೆ. *Agapē*ಯು "ಅತ್ಯಂಥ ಉನ್ನತ ವಿಧವಾದ ಪ್ರೀತಿ"[4] ಎಂದು A. T. Robertson ಹೇಳಿದ್ದು ಸರಿಯಾಗಿಯೇ ಇರುತ್ತದೆ. 4ನೇ ವಚನದಲ್ಲಿ ಕ್ರೈಸ್ತರು "ದೇವರು ಪ್ರೀತಿಸಿದ [*agapaō,* ಆ ಪದದ ಕ್ರಿಯಾಪದ ರೂಪವಾಗಿದೆ]" ವರು ಎಂಬುದನ್ನು ಗಮನಿಸಿರಿ.

**ವಚನ 4. ಸಹೋದರರೇ** (ἀδελφός, *adelphos*) ಎಂಬುದು ಈ ಪತ್ರಿಕೆಯಲ್ಲಿ ಪೌಲನು ಆಗಾಗ್ಗೆ ಬಳಸಿದ ಒಂದು ಪ್ರೀತಿಯ ಪದವಾಗಿರುತ್ತದೆ (2:1; 3:2; 4:6; 4:10). ಇದು ಥೆಸಲೋನಿಕದವರಿಗೆ ಬರೆದ ಪತ್ರಿಕೆಯಲ್ಲಿ ಮಾತ್ರವೇ ಇಪ್ಪತ್ತೈದು ಸಾರಿ ಕಾಣಿಸಿಕೊಳ್ಳುತ್ತದೆ. ಎಲ್ಲಾ ಮನುಷ್ಯರು **ದೇವರು ಪ್ರೀತಿಸಿದ**ವರು (ἠγαπημένοι ὑπὸ [τοῦ] θεοῦ, *ēgapēmenoi hupo* [*tou*] *theou*) (ನೋಡಿರಿ ಯೋಹಾನ 3:16), ಆದರೆ ಕ್ರೈಸ್ತರು ಮಾತ್ರವೇ ದೇವರ ಪ್ರೀತಿಯ ಪ್ರಸ್ತಾಪಗಳನ್ನು ಅಂಗೀಕರಿಸಿಕೊಂಡವ ರಾಗಿದ್ದರೆ. ಆದುದರಿಂದ, ಕ್ರೈಸ್ತರು, ಕ್ರಿಸ್ತನ ಮೂಲಕವಾಗಿ ದೇವರೊಂದಿಗೆ ಸಂಧಾನಪಡಿಸಲ್ಪಟ್ಟವರು ಎಂಬದರಲ್ಲಿ, ಒಂದು ವಿಶೇಷ ಅರ್ಥದೊಳಗೆ ಅವರು "ದೇವರು ಪ್ರೀತಿಸಿದವರು" ಆಗಿದ್ದಾರೆ (2 ಕೊರಿಂಥ 5:19). ವಿಧೇಯರಾಗುವವರು ವಿಶೇಷವಾದ ರೀತಿಯಲ್ಲಿ ದೇವರ ಪ್ರೀತಿಯೊಳಗಿರುತ್ತಾರೆ ಎಂಬುದನ್ನು ಯೂದನು 21ನೇ ವಚನವು ತೋರಿಸುತ್ತದೆ. ದೇವರ ಸಂಗಡ ಹೊಂದಿರುವ ಈ ವಿಶೇಷ ಸಂಬಂಧದ ಕಾರಣದಿಂದ, ಕ್ರೈಸ್ತರು ಆತನಿಂದು ಆದುಕೊಂಡವರಾಗಿದ್ದಾರೆ. ಪೌಲನು **ನಿಮ್ಮನ್ನು ಆದುಕೊಂಡನೆಂಬು ದನ್ನೂ** ("ನಿಮ್ಮ ಆಯ್ಕೆ"; KJV) ಎಂದು ಹೇಳುವಾಗ ಈ ಆರಿಸಿಕೊಳ್ಳುವಿಕೆಯನ್ನು ಪರೋಕ್ಷವಾಗಿ ಸೂಚಿಸುತ್ತಾನೆ.

ಸಭೆಯು ಮುಖ್ಯವಾಗಿ ಅನ್ಯಜನರನ್ನೊಳಗೊಂಡಿತ್ತು, ಆದಾಗ್ಯೂ ಹಳೆಯ ಒಡಂಬಡಿಕೆಯಲ್ಲಿ ಯೆಹೂದ್ಯರು ಹೇಗೆ ದೇವರ ಜನರಾಗಿದ್ದರೋ, ಹಾಗೆಯೇ ಅವರು ಈಗ ದೇವರ ಆದುಕೊಂಡವರಲ್ಲಿ, ಅಥವಾ ಆರಿಸಿಕೊಂಡವರೊಳಗೆ ಭಾಗವಾಗಿದ್ದಾರೆಂಬ

ಭರವಸೆಯನ್ನು ಪೌಲನು ನೀಡುತ್ತಾನೆ. ದೇವರಿಂದ ಆದುಕೊಳ್ಳಲ್ಪಡುವಿಕೆಯು ಪ್ರಾಥಮಿಕವಾಗಿ ಆತನಿಗೆ ನಮ್ಮ ಮೇಲಿರುವ ಪ್ರೀತಿ ಮತ್ತು ಕಾಳಜಿಯ ಮೇಲೆ ಆಧಾರವಾಗಿರುತ್ತದೆ. ಆತನು ಮೊದಲ ಹೆಜ್ಜೆಯನ್ನಿಟ್ಟಿರದಿದ್ದಲ್ಲಿ, ಸಂಧಾನವೆಂಬುದೇ ಸಂಭವಿಸುತ್ತಿರಲಿಲ್ಲ (ಯೆಶಾಯ 64:6); ಆದರೆ ಆದುಕೊಂಡವರೊಳಗೆ ಸೇರಬೇಕಾದರೆ ಮನುಷ್ಯರು ನೆರವೇರಿಸಬೇಕಾದ ಕೆಲವೊಂದು ಶರತ್ತುಗಳಿರುತ್ತವೆ.

ವಾಸ್ತವದಲ್ಲಿ, 2 ಥೆಸಲೋನಿಕ 2:13ನೇ ವಚನವು ಒಬ್ಬನು "ಪವಿತ್ರಾತ್ಮನಿಂದ ಶುದ್ಧೀಕರಿಸಲ್ಪಟ್ಟವನಾಗಿ ಸತ್ಯದ ಮೇಲೆ ನಂಬಿಕೆಯನ್ನಿಡುವ" ಮೂಲಕ ಆದುಕೊಳ್ಳಲ್ಪಡುತ್ತಾನೆಂಬುದನ್ನು ಸ್ಪಷ್ಟಗೊಳಿಸುತ್ತದೆ. ಪವಿತ್ರಾತ್ಮನ ಕೆಲಸದ ಪ್ರಯೋಜನವನ್ನು ಹೊಂದಿರದವರು ಮತ್ತು ನಂಬಿಕೆಯನ್ನಿಡದವರು (ವಿಧೇಯತೆಯನ್ನೊಳಗೊಂಡ ಒಂದು ಭಾವನೆ) ರಕ್ಷಣೆಯನ್ನು ಹೊಂದಲು ಸಾಧ್ಯವಿಲ್ಲ. ಈ ನಂಬಿಕೆ ಅಥವಾ ವಿಶ್ವಾಸವು, 2 ಪೇತ್ರ 1:5-11ರಲ್ಲಿ ಕಾಣುವ ಪ್ರಕಾರ, ನಿಸ್ಸಂದೇಹಕರವಾಗಿ ನಿರಂತರವಾದ ನಂಬಿಕೆ (ಅಥವಾ ವಿಧೇಯತೆ) ಯನ್ನು ಒಳಗೊಂಡಿರುತ್ತದೆ, ಅಲ್ಲಿ ನಮ್ಮ ಆದುಕೊಳ್ಳುವಿಕೆಯನ್ನು ದೃಢಪಡಿಸಿಕೊಳ್ಳುವದಕ್ಕೆ ನಮ್ಮ ಜೀವಿತಗಳಿಗೆ ಜ್ಞಾನ ಮತ್ತು ದಮೆಗಳಂತಹ ಸದ್ಗುಣಗಳನ್ನು ಕೂಡಿಸಿಕೊಳ್ಳಬೇಕು ಎಂಬುದನ್ನು ಸ್ಪಷ್ಟಗೊಳಿಸಲಾಗಿರುತ್ತದೆ (ವ. 10). ಈ ಪತ್ರಿಕೆಯಲ್ಲಿ ಸಹ, ಥೆಸಲೋನಿಕವದರು ಸತ್ಯವನ್ನು ಬಿಟ್ಟು ಬಿದ್ದು ಹೋಗುವ ಸಾಧ್ಯತೆಯಿಲ್ಲದವರಾಗಿ ರಕ್ಷಿಸಲ್ಪಟ್ಟಿಲ್ಲ ಎಂಬುದು ಸ್ಪಷ್ಟವಾಗಿರುತ್ತದೆ (3:5; 4:6; 5:6-9). ಈ ಮುಕ್ತಾಯಕ್ಕೆ ಬರತಕ್ಕದ್ದಾಗಿರುತ್ತದೆ, ಏನೆಂದರೆ ದೇವರು, ಮೊಟ್ಟಮೊದಲನೆಯದಾಗಿ, ರಕ್ಷಣೆಗೋಸ್ಕರ ಒಂದು ಗುಂಪನ್ನು ಆದುಕೊಂಡಿರುತ್ತಾನೆ (ನಂಬಿಕೆಯಿಡುವವರು ಮತ್ತು ವಿಧೇಯರಾಗುವವರು), ಮತ್ತು ಎರಡನೆಯದಾಗಿ, ನಾಶನಕ್ಕಾಗಿ ಒಂದು ಗುಂಪನ್ನು (ಅಪನಂಬಿಕೆ ತೋರುವವರು ಮತ್ತು ಅವಿಧೇಯರಾಗುವವರು) ಆದುಕೊಂಡಿದ್ದಾನೆ ಎಂಬದೆ. ನಾವು ಗುಂಪಿನಲ್ಲಿರುತ್ತೇವೆಂಬುದನ್ನು ನಾವೇ ನಿರ್ಧರಿಸುವವರಾಗಿದ್ದೇವೆ.

ಸರಿಯಾದ ಗುಂಪಿನಲ್ಲಿರಬೇಕೆಂದರೆ, ಒಬ್ಬನು ಸುವಾರ್ತೆಗೆ ವಿಧೇಯನಾಗುವ ಮೂಲಕ ಆರಂಭಿಸಬೇಕು, ಮತ್ತು ಬೆಳೆಯುವ ಮೂಲಕ ಹಾಗೂ ನಮ್ಮ ಸದ್ಗುಣಗಳಿಗೆ ನಂಬಿಕೆ, ಜ್ಞಾನ ಮತ್ತು ಇತ್ಯಾದಿಗಳನ್ನು ಕೂಡಿಸಿಕೊಳ್ಳುವ ಮೂಲಕ ದೇವರಲ್ಲಿ ಮುಂದುವರೆಯತಕ್ಕದ್ದು. ಈ ಯೋಚನೆಯನ್ನು ಕೊಲೊಸ್ಸೆ 3:12-17ರೊಂದಿಗೆ ಹೋಲಿಕೆ ಮಾಡಿರಿ, ಅದು ದೇವರಿಂದ ಆದುಕೊಳ್ಳಲ್ಪಟ್ಟವರು ಹೇಗೆ ನಡೆದುಕೊಳ್ಳಬೇಕು ಅಥವಾ ಜೀವಿಸಬೇಕು ಎಂಬುದರ ಒಂದು ಉತ್ತಮ ವರ್ಣನೆಯಾಗಿರುತ್ತದೆ. ದೇವರು ಅವರನ್ನು ಆದುಕೊಂಡಿದ್ದಾನೆಂಬುದನ್ನು ತಾನು ಬಲ್ಲವನಾಗಿದ್ದನೆಂದು ಪೌಲನು ಹೇಳುವದನ್ನು ಗಮನಿಸಿರಿ. ಅವರ ಪರಿವರ್ತನೆಯ ಬಗ್ಗೆಯಾಗಲಿ ಅಥವಾ ಆ ಕಾರಣದಿಂದ ದೇವರು ಅವರನ್ನು ಆದುಕೊಂಡಿದ್ದಾನೆಂಬ ವಾಸ್ತವಾಂಶದ ಬಗ್ಗೆಯಾಗಲಿ ಆತನಿಗೆ ಯಾವದೇ ಸಂಶಯವು ಇರಲಿಲ್ಲ. ಅವರು ದೇವರಿಂದ ಆದುಕೊಳ್ಳಲ್ಪಟ್ಟವರು ಎಂದು ಅಪೊಸ್ತಲನು ಹೇಳಿದ್ದನ್ನು ಕೇಳುವದು ಈ ನೂತನ ಕ್ರೈಸ್ತರಿಗೆ ಒಂದು ಪುನರಾಶ್ವಾಸನೆಯನ್ನು ಕೊಡುವಂತಿತ್ತು.

## ಥೆಸಲೋನಿಕದವರು ಆದುಕೊಂಡವರೆಂಬದರ ಖಚಿತತೆ (1:5-7)

**[5]ನಾವು ಸಾರಿದ ಸುವಾರ್ತೆಯು ನಿಮ್ಮಲ್ಲಿ ಬರೀ ಮಾತಾಗಿ ಬಾರದೆ ಶಕ್ತಿಯೊಡನೆಯೂ ಪವಿತ್ರಾತ್ಮದೊಡನೆಯೂ ಬಹು ನಿಶ್ಚಯದೊಡನೆಯೂ ಬಂತೆಂನದನ್ನೂ ಬಲ್ಲೆವು. ನಾವು ನಿಮ್ಮಲ್ಲಿದ್ದು ನಿಮಗೋಸ್ಕರ ಎಂಥವರಾಗಿ ವರ್ತಿಸಿದೆವೆಂಬದನ್ನು ನೀವೂ ಬಲ್ಲಿರಿ. [6]ಇದಲ್ಲದೆ ನೀವು ಬಹಳ ಹಿಂಸೆಯನ್ನು ಅನುಭವಿಸಬೇಕಾಗಿದ್ದರೂ ಪವಿತ್ರಾತ್ಮನಿಂದುಂಟಾದ ಆನಂದದೊಡನೆ ದೇವರ ವಾಕ್ಯವನ್ನು ಅಂಗೀಕರಿಸಿ ನಮ್ಮನ್ನೂ ಕರ್ತನಾದ ಯೇಸುವನ್ನೂ ಅನುಸರಿಸುವವರಾದಿರಿ. [7]ಹೀಗೆ ಮಕೆದೋನ್ಯದಲ್ಲಿಯೂ ಆಖಾಯದಲ್ಲಿಯೂ ಕ್ರಿಸ್ತನನ್ನು ನಂಬುವವರೆಲ್ಲರಿಗೆ ಮಾದರಿಯಾದಿರಿ.**

**ವಚನ 5. ಸುವಾರ್ತೆ** ಎಂಬ ಪದದ ಅರ್ಥವು “ಶುಭವಾರ್ತೆ.” ಈ ಸಂದರ್ಭದಲ್ಲಿ, ಶುಭವಾರ್ತೆಯೆಂಬುದು ಕ್ರಿಸ್ತನ ಮೂಲಕವಾಗಿ ನಮ್ಮ ಪಾಪಗಳಿಂದ ರಕ್ಷಿಸಲ್ಪಟ್ಟವರಾಗಿರುವದರ ಸಾಧ್ಯತೆಯಾಗಿದೆ. ಹೀಗೆ, ಮೊಟ್ಟ ಮೊದಲನೆಯದಾಗಿ, ಈ ಸುವಾರ್ತೆಯು ದೇವರಿಗೆ ಸೇರಿದ್ದಾಗಿತ್ತು (2:8, 9), ಆದರೆ ಪೌಲ ಮತ್ತು ತಿಮೊಥೆಯರು ಅದನ್ನು ಅಂಗೀಕರಿಸಿಕೊಂಡಿದ್ದರು, ಅಭ್ಯಾಸಿಸಿದರು, ಮತ್ತು ಸಾರಿದರೆಂಬ ಅರ್ಥದಲ್ಲಿ ಅದು ಅವರಿಗೆ ಸಹ ಸೇರಿದ್ದಾಗಿತ್ತು. ಸುವಾರ್ತೆಯು ಅವರ ಜೀವನದ ಒಂದು ಅವಿಭಾಜ್ಯ ಭಾಗವಾಗಿತ್ತು. ಅದರಲ್ಲಿ ಮೂಲಭೂತ ಅಂಶಗಳು (1 ಕೊರಿಂಥ 15:1-11) ಇತರ ಎಲ್ಲಾ ನಿಜ ಬೋಧಕರಿಂದ ಸಾರಲ್ಪಡುತ್ತಿದ್ದ ಅದೇ ಅಂಶಗಳಂತೆಯೇ ಆಗಿದ್ದವು (ಅಪೊಸ್ತಲರ ಕೃತ್ಯಗಳು 2:22-36ರೊಂದಿಗೆ ಹೋಲಿಸಿರಿ). ಈ ಅಂಶಗಳು ಸ್ಪಷ್ಟವಾಗಿರುವ ಪ್ರಕಾರ, **ಮಾತಾಗಿ** ಸಾರಲ್ಪಟ್ಟವು; ಆದರೆ ಅವುಗಳನ್ನು ಸಾರುವಾಗ ಅವರ ಬೋಧನೆಯೊಡನೆ ಶಕ್ತಿಯು ಕೂಡಿರುತ್ತಿತ್ತು (ಅಪೊಸ್ತಲರ ಕೃತ್ಯಗಳು 17:1-9), ಎಷ್ಟರ ಮಟ್ಟಿಗೆಯೆಂದರೆ “ದೇವಭಕ್ತರಾದ ಗ್ರೀಕರಲ್ಲಿ ದೊಡ್ಡ ಗುಂಪು” ಮನವೊಲಿಸಲ್ಪಟ್ಟಿದ್ದರು. **ಶಕ್ತಿಯೊಡನೆಯೂ** ಎಂಬ ಪದಗುಚ್ಛವು ಗ್ರೀಕ್ ನ δύναμις (*dunamis*) ಎಂಬುದರಿಂದ ಅನುವಾದಿಸಲ್ಪಟ್ಟಿರುತ್ತದೆ ಮತ್ತು ಮಾತುಗಳ ಸಂದೇಶವೊಂದನ್ನು ಧರಿಸಿಕೊಂಡದ್ದು ಮಾತ್ರವಾಗಿರಲಿಲ್ಲ, ಆದರೆ ಗಮನಾರ್ಹವಾದ ರೀತಿಯಲ್ಲಿ, “ಶಕ್ತಿಯೊಡನೆ”, ಅಂದರೆ, ಸಂದೇಶವನ್ನು ಮೀರಿದ ದೈವಿಕ ವಾಸ್ತವಿಕಯಿಂದ ಕೂಡಿತ್ತು ಎಂಬ ಅರ್ಥವನ್ನು ಕೊಡುತ್ತದೆ.[5] ಹೀಗೆ ಶಕ್ತಿಯುತವಾಗಿ ಸಾರುವಂತೆ ದೇವರು ತಮಗೆ ಸಹಾಯ ಮಾಡಿದ ರೀತಿಯನ್ನು ಪೌಲನು ಸೂಚಿಸುತ್ತಿದ್ದಾನೆ. ಅವರ ಮಾತುಗಳು ಟೊಳ್ಳು ನಾದವನ್ನು ಮಾಡುವವುಗಳಾಗಿರಲಿಲ್ಲ, ಆದರೆ **ಪೂರ್ಣನಿಶ್ಚಯದೊಡನೆ** ಬಂದ ಶಬ್ದವನ್ನು ಘೋಷಿಸಿದವು. ಇದು ಸಹ **ಪವಿತ್ರಾತ್ಮನಿಗೆ** ಸಂಬಂಧ ಹೊಂದಿರುತ್ತದೆ, ಬಹುಶಃ ಸಾರುವ ವೇಳೆ ಪೌಲನು ಮಾಡಿದ ಅದ್ಭುತಕಾರ್ಯಗಳನ್ನು ಸೂಚಿಸುತ್ತದೆ, ಅದು ಸಾರಲ್ಪಟ್ಟ ವಾಕ್ಯದಲ್ಲಿ ದೇವರ ಪ್ರಸನ್ನತೆಯ ಇರುವಿಕೆಯನ್ನು ದೃಢಪಡಿಸಿತ್ತು (ನೋಡಿರಿ 1 ಕೊರಿಂಥ 2:4, 5; 2 ಕೊರಿಂಥ 12:12; ಇಬ್ರಿಯ 2:1-4).

ನಂತರ, ತಾವು ಥೆಸಲೋನಿಕದವರ ಸಂಗಡ ಇರುವ ವೇಳೆ ಹೇಗೆ ವರ್ತಿಸಿದರೆಂಬುದನ್ನು ಆತನು ಸೂಚಿಸಿ ಹೇಳುತ್ತಾನೆ. ಅವರು [ಅವರಲ್ಲಿದ್ದು

ಅವರಿಗೋಸ್ಕರ] **ಎಂಥವರಾಗಿ ವರ್ತಿಸಿದರೆಂಬುದನ್ನು** ಸಹೋದರರು ಬಲ್ಲವರಾಗಿದ್ದರೆಂಬ ದಾಗಿ ಪೌಲನು ಹೇಳುತ್ತಾನೆಂಬುದನ್ನು ಗಮನಿಸತಕ್ಕದ್ದು. ಇದರಲ್ಲಿ ಒಂದು ಸ್ವ-ಸಮರ್ಥನೆಯ ಒಂದು ವಿಷಯವಿದ್ದು, ಅದು 2ನೇ ಅಧ್ಯಾಯದಲ್ಲಿ ಇನ್ನಷ್ಟು ಹೆಚ್ಚು ವಿಸ್ತಾರವಾಗುತ್ತದೆ. ಪೌಲ ಮತ್ತು ಆತನ ಜೊತೆಗೆಲಸದವರು ಸ್ವಾರ್ಥ ಆಸಕ್ತಿಗಳನ್ನು ಸಾಧಿಸಿಕೊಳ್ಳಲು ಕೆಲಸ ಮಾಡಿರಲಿಲ್ಲ; ಬದಲಾಗಿ, ಅವರು ಎಲ್ಲವನ್ನೂ **ಅವರಿಗೋಸ್ಕರ** ಮಾಡಿದ್ದರು. ಅವರ ಜೀವಿತಗಳು ಖಂಡಿತವಾಗಿಯೂ ಆ ಕಾಲದ ಪರ್ಯಟನ ಮಾಡುತ್ತಿದ್ದ ಬೋಧಕರ ಜೀವಿತಗಳಿಗೆ ಸಂಪೂರ್ಣ ತದ್ವಿರುದ್ಧವಾಗಿದ್ದವು. ಆದುದರಿಂದ, ಅವರು ಆದುಕೊಳ್ಳಲ್ಪಟ್ಟವರು ಎಂಬದಾಗಿ ಆತನಿಗಿದ್ದ ಖಚಿತತೆಯು ಸ್ವಲ್ಪ ಮಟ್ಟಿಗೆ ನೈತಿಕವಾಗಿ ಶುದ್ಧ ಮತ್ತು ಪ್ರಾಮಾಣಿಕರಾದ ವ್ಯಕ್ತಿಗಳು ಪವಿತ್ರಾತ್ಮನಿಂದ ಬೆಂಬಲಿತ ಸಂದೇಶವನ್ನು ಸಾರಿದ್ದರು ಎಂಬ ವಾಸ್ತವಾಂಶದಿಂದ ಬಂದದ್ದಾಗಿತ್ತು. ಹೇಗೂ, ಆತನು ಆ ಖಚಿತತೆಯನ್ನು ಹೊಂದಿರುವದಕ್ಕೆ ಇನ್ನೊಂದು ಕಾರಣವಿತ್ತು: ಯಾವದೆಂದರೆ, ಥೆಸಲೋನಿಕದವರು ಸಂದೇಶವನ್ನು ಸ್ವೀಕರಿಸಿಕೊಂಡ ರೀತಿಯೇ (ನೋಡಿರಿ ವ. 6).

**ವಚನ 6. ಅನುಸರಿಸುವವರು** (μιμητής, *mimētēs*) ಎಂದರೆ ಮತ್ತೊಬ್ಬನನ್ನು ದೃಷ್ಟಿಸುವವರು, ಆ ವ್ಯಕ್ತಿಯನ್ನು ತಮ್ಮ ಮಾದರಿಯನ್ನಾಗಿ ಬಳಸಿಕೊಳ್ಳಲು ಪ್ರಯತ್ನಿಸುವ ಜನರಾಗಿರುತ್ತಾರೆ. ತಾನು ಕರ್ತನಿಗಾಗಿ ಜೀವಿಸುವದಕ್ಕೆ ಪ್ರಾಮಾಣಿಕವಾಗಿ ಶ್ರಮಿಸುವವನಾಗಿದ್ದಾನೆಂಬುದನ್ನು ಪೌಲನು ಬಲ್ಲವನಾಗಿದ್ದರಿಂದ (1 ಕೊರಿಂಥ 4:4), ಆತನು ತನ್ನನ್ನು ಅನುಸರಿಸುವವರಾಗಬೇಕೆಂದು (1 ಕೊರಿಂಥ 11:1) ಮತ್ತು **ಕರ್ತನನ್ನು** ಬೇರೆಯವರನ್ನು ಬೇಡಿಕೊಳ್ಳಲು ಶಕ್ತನಾಗಿದ್ದನು. ಥೆಸಲೋನಿಕದವರು ಪೌಲ ಹಾಗೂ ಆತನ ಸಹಚರರನ್ನು ಅನುಕರಣೆ ಮಾಡುವದಕ್ಕೆ ಪ್ರಯತ್ನಿಸಿದ್ದರು; ಆದರೆ ಅವರನ್ನು ಅನುಸರಿಸುವದಕ್ಕೆ ಪ್ರಯತ್ನಿಸುವವರಾಗಿ ಅವರು ವಾಸ್ತವಿಕದಲ್ಲಿ "ಕರ್ತನನ್ನೇ" ಅನುಸರಿಸುವವರಾಗಿದ್ದರು, ಯಾಕೆಂದರೆ ಪೌಲನು ಜಾಗರೂಕತೆಯಿಂದ ಕರ್ತನ ಮಾದರಿಯನ್ನು ಹಿಂಬಾಲಿಸುತ್ತಿದ್ದನು (1 ಕೊರಿಂಥ 11:1; 4:16). ನಾವು ಪರಿವರ್ತನೆಗೆ ನಡಿಸಿದವರು ಇಂದು ಸ್ವಾಭಾವಿಕವಾಗಿಯೇ ನಮ್ಮನ್ನು ಅನುಕರಣ ಮಾಡುವವರಾಗಿದ್ದಾರೆ. ಅವರು ನಮ್ಮಲ್ಲಿ ರಾಜ್ಯಕ್ಕೆ ಆದ್ಯತೆ ಕೊಡಲ್ಪಡುವದನ್ನು ಮತ್ತು ಆತನಿಗೋಸ್ಕರ ತ್ಯಾಗ ಮಾಡುವದನ್ನು ಕಾಣುವರೋ, ಅಥವಾ ನಮ್ಮ ಬೋಧನೆ ಬರೀ "ಮಾತಿನಿಂದ" ಮಾತ್ರವೇ ಆಗಿರುತ್ತದೆಂಬುದನ್ನು, ಲೋಕದ ಆಸಕ್ತಿಗಳಿಗೇ ಮೊದಲ ಆದ್ಯತೆಯಿರುತ್ತದೆ, ತ್ಯಾಗ ಎಂಬ ಪದದ ಅರ್ಥವೇ ನಮಗೆ ತಿಳಿಯದು ಎಂಬುದಾಗಿ ಗಮನಿಸುವರೋ? ಕ್ರೈಸ್ತತ್ವದ ನಿಜವಾದ ಬೋಧಕರು ತಮ್ಮ ಮಾತುಗಳಿಂದ ಮಾತ್ರವಲ್ಲದೆ ತಮ್ಮ ಜೀವಿತಗಳಿಂದ ಸಹ ಬೋಧಿಸುವವರಾಗಿರಬೇಕು.

ಈ ಸಹೋದರರು **ಬಹಳ ಹಿಂಸೆಯನ್ನು ಅನುಭವಿಸಬೇಕಾಗಿದ್ದರೂ** ಮುಂದುವರೆದಿದ್ದರು, ಪ್ರಾಯಶಃ ಅವರಿಗೆ ಅನುಸರಿಸುವದಕ್ಕೆ ಉತ್ತಮ ಮಾದರಿಗಳಿದ್ದರು ಎಂಬ ಕಾರಣಕ್ಕಾಗಿಯೇ ಆಗಿತ್ತು. ಈ ಪದಗುಚ್ಛವು ಕಠಿಣವಾದ ಸಂಕಷ್ಟವನ್ನು ಸೂಚಿಸುತ್ತದೆ. ಅವರ ಹಿಂಸೆಯ ಮೂಲವು ಬಹುಶಃ ಯೆಹೂದ್ಯರು (ಅಪೊಸ್ತಲರ ಕೃತ್ಯಗಳು 17:5-9) ಮತ್ತು, ಬಹಳ ಸಂಭವನೀಯವಾಗಿ, ಜೊತೆಯ ಗ್ರೀಕ್ ರೇ ಆಗಿದ್ದಿರಬಹುದಾಗಿದೆ

(2:14; ನೋಡಿರಿ 2 ತಿಮೊಥೆ 3:12).

**ಪವಿತ್ರಾತ್ಮನಿಂದುಂಟಾದ ಆನಂದ** ಎಂಬುದು ಒಬ್ಬನು ದೇವರ ಸಂದೇಶಕ್ಕೆ ವಿಧೇಯತೆಯನ್ನು ತೋರಿಸುವವನಾಗಿ ತನ್ನ ಹೃದಯವನ್ನು ತೆರೆಯುವಾಗ, ಪವಿತ್ರಾತ್ಮನು ಯಾವದೋ ಒಂದು ವಿಧದಲ್ಲಿ ಆತನಿಗೆ ಆನಂದವನ್ನು ಕೊಡುತ್ತಾನೆ ಎಂಬದನ್ನು ಸೂಚಿಸುತ್ತದೆ. ವಾಸ್ತವದಲ್ಲಿ, ಅದು ನಾವು ನಮ್ಮ ಸೃಷ್ಟಿಕರ್ತನೊಂದಿಗೆ ಸಂಧಾನಪಡಿಸಲ್ಪಟ್ಟಿದ್ದೇವೆ ಮತ್ತು ಎದುರಾಗುವಂಥ ಯಾವದನ್ನೇ ನಾವು ಎದುರಿಸಬಲ್ಲೆವು ಎಂಬದನ್ನು ತಿಳುಕೊಳ್ಳುವದರಿಂದ ಬರುವ ಆನಂದವಾಗಿರುತ್ತದೆ. ಹೊಸದಾಗಿ ಪರಿವರ್ತನೆಗೊಂಡವರು ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿ ಅನುಭವಿಸಿದ ಆನಂದವನ್ನು ಗಮನಿಸಿರಿ (ಅಪೊಸ್ತಲರ ಕೃತ್ಯಗಳು 8:39; 16:34).

ಈ ಆನಂದವು ಹಿಂಸೆಯಿಂದ ಅವರಿಗುಂಟಾದ ವೇದನೆಯ ಮೇಲೆ ಮೇಲುಗೈ ಸಾಧಿಸಿತ್ತು. ಜೀವನದ ಯಾವದೇ ಬಾಹ್ಯ ಪರಿಸ್ಥಿಗಿಂತಲೂ ಅವರ ಆಂತರ್ಯದಲ್ಲಿನ ಪ್ರಶಾಂತತೆಯು ಅತ್ಯಧಿಕವಾಗಿತ್ತು (ರೋಮಾ 8:18ರೊಂದಿಗೆ ಹೋಲಿಸಿರಿ).

ಅವರು ಸಂದೇಶವನ್ನು ಸ್ವೀಕರಿಸಿಕೊಂಡಿದ್ದ ವಿಧವು, ಜೊತೆಗೆ ಅವರ ಹೃದಯಗಳಲ್ಲಿ ತತ್ಪರಿಣಾಮವಾಗಿ ಪವಿತ್ರಾತ್ಮನು ನೀಡಿದ ಆನಂದವು, ಅವರು ಆದುಕೊಳ್ಳಲ್ಪಟ್ಟವರೆಂದು ಪೌಲನು ನಂಬುವದಕ್ಕೆ ಮತ್ತೊಂದು ಕಾರಣವಾಯಿತು.

**ವಚನ 7.** ಪೌಲನ ಕಾಲದಲ್ಲಿ, ಮಕೆದೋನ್ಯ ಮತ್ತು ಆಖಾಯಗಳು ರೋಮನ್ ಸಾಮ್ರಾಜ್ಯದ ಎರಡು ಪ್ರಾಂತ್ಯಗಳಾಗಿದ್ದವು. **ಆಖಾಯವು** ಕೊರಿಂಥ ಮತ್ತು ಅಥೇನೆ ಸೇರಿದಂತೆ, ಇಂದು ನಾವು ಗ್ರೀಸ್ ಎಂದು ಕರೆಯಲ್ಪಡುವ ದೇಶದ ದಕ್ಷಿಣ ಭಾಗವನ್ನೊಳಗೊಂಡಿತ್ತು. **ಮಕೆದೋನ್ಯವು** ಮುಖ್ಯವಾಗಿ ಬೆರೋಯ, ಫಿಲಿಪ್ಪಿ, ಮತ್ತು ಥೆಸಲೋನಿಕಾ ಸೇರಿದಂತೆ ಇಂದು ನಾವು ಗ್ರೀಸ್ ಎಂದು ಕರೆಯಲ್ಪಡುವ ದೇಶದ ಉತ್ತರ ಭಾಗವನ್ನೊಳಗೊಂಡಿತ್ತು. ಥೆಸಲೋನಿಕದವರು ಮೊದಲು ತನ್ನ ಮತ್ತು ಆತನ ಜೊತೆಗೆಲಸದವರನ್ನು ಅನುಸರಿಸುವವರಾಗಿದ್ದರೆಂದು (ವ. 6), ಮತ್ತು ನಂತರ ಅವರು ಸ್ವತಃ ಹತ್ತಿರದ ಪ್ರಾಂತ್ಯಗಳಲ್ಲಿದ್ದ ಬೇರೆ ವಿಶ್ವಾಸಿಗಳಿಗೆ ಸ್ವತಃ ಒಂದು "ಆದರ್ಶ" (NIV) ಅಥವಾ **ಮಾದರಿ** ಆದರು ಎಂಬದಾಗಿ ಪೌಲನು ಹೇಳುತ್ತಾನೆ. "ಮಾದರಿ" ಎಂಬುದು τύπος (*tupos*) ಎಂಬದರಿಂದ ಬಂದಿರುತ್ತದೆ, ಅದು ಒಂದು ಗುದ್ದಿನಿಂದ ಮೂಡಿಸಲ್ಪಟ್ಟ ಅಚ್ಚು, ಯೋಹಾನ 20:25ರಲ್ಲಿರುವಂತೆ ಒಂದು ಗುರುತು, ಒಂದು ಉದಾಹರಣೆ, ಅಥವಾ ಒಂದು ನಮೂನೆ ಎಂದರ್ಥವನ್ನು ಕೊಡುತ್ತದೆ.[6] ಈಗಾಗಲೇ ಗಮನಿಸಿರುವ ಪ್ರಕಾರ, ಪೌಲನು ಕ್ರಿಸ್ತನನ್ನು ಅನುಸರಿಸುವ ರೀತಿಯಲ್ಲಿಯೇ ಅವರು ಪೌಲನನ್ನು ಅನುಸರಿಸುವವರಾಗಿದ್ದರು (1 ಕೊರಿಂಥ 11:1).

ಒಬ್ಬ ವ್ಯಕ್ತಿಯು ಎಷ್ಟರ ಮಟ್ಟಿಗೆ ಕರ್ತನನ್ನು ಅನುಸರಿಸುತ್ತಾನೆ ಮತ್ತು ಆತನ ನಂಬಿಗಸ್ತ ಸೇವಕರು ಎಷ್ಟರ ಮಟ್ಟಿಗೆ ಒಂದು ಮಾದರಿಯಾಗಿರುತ್ತಾರೋ ಅದು ಬೇರೆಯವರನ್ನು ಅಷ್ಟರ ಮಟ್ಟಿಗೆ ಪ್ರೋತ್ಸಾಹಿಸುವದು ಮತ್ತು ಪ್ರಭಾವಿಸುವದು. ತಮ್ಮ ಮಾದರಿಯು ಬೇರೆಯವರನ್ನು ಎಷ್ಟೊಂದು ಪ್ರೋತ್ಸಾಹಗೊಳಿಸಿತ್ತೆಂಬುದನ್ನು ಥೆಸಲೋನಿಕದವರು ಗ್ರಹಿಸಿಕೊಂಡಿರಲಿಲ್ಲ, ಆದರೆ ಒಳ್ಳೇದಕ್ಕಾಗಿದದರೂ ಸರಿಯೇ *ಅಥವಾ*

ಕೆಟ್ಟದ್ದಕ್ಕಾದರೂ ಸರಿಯೇ, ಜನರು ತೋರುವ ಮಾದರಿಗಳು ಯಾವಾಗಲೂ ಬೇರೆಯವರನ್ನು ಪ್ರಭಾವಿತಗೊಳಿಸುವವು. ಅವರು ತೋರಿದ ಮಾದರಿಯು ಈಗಾಗಲೇ ಮಕೆದೋನ್ಯ ಹಾಗೂ ಆಖಾಯದಲ್ಲೆಲ್ಲಾ ನೂರಾರು ವಿಶ್ವಾಸಿಗಳ ಮೇಲೆ ಪ್ರಭಾವವನ್ನು ಬೀರಿತ್ತು. ಹೊಸ ಒಡಂಬಡಿಕೆಯಲ್ಲಿ ಬೇರೆಯವರಿಗೆ ಒಂದು ಮಾದರಿಯಾಗಿರುತ್ತದೆಂದು ಹೇಳಲಾಗಿರುವ ಏಕೈಕ ಸಭೆಯು ಇದೇ ಆಗಿರುತ್ತದೆ. ಖಂಡಿತವಾಗಿಯೂ, ಈ **ನಂಬುವವರೆಲ್ಲರು** ಸುವಾರ್ತೆಗೆ ವಿಧೇಯರಾದವರಾಗಿದ್ದರು. ಅಪೊಸ್ತಲರ ಕೃತ್ಯಗಳು 2:41ರಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡವರು 44ನೇ ವಚನದಲ್ಲಿ ಸಹ "ನಂಬಿದವರೆಲ್ಲರು" (ವಿಶ್ವಾಸಿಗಳು) ಎಂದು ಕರೆಯಲ್ಪಟ್ಟಿದ್ದಾರೆ.

## ಥೆಸಲೋನಿಕದವರ ಮಾದರಿಯ ಪ್ರಭಾವ (1:8-10)

**[8]ಕರ್ತನ ವಾಕ್ಯವು ನಿಮ್ಮಿಂದಲೇ ಮಕೆದೋನ್ಯದಲ್ಲಿಯೂ ಆಖಾಯದಲ್ಲಿಯೂ ಘೋಷಿತವಾದದ್ದಲ್ಲದೆ ದೇವರ ಮೇಲೆ ನೀವು ಇಟ್ಟಿರುವ ನಂಬಿಕೆಯು ಎಲ್ಲಾ ಸ್ಥಳಗಳಲ್ಲಿಯೂ ಪ್ರಸಿದ್ಧವಾಯಿತು; ಆದದರಿಂದ ಆ ವಿಷಯದಲ್ಲಿ ನಾವು ಏನೂ ಹೇಳಬೇಕಾದದ್ದಿಲ್ಲ. [9]ನಾವು ನಿಮ್ಮಲ್ಲಿಗೆ ಬಂದಾಗ ನೀವು ಎಂಥ ಮನಸ್ಸಿನಿಂದ ನಮ್ಮ ಬೋಧನೆಯನ್ನು ಕೇಳಿದಿರೋ ಅದನ್ನು ಕುರಿತು ಅಲ್ಲಿಯ ಜನರು ತಾವೇ ಹೇಳುತ್ತಾರೆ. ಅದು ಮಾತ್ರವಲ್ಲದೆ ನೀವು ವಿಗ್ರಹಗಳನ್ನು ಬಿಟ್ಟುಬಿಟ್ಟು ದೇವರ ಕಡೆಗೆ ತಿರುಗಿಕೊಂಡು ಜೀವವುಳ್ಳ ಸತ್ಯದೇವರನ್ನು ಸೇವಿಸುವವರಾದಿರೆಂತಲೂ [10]ಆತನು ಸತ್ತವರೊಳಗಿಂದ ಎಬ್ಬಿಸಿದಂಥ ಆಕಾಶದೊಳಗಿಂದ ಬರುವಂಥ ಆತನ ಕುಮಾರನನ್ನು ಎದುರುನೋಡುವವರಾದಿರೆಂತಲೂ ತಿಳಿಸುತ್ತಾರೆ. ಆ ಯೇಸುವು ಮುಂದೆ ಬರುವ ದೈವಕೋಪದಿಂದ ನಮ್ಮನ್ನು ತಪ್ಪಿಸುವಾತನು.**

**ವಚನ 8.** ಈ ವಚನವು, 9 ಮತ್ತು 10ನೇ ವಚನಗಳ ಜೊತೆಯಾಗಿ, ಥೆಸಲೋನಿಕದವರು ಯಾವ ಅರ್ಥದಲ್ಲಿ ಒಂದು "ಮಾದರಿಯಾಗಿದ್ದರು" (ವ. 7) ಎಂಬುದನ್ನು ನಮಗೆ ತಿಳಿಸುತ್ತದೆ. ಹೀಗೆ ಅವರ ಮಾದರಿಯ ಕುರಿತ ಯೋಚನೆಯು ಅಧ್ಯಾಯದ ಈ ಕಡೇ ವಚನಗಳಲ್ಲಿ ಮುಂದುವರೆಯುತ್ತದೆ. **ಕರ್ತನ ವಾಕ್ಯವು** (ಸುವಾರ್ತೆಯು), ಮಾತ್ರವಲ್ಲದೆ ಅವರ **ದೇವರ ಮೇಲೆ ನೀವು ಇಟ್ಟಿರುವ ನಂಬಿಕೆ** (*πίστις*, *pistis*; ಆತನ ಸಂದೇಶವನ್ನು ತಮ್ಮ ಮಾನದಂಡವನ್ನಾಗಿ ಅಂಗೀಕರಿಸಿಕೊಳ್ಳುವಿಕೆ) ಸಹ **ಘೋಷಿತವಾದದ್ದಾಗಿತ್ತು**. ಅವರ ಈಗಿನ ನಂಬಿಕೆಯ ಲಕ್ಷ್ಯವು ವಿಗ್ರಹಗಳಲ್ಲ, ಆದರೆ ಸತ್ಯದೇವರ ಕಡೆಗೆ ಆಗಿತ್ತು.

"ಘೋಷಿತವಾದದ್ದು" ಎಂಬುದು ಮರುದ್ವನಿಗೆ ಅಥವಾ ಪ್ರತಿಧ್ವನಿಯನ್ನುಂಟು ಮಾಡುವ ಒಂದು ಗುಡುಗು ಅಥವಾ ಒಂದು ತುತ್ತೂರಿಯ ಘೋಷದಂತಹ ಚಿತ್ರಣವನ್ನು ಬಣ್ಣಿಸುವದಾಗಿದೆ. ಬಳಸಲ್ಪಟ್ಟಿರುವ ಪರಿಪೂರ್ಣ ಕ್ರಿಯಾರೂಪ ಪದವು ಸೂಚಿಸುವದೇನೆಂದರೆ ಅದು ಘೋಷಿಸಲ್ಪಟ್ಟಿತ್ತು ಮತ್ತು ಈಗಲೂ ಘೋಷಿಸಲ್ಪಡುತ್ತಿತ್ತು ಎಂಬುದೆ. ಅಂದರೆ, ಥೆಸಲೋನಿಕದವರ ಸಭೆಯು ಒಂದು ಧ್ವನಿ ಫಲಕದಂತಾಗಿತ್ತು. ಪಟ್ಟಣವು ನಿರಂತರವಾದ ವಾಣಿಜ್ಯ ವಹಿವಾಟುಗಳನ್ನೊಳಗೊಂಡ ಒಂದು ಅತ್ಯುನ್ನತ

ಬಂದರು ಹೊಂದಿತ್ತು ಮತ್ತು ಪೂರ್ವ ಹಾಗೂ ಪಶ್ಚಿಮಕ್ಕೆ ಸಾಗುವ ಪ್ರಧಾನ ರೋಮನ್ ರಸ್ತೆಯಾಗಿದ್ದ Egnatian ಮಾರ್ಗದಲ್ಲಿತ್ತೆಂಬ ವಾಸ್ತವಾಂಶದ ಕಾರಣದಿಂದ ಇದು ಸಂಭವಿಸುವ ಸಾಧ್ಯತೆಯು ಅಧಿಕವಾಗಿತ್ತು. ಹೀಗೆ ಅವರಿಂದಲೇ ಸುವಾರ್ತೆಯು ಮತ್ತು ಅವರು ಅದನ್ನು ಅಂಗೀಕರಿಸಿಕೊಂಡಿದ್ದಾರೆಂಬ ಸುದ್ದಿಯು **ಮಕೆದೋನ್ಯ**, ಅಲ್ಲಿಂದ ಕೆಳಕ್ಕೆ **ಆಖಾಯ**, ಮತ್ತು **ಎಲ್ಲಾ ಸ್ಥಳಗಳಲ್ಲಿಯೂ** ("ಎಲ್ಲೆಲ್ಲಿಯೂ"; NIV) ಹರಡಿಸಲ್ಪಟ್ಟಿತ್ತು.

"ಎಲ್ಲಾ ಸ್ಥಳಗಳಲ್ಲಿಯೂ" ಎಂಬುದು ಬಹುಶಃ ಒಂದು ಅತಿಶಯೋಕ್ತಿಯಾಗಿತ್ತು-ಹೇಗೂ, ವಂಚಿಸುವ ಉದ್ದೇಶದಿಂದ ಬಳಸಲ್ಪಡದಂಥ ಒಂದು ಉತ್ಪ್ರೇಕ್ಷೆಯಾಗಿತ್ತು. ಸಂದೇಶವು ಎಷ್ಟೊಂದು ದೂರಕ್ಕೆ ಕೊಂಡೊಯ್ಯಲ್ಪಟ್ಟಿತ್ತೆಂದರೆ ಪೌಲ ಮತ್ತು ಆತನ ಸಹಚರರು ಅದರ ವಿಷಯದಲ್ಲಿ **ಏನೂ ಹೇಳಬೇಕಾದದ್ದಿರಲಿಲ್ಲ.** ಅವರು ಬಹಳಷ್ಟು ಭಾಗದಲ್ಲಿ, ಎದುರ್ಗೊಂಡ ಜನರು ಆಗಲೇ ಸುದ್ದಿಯನ್ನು ಕೇಳಿದವರಾಗಿದ್ದರು. ಸಂದೇಶವು ಕನಿಷ್ಠ ಎರಡು ದಾರಿಗಳಲ್ಲಿ ಹರಡಿತ್ತು: ಮೊದಲನೆಯದಾಗಿ, ಜನರು ಆ ಸ್ಥಳವನ್ನು ಹಾದು ಹೋಗುವ ವೇಳೆ ಅವರಿಂದ ಬೋಧಿಸಲ್ಪಟ್ಟು ಪರಿವರ್ತನೆಗೊಳಿಸಲ್ಪಡುವ ಮೂಲಕ, ಮತ್ತು ಎರಡನೆಯದಾಗಿ, ತಮ್ಮ ಸದಸ್ಯರನ್ನು ಸಾರುವದಕ್ಕೆ ಕಳುಹಿಸಿ ಕೊಡುವ ಅವರ ಪ್ರಯಾಸದ ಮೂಲಕ.

ಸುವಾರ್ತೆಯು ನಮ್ಮಿಂದ ಘೋಷಿತಗೊಳ್ಳುವಂತೆ ಮತ್ತು ನಮ್ಮ ನಂಬಿಕೆಯು ಪ್ರಸಿದ್ಧಗೊಳ್ಳುವಂತೆ ನಾವು ಥೆಸಲೋನಿಕದವರ "ಮಾದರಿ"ಯನ್ನು ಅನುಸರಿಸುವ ಅಗತ್ಯವಿರುತ್ತದೋ?

**ವಚನ 9.** ಈ ವಚನವು, 10ನೇ ವಚನದ ಜೊತೆಗೂಡಿ, ಪೌಲ ಹಾಗೂ ಆತನ ಸಹಚರರು ಇತರರಿಂದ ಆಗಾಗ್ಗೆ ಕೇಳಿಸಿಕೊಳ್ಳುತ್ತಲಿದ್ದ ಕಥೆಯ ಪ್ರಮುಖ ಅಂಶಗಳನ್ನು ನೀಡುತ್ತದೆ. ಅವರು ಅವರಿಗೆ ಒಂದು ನಿಜವಾದ **ಸತ್ಕಾರ**, ಅಥವಾ "ಸ್ವಾಗತ"ವನ್ನು (RSV) (reception) ಕೊಟ್ಟಿದ್ದರು.

ಥೆಸಲೋನಿಕದವರು **ತಿರುಗಿಕೊಂಡಿದ್ದರು.** ಅದೇ ಪದವನ್ನು NIVಯು "ಬದಲಾಗಿದ್ದರು" ಎಂದು ಅನುವಾದಿಸುತ್ತದೆ ಮತ್ತು ಈ ಬದಲಾವಣೆಯಿಲ್ಲದಿದ್ದಲ್ಲಿ ಒಬ್ಬ ವ್ಯಕ್ತಿಯು "ಪರಲೋಕರಾಜ್ಯದ" ಭಾಗವಾಗಿರುವದಕ್ಕೆ ಸಾಧ್ಯವಿಲ್ಲ (ಮತ್ತಾಯ 18:3). ನಂಬಿಕೆ ಮತ್ತು ಪಶ್ಚಾತ್ತಾಪ, ಅಥವಾ ಮನಸ್ಸಿನ ಬದಲಾವಣೆಯು, ಅವರ ಜೀವನ ಶೈಲಿಯಲ್ಲಿ ಮಾರ್ಪಾಡನ್ನುಂಟು ಮಾಡಿತ್ತು. "ತಿರುಗಿಕೊಂಡು" ಎಂಬುದು ἐπιστρέφω (*epistrephō*) ಎಂಬ ಪದದಿಂದ ಬಂದದ್ದಾಗಿದ್ದು, ಅದು ತಿರುಗಿಕೊಳ್ಳುವದು ಎಂಬದಕ್ಕೆ ಬಳಸುವ ಒಂದು ಹಳೇ ಕ್ರಿಯಾಪದವಾಗಿರುತ್ತದೆ. ಅದು ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿ ಸಾಮಾನ್ಯವಾಗಿ ದೇವರ ಕಡೆಗೆ "ತಿರುಗಿಕೊಳ್ಳುವದು" ಎಂಬುದನ್ನು ವ್ಯಕ್ತಪಡಿಸುವದಕ್ಕೆ ಬಳಸಲ್ಪಟ್ಟಿರುತ್ತದೆ (ನೋಡಿರಿ ಅಪೊಸ್ತಲರ ಕೃತ್ಯಗಳು 3:19).[7]

ಆ ಬದಲಾವಣೆಯು **ವಿಗ್ರಹಗಳನ್ನು,** ಅಥವಾ ಪ್ರತಿಮೆಗಳನ್ನು **ಬಿಟ್ಟುಬಿಟ್ಟಂಥ** ಬದಲಾವಣೆಯಾಗಿತ್ತು, ಅವುಗಳು ದೌಸ್ಯದೇವರು, ಅಪೊಲ್ಲೋ, ಮತ್ತು ಅರ್ತೆಮಾದೇವಿ (ರೋಮನ್ ದೇವತೆಯಾದ ಡಯಾನಾಳಿಗೆ ಸರಿಸಾಟಿಯಾದವಳು) ಪ್ರತಿನಿಧಿಸುವವು ಗಳೆಂದು ಭಾವಿಸಲಾಗಿತ್ತು; ಆದರೆ ದೇವರು ಕೇವಲ ಕಲ್ಪನೆಯಲ್ಲಿ ಮಾತ್ರವೇ ಇದ್ದವಾದ್ದರಿಂದ, ನಿಜವಾಗಿಯೂ ಆರಾಧಿಸಲ್ಪಡುತ್ತಿದ್ದದ್ದು ಕೇವಲ ಮೂರ್ತಿಗಳೇ ಆಗಿದ್ದವು.

ಹೆಚ್ಚುಕಡಿಮೆ ಮಕೆದೋನ್ಯದಲ್ಲಿನ ಎಲ್ಲಾ ರಜೆ ದಿನಗಳು ಹಾಗೂ ಹಬ್ಬಗಳು ಅಂಥ ದೇವರ ಸುತ್ತ ಕಟ್ಟಲ್ಪಟ್ಟವುಗಳಾಗಿದ್ದವು, ಅವುಗಳ ದೇವಾಲಯವು ಸಾಮಾಜಿಕ ಜೀವನದ ಕೇಂದ್ರವಾಗಿದ್ದವು. ಈ ಹೊಸ ಕ್ರೈಸ್ತರು ಅಂಥ ಚಟುವಟಿಕೆಗಳಿಗೋಸ್ಕರ ತಮ್ಮ ನೆರೆಯವರ ಸಂಗಡ ಹೋಗುವದನ್ನು ಬಿಟ್ಟು ಬಿಡಬೇಕಾಯಿತು. ಅವರು ಒಂದು ಸಕಾರಾತ್ಮಕ ದಿಕ್ಕಿನ ಕಡೆಗೆ, ಇನ್ನೂ ಅಧಿಕ ಉತ್ತಮವಾದದ್ದರ-**ಜೀವವುಳ್ಳ ಸತ್ಯದೇವರ-** ಕಡೆಗೆ ತಿರುಗಿ ಕೊಂಡರು, ಆತನು ಸತ್ತವನೂ ಅತ್ತಿತ್ತ ಹೊತ್ತುಕೊಂಡು ಸುತ್ತಾಡಿಸಬೇಕಾಗಿದ್ದಂಥ ನಿರ್ಜೀವ ವಿಗ್ರಹಗಳಂತಲ್ಲದವನು ಆಗಿದ್ದನು (ಯೆಹೋಶುವ 3:10; ಯೆರೆಮೀಯ 10:1-7). ದೇವರು, ಊಹೆಯ ಕಟ್ಟುಕತೆಗಳಾಗಿದ್ದ ವಿಗ್ರಹಗಳಿಗೆ ಹೋಲಿಸಿದರೆ, "ಸತ್ಯ," ಅಥವಾ ವಾಸ್ತವವಾದವನು ಆಗಿದ್ದನು (1 ಕೊರಿಂಥ 8:4-6).

ಥೆಸಲೋನಿಕದವರು ಈ ಸತ್ಯದೇವರನ್ನು ಸೇವಿಸುವವರಾಗುವಂತೆ ಆತನ ಕಡೆಗೆ ತಿರುಗಿಕೊಂಡಿದ್ದರು. **ಸೇವಿಸುವವರಾದಿರಿ** ಎಂಬ ಭಾವಾರ್ಥವುಳ್ಳ δουλεύω (*douleuō*) ಎಂಬ ಗ್ರಿಕ್ ಪದದ ವಾಸ್ತವಿಕವಾದ ಅರ್ಥವು "ಒಬ್ಬ ದಾಸನಾಗಿ ಸೇವೆ ಮಾಡು" ಎಂದಾಗಿರುತ್ತದೆ, ಮತ್ತು ಅದು ನಿರಂತರವಾದ ಸೇವೆ ಆಗಿದೆ. ಕ್ರೈಸ್ತತ್ವವು ಈ ಭೂಮಿಯ ಮೇಲೆ ಒಬ್ಬನ ಉಳಿದ ಜೀವಿತವನ್ನೆಲ್ಲಾ ಸಂಪೂರ್ಣವಾಗಿ ಒಪ್ಪಿಸಿಕೊಳ್ಳುವದು ಎಂದರ್ಥವಾಗಿದೆ (ರೋಮಾ 6:15-18). ಸೇವೆಯ ವಿಷಯದಲ್ಲಿ ಯೇಸು ನಮಗೆ ಪರಿಪೂರ್ಣವಾದ ಮಾದರಿಯನ್ನು ತೋರಿಸಿದನು (ಮತ್ತಾಯ 20:28). ವಿಷಯವನ್ನು ಸರಿಯಾದ ದೃಷ್ಟಿಯಿಂದ ನೋಡುವದಾದರೆ, ನಮ್ಮ ಸೇವೆಯು ಆನಂದಕರವಾಗಿರುತ್ತದೆ.

**ವಚನ 10.** 9ನೇ ವಚನದಲ್ಲಿ, ಥೆಸಲೋನಿಕದವರು ಸೇವಿಸುವವರಾಗಿ ಕಾಣಿಸುತ್ತಾರೆ. ಇಲ್ಲಿ ಎದುರುನೋಡುತ್ತಿರುವವರಾಗಿ ಅದೇ ವೇಳೆಯಲ್ಲಿ ಸೇವೆಯನ್ನೂ ಮಾಡುವದನ್ನು ನೋಡುತ್ತೇವೆ. **ಎದುರುನೋಡು** ಎಂಬುದು ಗ್ರೀಕ್ ನ ἀναμένω (*anamenō*) ಎಂಬ ಪದದಿಂದ ಬಂದದ್ದು. ಅವರು ಯೇಸುವಿನ ಬರೋಣಕ್ಕೆ ಕಾಯುತ್ತಿದ್ದರು. *Anamenein* ಎಂಬುದು ಒಂದು ವರ್ತಮಾನ ಧಾತ್ವರ್ಥವಾಚಿ ಆಗಿರುತ್ತದೆ ಮತ್ತು ಆ ಕಾರಣದಿಂದ ಅದು ರೇಖಾತ್ಮಕವಾಗಿದೆ ಮತ್ತು "ಎದುರುನೋಡುತ್ತಲೇ ಇರುವದು"[8] ಎಂದರ್ಥವಾಗಿರುತ್ತದೆ ಎಂದು Robertson ಹೇಳುತ್ತಾನೆ. ಕ್ರೈಸ್ತರು ಆತನ ಪುನರಾಗಮನದ ಒಂದು "ಮುಂದುವರೆಯುವಂತ ಕಾಯುವಿಕೆ"ಯಲ್ಲಿ ತೊಡಗಿಸಿಕೊಂಡಿರುತ್ತಾರೆ.

ಈ ವಚನಗಳಲ್ಲಿ, ನಾವು ಬಹುಶಃ ಪೌಲನು ಅವರಿಗೆ ಬೋಧಿಸಿದ್ದಂಥ ಕೆಲವು ಪ್ರಧಾನ ಅಂಶಗಳ ಒಂದು ಪುನರಾವಲೋಕನವನ್ನು ಕಾಣುತ್ತೇವೆ. (ಇತರ ಅನ್ಯಜನರಿಗೆ ಮಾಡಿದ ಪ್ರಸಂಗಳಿಗಾಗಿ, ನೋಡಿರಿ ಅಪೊಸ್ತಲರ ಕೃತ್ಯಗಳು 14:15-17; 17:22-31.) ಯೇಸು ತಾನು ಹಿಂದಿರುಗುವನೆಂದು (ಯೋಹಾನ 14:3), ಮತ್ತು ಆತನ ಬರೋಣವು ವಿಧೇಯರಾಗುವವರಿಗೆ ಒಂದು ಮಹಾ ಆಶೀರ್ವಾದವಾಗಿರುವದೆಂದು ವಾಗ್ದಾನ ಮಾಡುತ್ತಾನೆ, ಆದ್ದರಿಂದ ಅವರು ಆತನಿಗೋಸ್ಕರ "ಕಾತರದಿಂದ ಎದುರುನೋಡುತ್ತಾರೆ" (ಫಿಲಿಪ್ಪಿ 3:20). ಈ ಕಾರಣಕ್ಕಾಗಿ, ಪರಿಪಕ್ವತೆಯುಳ್ಳ ಕ್ರೈಸ್ತರು ದೇವರ ದೈವಿಕ **ಕುಮಾರನ** ಬರೋಣದ ವಿಷಯದಲ್ಲಿ ಒಂದು ಮುಂದುವರೆದಂಥ ಕಾತರವನ್ನು ಅನುಭವ ಮಾಡಿರುತ್ತಾರೆ. ಆತನು [ತಂದೆ] **ಸತ್ತವರೊಳಗಿಂದ ಎಬ್ಬಿಸಿದಾಗ** ಆತನ ದೇವತ್ವವು

ಸಾಭಿತುಪಡಿಸಲ್ಪಟ್ಟಿತು (1 ಪೇತ್ರ 1:3; ಅಪೊಸ್ತಲರ ಕೃತ್ಯಗಳು 2:24-33). ಸತ್ತ ವಿಗ್ರಹಗಳಿಗೆ ಹೋಲಿಸಿದರೆ ಈ ಜೀವಿಸುವ ಯೇಸುವೇ ನಮ್ಮ ಆರಾಧನೆಯ ಲಕ್ಷ್ಯವಾಗಿರುತ್ತಾನೆ.

ಅಲ್ಲದೆ **ಮುಂದೆ ಬರುವ ದೈವಕೋಪದಿಂದ ನಮ್ಮನ್ನು ತಪ್ಪಿಸುವಾತನು** ಈ ಯೇಸುವೇ ಆಗಿದ್ದಾನೆ, ಯಾಕೆಂದರೆ ನಾವು ಒಂದು ಭಯಂಕರ ಅಪಾಯದಲ್ಲಿದ್ದೆವು. ನರಕದಲ್ಲಿ ನಾಶಗೊಳ್ಳುವದು, ನಿತ್ಯವಾದ ದಂಡನೆ, ಎಂಬುದು ಜನಪ್ರಿಯವಾದದ್ದಲ್ಲವಾದಾಗ್ಯೂ, ಅದು ಬೈಬಲಾಧಾರಿತವಾಗಿರುತ್ತದೆ. ದೇವರು ಯುಗದ ಸಮಾಪ್ತಿಯಲ್ಲಿ ಅವಿಧೇಯರ ಮೇಲೆ ತನ್ನ ಕೋಪವನ್ನು ತೋರ್ಪಡಿಸುವನು ಎಂಬುದನ್ನು ಮತ್ತೊಮ್ಮೆ ಒತ್ತಿ ಹೇಳಲಾಗಿರುತ್ತದೆ. ಮನುಷ್ಯನ ಕೋಪದಂತೆಯೇ ದೇವರ ಕೋಪವು ಪ್ರತಿಕಾರದಿಂದ ಕೂಡಿದ್ದು ಅಥವಾ ನಿಯಂತ್ರಣ ಮಾಡಿಕೊಳ್ಳಲಾಗದ್ದು ಆಗಿರುವದಿಲ್ಲ; ಬದಲಾಗಿ, ಅದು ತಪ್ಪಿನ ಮತ್ತು ಕೆಟ್ಟದ್ದರ ವಿರುದ್ಧವಾಗಿ ಆತನು ಹೊಂದಿರುವ ಆತನ ಅತ್ಯಂಥ ಕಠಿಣವಾದ ಭಾವನೆಗಳಾಗಿದ್ದು, ಅದಕ್ಕೆ “ಲೆಕ್ಕವನ್ನು ತೀರಿಸುವದು” ಅಗತ್ಯವಿರುತ್ತದೆ. ಆತನ ಪ್ರೀತಿಯು ನಮ್ಮ ಪ್ರೀತಿಗಿಂತಲೂ ಆಳವಾಗಿರುವ ಪ್ರಕಾರವೇ, ಆತನ ಕೋಪವು ಸಹ ಅಷ್ಟೇ ಹೆಚ್ಚು ತೀಕ್ಷ್ಣವಾಗಿರುತ್ತದೆ. ಅವಿಧೇಯರ ವಿರುದ್ಧ ತೋರಿ ಬರಲಿರುವ, ಆತನ ಕೋಪದ ಬಗ್ಗೆ ಇತರ ವಾಕ್ಯಭಾಗಗಳು ಸಹ ತಿಳಿಸುತ್ತವೆ (2:16; ಅಪೊಸ್ತಲರ ಕೃತ್ಯಗಳು 17:28-31; ರೋಮಾ 2:5-8). ಮನುಷ್ಯರು ಈ ವಿಧದಲ್ಲಿ ಬಾಧೆಯನ್ನನುಭವಿಸಬೇಕೆಂಬುದು ದೇವರ ಬಯಕೆಯಾಗಿರುವದಿಲ್ಲ. ಅವರು ಈ ದಂಡನೆಯಿಂದ ತಪ್ಪಿಸಿಕೊಳ್ಳಬೇಕು, ಅಥವಾ ಅದರಿಂದ ಕಾಪಾಡಲ್ಪಡಬೇಕು ಎಂದು ಬಯಸುತ್ತಾನೆ; ಆದ್ದರಿಂದ ಕ್ರಿಸ್ತನ ಮೂಲಕ ಆತನು ತಪ್ಪಿಸಿಕೊಳ್ಳುವದಕ್ಕೆ ಒಂದು ಮಾರ್ಗವನ್ನು ಏರ್ಪಡಿಸಿದನು. ಥೆಸಲೋನಿಕದವರು (ಮತ್ತು ಎಲ್ಲಾ ನಿಜ ಕ್ರೈಸ್ತರು) ಯೇಸುವಿನ ಮೂಲಕವಾಗಿ ಕೋಪದಿಂದ “ತಪ್ಪಿಸಲ್ಪಟ್ಟಿದ್ದರು.”

## ಅನ್ವಯಿಸುವಿಕೆ

ಹಲವು ವರ್ಷಗಳ ಹಿಂದೆ, ಒಬ್ಬ ಬೋಧಕವು ಬೋಧಿಸುವದಕ್ಕಾಗಿ ಹೊರಗೆ ಪ್ರಯಾಣ ಮಾಡುವ ವೇಳೆ ರೈಲಿನಲ್ಲಿ ಸಾಗಿದ್ದನು. ರೈಲಿನಲ್ಲಿ, ಆಚೆ ಕಡೆ ಆಸನವೊಂದರಲ್ಲಿ ಬೇರೊಂದು ಪಂಗಡಕ್ಕೆ ಸೇರಿದ ಒಬ್ಬ ಬೋಧಕನು ಕುಳಿತಿದ್ದನು. ಪ್ರಯಾಣದ ದಾರಿಯಲ್ಲಿ, ಅವರು ಕರ್ತನ ಪುನರಾಗಮನದ ಕುರಿತಾದ ಒಂದು ಸಂಭಾಷಣೆಯಲ್ಲಿ ತೊಡಗಿದರು. ಆ ಪಂಗಡದ ಬೋಧಕನು ಹೀಗೆ ಹೇಳಿದನು, “ಕರ್ತನು ನನಗೆ ತಾನು ಮುಂದಿನ ಮೂರು ವರ್ಷಗಳೊಳಗೆ ಹಿಂದಿರುಗುವೆನು ಎಂಬದಾಗಿ ಹೇಳಿದ್ದಾನೆ.” ಅದಕ್ಕೆ ಈ ಸುವಾರ್ತಾ ಬೋಧಕನು “ಕರ್ತನು ಅದನ್ನು ನಿನಗೆ ಹೇಳಲಿಲ್ಲ ಎಂಬುದನ್ನು ಮಾರ್ಕ 13:32, 33ರಲ್ಲಿ ಆತನು ನನಗೆ ಹೇಳಿದ್ದಾನೆ” ಎಂದನು. ಖಂಡಿತವಾಗಿಯೂ, ಸುವಾರ್ತಾ ಬೋಧಕನು ಹೇಳಿದ್ದು ಸರಿಯಾಗಿಯೇ ಇತ್ತು. ಯೇಸು ಯಾವಾಗ ಹಿಂದಿರುಗಿ ಬರುವನೆಂಬುದು ಯಾವನೊಬ್ಬನಿಗೂ ತಿಳಿದಿರುವದಿಲ್ಲ, ಆದರೆ ಆತನ ಬರೋಣದ ಕುರಿತಾಗಿ ಪೌಲನು ಥೆಸಲೋನಿಕದವರಿಗೆ ಬರೆದ ಎರಡು ಪತ್ರಿಕೆಗಳಿಂದ ನಾವು ಸಾಕಷ್ಟು ವಿಷಯಗಳನ್ನು ಕಲಿತುಕೊಳ್ಳಬಹುದಾಗಿರುತ್ತದೆ.

ಮೊದಲ ಮತ್ತು ಎರಡನೆಯ ಥೆಸಲೋನಿಕ ಪತ್ರಿಕೆಗಳು ಯೇಸುವಿನ ಪುನರಾಗಮನದ ಬಗ್ಗೆ ಮುಖ್ಯ ಗಮನವನ್ನು ಹರಿಸುತ್ತವೆ. ಥೆಸಲೋನಿಕದವರಿಗೆ ಬರೆದ ಮೊದಲನೆಯ ಪತ್ರಿಕೆಯು ಎರಡನೆಯ ಬರೋಣದ ಕುರಿತು ಒಂದು ಸಮತೋಲನದ ಅಭಿಪ್ರಾಯವನ್ನು ಒದಗಿಸುತ್ತವೆ. ಅದು ವಾಚಕರನ್ನು ಅವರು ಪರಿವರ್ತನೆಗೊಂಡದ್ದನ್ನು ಜ್ಞಾಪಿಸಿಕೊಳ್ಳುವಂತೆ (1:1-3:13), ಅವರ ಸಮರ್ಪಣೆಯೊಳಗೆ ದೃಷ್ಟಿಹರಿಸುವಂತೆ (4:1-12), ಮತ್ತು ಕ್ರಿಸ್ತನ ಬರೋಣವನ್ನು ಎದುರುನೋಡುವಂತೆ (4:13-5:11) ಆಮಂತ್ರಿಸುತ್ತದೆ.

## ಪ್ರಕಟನೆಯ ಪ್ರಕ್ರಿಯೆ (1:1)

ಶಾಸ್ತ್ರಗಳ ಕುರಿತಾದ ದೊಡ್ಡ ಮರ್ಮಗಳಲ್ಲೊಂದೆಂದರೆ ಅವುಗಳು ಅಸ್ತಿತ್ವಕ್ಕೆ ಬಂದಂಥ ಪ್ರಕ್ರಿಯೆಯೇ ಆಗಿದೆ. ದೇವರು ಅವುಗಳನ್ನು ಹೇಗೆ ಒದಗಿಸಿದನೆಂಬುದರ ಬಗ್ಗೆ ಕ್ಷಣಕ್ಷಣದ ವಿವರಗಳನ್ನು ನಾವು ತಿಳಿಯಲವರಾದಾಗ್ಯೂ, ನಾವು ವಿಸ್ತಾರವಾದ ವ್ಯಾಪ್ತಿಯನ್ನು ತಿಳಿದುಕೊಳ್ಳಬಲ್ಲೆವು.

1 ಥೆಸಲೋನಿಕದವರಿಗೆ ಬರೆದ ಪತ್ರಿಕೆಯ ಮೊದಲ ವಚನದಲ್ಲಿ, ದೇವರು ತನ್ನ ವಾಕ್ಯವನ್ನು ನಮ್ಮ ಬಳಿಗೆ ಹೇಗೆ ತಂದನು ಎಂಬುದು ಸ್ಪಷ್ಟವಾಗಿರುತ್ತದೆ.

*ದೇವರು ಪವಿತ್ರಾತ್ಮನ ಮೂಲಕವಾಗಿ ತನ್ನ ಪ್ರಕಟನೆಯನ್ನು ಒದಗಿಸಿದನು.* ಈ ಸತ್ಯವು 1ನೇ ವಚನದಲ್ಲಿ ಕೇವಲ ಸೂಚ್ಯಾರ್ಥದಲ್ಲಿರುತ್ತದೆ, ಆದರೆ 5ನೇ ವಚನದಲ್ಲಿ ಅದು ಸ್ಪಷ್ಟವಾಗಿ ದೃಢೀಕರಿಸಲ್ಪಟ್ಟಿದೆ. ಇಲ್ಲಿ ನಾವು ಬೈಬಲಿನ ದೈವಿಕ ಮೂಲವನ್ನು ಕಾಣುತ್ತೇವೆ.

ಈ ಪತ್ರಿಕೆಗಳು ಅವರ ಮೇಲೆ ನಿರ್ಬಂಧವನ್ನು ಹೊಂದಿರುತ್ತವೆಂಬುದಾಗಿ ಪೌಲನು ಥೆಸಲೋನಿಕದವರಿಗೆ ಹೇಳುತ್ತಾನೆ (1 ಥೆಸಲೋನಿಕ 5:27). ಪತ್ರಿಕೆಗಳಲ್ಲಿನ ಮಾತುಗಳಿಗೆ ಯಾವನಾದರೂ ಒಳಗಾಗದಿದ್ದರೆ ಅಂಥವನನ್ನು ಗುರುತಿಟ್ಟುಕೊಳ್ಳಬೇಕೆಂದು ಸಭೆಗೆ ಹೇಳಲಾಗಿರುತ್ತದೆ (2 ಥೆಸಲೋನಿಕ 3:14). ಆತನು ಕೊಲೊಸ್ಸೆಯವರಿಗೆ ಹೇಳಿದ ಪ್ರಕಾರ, ಈ ಪತ್ರಿಕೆಗಳನ್ನು ಸಭೆಯಾಗಿ ಕೂಡಿರುವ ವೇಳೆಯಲ್ಲಿ ಎಲ್ಲರ ಮುಂದೆ ಓದಲ್ಪಡಬೇಕಾಗಿತ್ತು (ಕೊಲೊಸ್ಸೆ 4:16). ಪೌಲನು ನೀಡಿದ ಬೋಧನೆಗಳಿಂದ ಪತ್ರಿಕೆಗಳು ಪವಿತ್ರಾತ್ಮನಿಂದ ಪ್ರೇರಿತವಾಗಿರುತ್ತವೆಂಬುದು ತೋರಿ ಬರುತ್ತದೆ.

*ಆತನ ಪ್ರಕಟನೆಯು ನಮಗೆ ಒಬ್ಬ ಮಾನವ ಸಾಧನ ಮೂಲಕ ಬಂದಿತು.* ದೇವರು ತನ್ನ ಚಿತ್ತವನ್ನು ನೆರವೇರಿಸುವದಕ್ಕೆ ಮನುಷ್ಯರನ್ನು ಬಳಸಿದನು. ಪೌಲನು ಥೆಸಲೋನಿಕದಲ್ಲಿರುವ ಸಭೆಗೆ ಬರೆದ ಹಾಗೆ, ದೇವರು ಈ ಪ್ರೇರಿತ ಸಂದೇಶಕನನ್ನು ಪವಿತ್ರಾತ್ಮನಿಂದ ಮತ್ತು ಮೂಲಕ ನಡಿಸಿದನು. ಇಲ್ಲಿ ನಾವು ಪ್ರಕಟನೆಯ ಸಂಪರ್ಕದಾರಿಯನ್ನು ಕಾಣುತ್ತೇವೆ.

*ದೇವರು ಬರಹಗಳ ಮೂಲಕ ತನ್ನ ಸಂದೇಶವನ್ನು ನೀಡಿದನು.* ಅದೊಂದು ಲಿಖಿತ ಸಂದೇಶವಾಗಿತ್ತು, ಅದು ಒಬ್ಬನ ಕೈಯಲ್ಲಿ ಹಿಡಿದುಕೊಂಡು ಓದಲ್ಪಡಬಹುದಾದ ಪ್ರಕಟನೆಯಾಗಿತ್ತು. ಈ ಯೋಚನೆಯಲ್ಲಿ ನಾವು ಪ್ರಟಕನೆಯ ಮಾರ್ಗವನ್ನು ಕಾಣುತ್ತೇವೆ. ದೇವರು ನಮ್ಮ ಮನಸ್ಸುಗಳ ಮೂಲಕವಾಗಿ ಹುಡುಕುತ್ತಾನೆ; ನಾವು ಓದಬೇಕು, ಅರ್ಥಮಾಡಿಕೊಳ್ಳಬೇಕು, ಮತ್ತು ನಂತರ ಆತನ ಸಂದೇಶದಂತೆ ನಡೆದುಕೊಳ್ಳಬೇಕೆಂದು

ದೇವರು ಬಯಸುತ್ತಾನೆ.

*ದೈವಿಕ ಪ್ರಕಟನೆಯು ಒಂದು ಸಂದರ್ಭದ ಮೂಲಕ ಬರುತ್ತದೆ.* ದೇವರು ಒಂದು ಸತ್ಯವನ್ನು ಪ್ರಪಂಚದಲ್ಲೆಲ್ಲಾ ತಿಳಿಯಪಡಿಸುವದಕ್ಕಾಗಿ ಸ್ಥಳೀಯ ಸಭೆಯ ಪರಿಸ್ಥಿತಿಯ ಅಗತ್ಯತೆಯನ್ನು ಸಂಧಿಸುವದಕ್ಕೆ ಕೊಡಲಾದ ಒಂದು ಪ್ರಟಕನೆಯನ್ನು ಬಳಸಿದನು. ಆತನು ನಿರ್ದಿಷ್ಟವಾದದ್ದನ್ನು ತೆಗೆದುಕೊಂಡು ಅದನ್ನು ಸಾಮಾನ್ಯವಾದದ್ದನ್ನಾಗಿ ಮಾಡಿದನು. A. T. Robertson ಹೀಗೆ ಹೇಳುತ್ತಾನೆ, "ಪೌಲನ ಪತ್ರಿಕೆಗಳು ಕಾಲಗಳಿಗಾಗಿ ಬರೆದಿರುವ ಕರಪತ್ರಗಳಾಗಿವೆ . . ., ನಿಜವಾದ ತುರ್ತು ಪರಿಸ್ಥಿತಿಗಳನ್ನು ಸಂಧಿಸುವದಕ್ಕೆ [ಬರೆಯಲ್ಪಟ್ಟವುಗಳು]."[9]

ಪೌಲನಿಗೆ ಆ ಸಮಯದಲ್ಲಿ ಹಿಂಸೆಯನ್ನು ಅನುಭವಿಸುತ್ತಿದ್ದಂಥ ಥೆಸಲೋನಿಕದವರ ಬಗ್ಗೆ ಚಿಂತೆಯಿತ್ತು. ಅವರು ಕ್ರಿಸ್ತನಂಬಿಕೆಯಲ್ಲಿ ಇನ್ನೂ ಎಳೆಯವರಾಗಿದ್ದರು ಮತ್ತು ಅನೇಕ ತಪ್ಪು ಗ್ರಹಿಕೆಗಳನ್ನು, ವಿಶೇಷವಾಗಿ ಯೇಸುವಿನ ಪುನರಾಗಮನದ ಬಗ್ಗೆ ತಪ್ಪು ಗ್ರಹಿಕೆಯನ್ನು ಹೊಂದಿದ್ದರು. ಆ ಕೆಲವೊಂದು ತಪ್ಪು ಕಲ್ಪನೆಗಳನ್ನು ಹೋಗಲಾಡಿಸುವದಕ್ಕೋಸ್ಕರ ಪೌಲನು ಈ ಮೊದಲನೆಯ ಪತ್ರಿಕೆಯನ್ನು ಬರೆದನು. ದೇವರ ಪ್ರಕಟನೆಯ ಈ ಭಾಗದ ಹುಟ್ಟುವಿಕೆಗೆ ಕಾರಣವಾದ ಪರಿಸ್ಥಿತಿಯನ್ನು ಇಲ್ಲಿ ಕಾಣುತ್ತೇವೆ.

ದೇವರ ಪ್ರಕಟನೆಯು ಎಷ್ಟೊಂದು ಶ್ರೇಷ್ಠವಾದದ್ದು! ಅದು ಇಲ್ಲದಿದ್ದರೆ ನಮಗೆ ಆತನ ಚಿತ್ತವನ್ನು ತಿಳಿದುಕೊಳ್ಳುವ ನಿರೀಕ್ಷೆಯೇ ಇರುವದಿಲ್ಲ. ಅದು ಇರುವಾಗ, ನಮಗೆ ಈ ಕಾಲಕ್ಕೆ ಮತ್ತು ನಿತ್ಯತ್ವಕ್ಕೆ ಬೇಕಾದ ಮಾರ್ಗದರ್ಶನವು ಲಭ್ಯವಿರುತ್ತದೆ. ಅದನ್ನು ಮನುಷ್ಯರಿಂದ ಬಂದ ಮಾತುಗಳಂತೆ ಅಲ್ಲ, ಆದರೆ ದೇವರ ವಾಕ್ಯ ಎಂಬದಾಗಿ ಸ್ವೀಕರಿಸಿಕೊಳ್ಳತಕ್ಕದ್ದು. EC

## ಒಬ್ಬ ಕ್ರೈಸ್ತನೆಂದರೆ ಯಾರು? (1:1)

ಇದೊಂದು ನಿತ್ಯತ್ವಕ್ಕೂ ಮಹತ್ವಪೂರ್ಣವಾದ ಪ್ರಶ್ನೆಯಾಗಿದ್ದು ಅದಕ್ಕೆ ನಾವು ಜಾಗರೂಕತೆಯಿಂದ ಉತ್ತರಿಸತಕ್ಕದ್ದು, ಯಾಕೆಂದರೆ ನಮ್ಮ ಉತ್ತರವು ದೇವರ ಉತ್ತರವನ್ನೇ ಪ್ರತಿಬಿಂಬಿಸಬೇಕಾಗಿರುತ್ತದೆ. ಪೌಲನ ಆರಂಭಿಕ ಮಾತುಗಳು ಒಬ್ಬ ಕ್ರೈಸ್ತನು ಯಾರೆಂಬದಾಗಿ ದೇವರು ಹೊಂದಿರುವ ಚಿತ್ರಣವನ್ನು ನಮಗೆ ನೀಡುತ್ತವೆ.

*ಸಭೆಯ ಅಂಗವಾಗಿರುವವನೇ ಒಬ್ಬ ಕ್ರೈಸ್ತನು.* ಪೌಲನ ಪ್ರಕಾರವಾಗಿ, ಒಬ್ಬನು ಕ್ರಿಸ್ತನ ಸಭೆಯ ಒಂದು ಅಂಗವು ಸಹ ಆಗಿರುವ ಹೊರತು ಒಬ್ಬನು ಕ್ರೈಸ್ತನಾಗಿರುವದಕ್ಕೆ ಸಾಧ್ಯವಿಲ್ಲ. ಈ ಪತ್ರಿಕೆಯು ಥಸಲೋನಿಕದವರಿಂದ ಕೂಡಿದ ಸಭೆಗೆ ಬರೆಯಲ್ಪಟ್ಟಿರುತ್ತದೆ. ಅಂದರೆ, ಈ ಸಭೆಯಲ್ಲಿ ಥೆಸಲೋನಿಕದಲ್ಲಿನ ಕ್ರೈಸ್ತರು ಸೇರಿರುತ್ತಾರೆ.

*ದೈವಿಕ ವಲಯ ಅಥವಾ ಮಂಡಲದಲ್ಲಿರುವವನೇ ಒಬ್ಬ ಕ್ರೈಸ್ತನು.* ಸಭೆಯು ದೇವರಲ್ಲಿಯೂ ಕರ್ತನಾದ ಯೇಸು ಕ್ರಿಸ್ತನಲ್ಲಿಯೂ ಇತ್ತೆಂಬುದಾಗಿ ಪೌಲನು ಹೇಳಿದನು. ಥೆಸಲೋನಿಕದವರು ತಮ್ಮ ಆತ್ಮೀಕ ಜೀವವನ್ನು ದೇವರಿಂದ ಮತ್ತು ಕ್ರಿಸ್ತನಿಂದ ಸೆಳೆದುಕೊಳ್ಳುವವರಾಗಿದ್ದರು ಮತ್ತು ಅವರು ದೇವರ ಹಾಗೂ ಕ್ರಿಸ್ತನ ನಾಯಕತ್ವದ ಪ್ರಭಾವದಡಿಯಲ್ಲಿದ್ದರು. ಸಭೆಯಾಗಿ, ಅವರು ದೇವರೊಂದಿಗೆ ಮತ್ತು ಕ್ರಿಸ್ತನೊಂದಿಗೆ

ಎಷ್ಟೊಂದು ನಿಕಟವಾಗಿ ಐಕ್ಯಗೊಂಡಿದ್ದರೆಂದರೆ ಅವರು ದೇವರಲ್ಲಿ ಮತ್ತು ಕ್ರಿಸ್ತನಲ್ಲಿ ಜೀವಿಸುವವರಾಗಿದ್ದರೆಂದು ಹೇಳಬಹುದು. ಎಂಥ ಒಂದು ಮೂಕವಿಸ್ಮಿತಗೊಳಿಸುವಂಥ ಯೋಚನೆ!

*ದೇವರು ಕೊಡುವಂಥ ಆತ್ಮೀಕ ಆಶೀರ್ವಾದಗಳನ್ನು ಪಡೆದುಕೊಳ್ಳುವವನು ಒಬ್ಬ ಕ್ರೈಸ್ತನಾಗಿರುತ್ತಾನೆ.* ಪೌಲನು ಅವರಿಗೆ ಕೃಪೆಯೂ ಶಾಂತಿಯೂ ದೊರಕಲಿ ಎಂದು ಮುಕ್ತವಾಗಿ ಹಾರೈಸುವವನಾಗಿದ್ದನು. ಶಾಂತಿಯು ಕಾದಾಟದ ಅನುಪಸ್ಥಿತಿ ಎಂಬುದಕ್ಕಿಂದಲೂ ಹೆಚ್ಚಿನದ್ದಾಗಿದೆ. ಹೊಸ ಒಡಂಬಡಿಕೆಯ ಕಾಲದಲ್ಲಿ ಅದು ಆತ್ಮದ ಸಂಪೂರ್ಣತೆ ಮತ್ತು ಸಮೃದ್ಧಿಯಲ್ಲಿ ಫಲಿತಗೊಂಡಂಥ ದೇವರ ಹಾಗೂ ಮನುಷ್ಯನ ನಡುವಿನ ಸಾಮರಸ್ಯವಾಗಿತ್ತು.

*ಕ್ರಿಸ್ತನಲ್ಲಿ* ಇರುವವರಿಗೆ ಮಾತ್ರವೇ ಕೃಪೆ ಮತ್ತು ಶಾಂತಿ ದೊರಕುತ್ತದೆ. ಪೌಲನು ಅವರಿಗೆ "ನೀವು ಕ್ರಿಸ್ತನ ಆಶೀರ್ವಾದಗಳನ್ನು ಪಡೆದುಕೊಳ್ಳುವವರಾಗುವಂತೆ ಆತನ ಬಳಿಗೆ ಬರುವಿರೆಂದು ನಿರೀಕ್ಷಿಸುತ್ತೇನೆ" ಎಂದು ಹೇಳಬೇಕಾಗಿರಲಿಲ್ಲ. ಅವರು ಈಗಾಗಲೇ ಕ್ರಿಸ್ತನಲ್ಲಿದ್ದರು, ಮತ್ತು ದೇವರು ಈಗಾಗಲೇ ಒದಗಿಸಿರುವ ಕೃಪೆ ಮತ್ತು ಶಾಂತಿಗಾಗಿ ತಮ್ಮ ಹೃದಯಗಳನ್ನು ಪೂರ್ಣವಾಗಿ ತೆರೆಯುವಂತೆ ಅವರನ್ನು ಬೇಡಿಕೊಳ್ಳುವ ಮೂಲಕ ಅವರಿಗೆ ತನ್ನ ಪ್ರೀತಿಯನ್ನು ವ್ಯಕ್ತಪಡಿಸಲು ಶಕ್ತನಾಗಿದ್ದನು.

ಒಬ್ಬ ಕ್ರೈಸ್ತನು ಕೇವಲ ಕ್ರಿಸ್ತನ ಒಬ್ಬ ಹಿಂಬಾಲಕನಾಗಿರುತ್ತಾನಷ್ಟೆ. ಹೇಗೂ, ಒಬ್ಬನು ನಿಜವಾಗಿಯೂ ಕ್ರಿಸ್ತನನ್ನು ಹಿಂಬಾಲಿಸುವಾಗ, ಆತನು ಪೌಲನಿಂದ ಬಣ್ಣಿಸಲ್ಪಟ್ಟಿರುವಂಥ ಒಬ್ಬ ವ್ಯಕ್ತಿಯಾಗುವನು: ಕ್ರಿಸ್ತನ ದೇಹದಲ್ಲಿರುವವನು, ದೈವಿಕ ಮಂಡದಲ್ಲಿರುವವನು, ಮತ್ತು ಕ್ರಿಸ್ತನ ಆಶೀರ್ವಾದಗಳನ್ನು ಸ್ವೀಕರಿಸಿಕೊಳ್ಳುವವನು. EC

## ಬೇರೆಯವರಿಗಾಗಿ ಪ್ರಾರ್ಥಿಸುವದು (1:2, 3)

ತಾನು, ಸೀಲ, ಮತ್ತು ತಿಮೊಥೆಯರು ಥೆಸಲೋನಿಕದವರಿಗೋಸ್ಕರ ಪ್ರಾರ್ಥಿಸುತ್ತಿದ್ದಾರೆಂಬುದನ್ನು ಪೌಲನು ಅವರಿಗೆ ತಿಳಿಸುತ್ತಾನೆ. ನಾವು ಒಬ್ಬರಿಗೋಸ್ಕರ ಒಬ್ಬರು ಹೇಗೆ ಪ್ರಾರ್ಥಿಸಬೇಕೆಂಬುದನ್ನು ದೃಷ್ಟಾಂತಪಡಿಸುತ್ತಾನೆ.

*ಐಕ್ಯವಾಗಿರುವ ಹೃದಯಗಳಿಂದ ಏರಿಹೋದ ಒಂದು ಪ್ರಾರ್ಥನೆ.* "ನಾವು" ಎಂಬ ಬಹುವಚನವು ಆ ಎಲ್ಲಾ ಮೂವರು ವ್ಯಕ್ತಿಗಳು ಸಹ ಪ್ರಾರ್ಥಿಸುತ್ತಿದ್ದರೆಂಬುದನ್ನು ಸೂಚಿಸುತ್ತದೆ. ಮೂವರು ವ್ಯಕ್ತಿಗಳು ಏಕವಾಗಿ ಪ್ರಾರ್ಥಿಸುತ್ತಿದ್ದರು. ಬಹುಶಃ ಅವರು ಒಟ್ಟಾಗಿ ಪ್ರಾರ್ಥನೆಯಲ್ಲಿ ತೊಡಗಿಸಿಕೊಂಡ ಪ್ರತಿ ಸಾರಿಯೂ ಈ ಹೊಸದಾಗಿ ಪರಿವರ್ತನೆ ಗೊಂಡವರನ್ನು ಪ್ರಸ್ತಾಪಿಸುತ್ತಿದ್ದರು. ಒಗ್ಗಟ್ಟಾದ ಪ್ರಾರ್ಥನೆಯು ಎಷ್ಟು ಶಕ್ತಿಶಾಲಿ!

*ನಿಖರವಾದ ವಿವರಗಳನ್ನೊಳಗೊಂಡ ಒಂದು ಪ್ರಾರ್ಥನೆ.* ಅವರು ಯಾವದಕ್ಕಾಗಿ ಕೃತಜ್ಞತಾಸ್ತುತಿ ಮಾಡುತ್ತಿದ್ದರೆಂಬದರ ಬಗ್ಗೆ ಒಂದು ನಿಖರವಾದ ವಿವರಣೆಯು ಕೊಡಲ್ಪಟ್ಟಿರುತ್ತದೆ-ಅವರ ಕ್ರಿಯೆ ಮಾಡುವ ನಂಬಿಕೆ, ಪ್ರೀತಿಯ ಪ್ರಯಾಸ, ಮತ್ತು ಸ್ಥೈರಣೆಯುಳ್ಳ ನಿರೀಕ್ಷೆ. ಒಬ್ಬ ಬೋಧಕನು ತಾನು ಪರಿವರ್ತನೆಗೆ ನಡಿಸಿದವರಲ್ಲಿ ಒಬ್ಬ ಕ್ರೈಸ್ತನಿಗಿರಬೇಕಾದ ಗುಣಗಳು ಪ್ರದರ್ಶಿಸಲ್ಪಡುವದನ್ನು ಕಾಣುವಾಗ ಪ್ರೋತ್ಸಾಹ

ಗೊಳ್ಳುವನು.

*ಸಭೆಯನ್ನೆಲ್ಲಾ ಒಳಗೊಂಡಂಥ ಒಂದು ಪ್ರಾರ್ಥನೆ.* ಅವರೆಲ್ಲರಿಗೋಸ್ಕರ ಪ್ರಾರ್ಥನೆಯನ್ನು ಮಾಡಲಾಗಿತ್ತು ಹೊರತು ಒಬ್ಬನು ಅಥವಾ ಇಬ್ಬರಿಗಾಗಿ ಮಾತ್ರವೇ ಅಲ್ಲ. ದೇವರ ದೃಷ್ಟಿಯಲ್ಲಿ ಪ್ರತಿಯೊಬ್ಬರೂ ಅಮೂಲ್ಯವಾದವರು.

*ಎಡೆಬಿಡದೆ ಮಾಡಲ್ಪಟ್ಟ ಒಂದು ಪ್ರಾರ್ಥನೆ.* ಅವರು ಅವರಿಗೋಸ್ಕರ ನಿರಂತರವಾಗಿ ಪ್ರಾರ್ಥಿಸಿದರು. ಅವರಿಗೋಸ್ಕರ ಯಾವದೋ ಒಂದು ಸಂದರ್ಭದಲ್ಲಿ ಮಾತ್ರವೇ ಪ್ರಾರ್ಥಿಸುವವರಾಗಿರಲಿಲ್ಲ, ಆದರೆ ಅವರು ಅವರಿಗೋಸ್ಕರ ಸತತವಾಗಿ ಪ್ರಾರ್ಥಿಸಿದರು. ಪೌಲನು ತಾನು ಬೋಧಿಸಿದ್ದನ್ನು ಕೈಕೊಂಡು ನಡೆಯುವವನಾಗಿದ್ದನು, ಯಾಕೆಂದರೆ ಆತನು ಅವರಿಗೆ "ಎಡೆಬಿಡದೆ" ಪ್ರಾರ್ಥಿಸಿರಿ ಎಂದು ಬೇಡಿಕೊಂಡನು (5:17). ಎರಡೂ ಸ್ಥಳಗಳಲ್ಲಿಯೂ ಗ್ರೀಕ್‌ನ ἀδιαλείπτως (*adialeiptōs*) ಎಂಬ ಅದೇ ಪದವು ಬಳಸಲ್ಪಟ್ಟಿದೆ.

ಒಬ್ಬರಿಗೊಬ್ಬರು ಹೇಗೆ ಪ್ರಾರ್ಥಿಸಬೇಕೆಂಬ ಬಗ್ಗೆ ಪೌಲನ ಹೇಳಿಕೆಯು ಒಂದು ಅದ್ಭುತವಾದ ಮಾರ್ಗದರ್ಶನವನ್ನು ಒದಗಿಸಿರುತ್ತದೆ. ನಿಶ್ಚಯವಾಗಿಯೂ ನಾವು ಒಬ್ಬರಿಗೊಬ್ಬರು ಅಧಿಕವಾಗಿ ಪ್ರಾರ್ಥಿಸಬೇಕು! ನಾವು ನಮ್ಮ ಸಹೋದರರಿಗೋಸ್ಕರ ಪ್ರಾರ್ಥಿಸುವಾಗ ನಮ್ಮ ಅತ್ಯುತ್ತಮ ಸ್ಥಿತಿಯಲ್ಲಿರುವವರಾಗಿರುತ್ತೇವೆಂದು ನೀವು ಹೇಳಲಾರಿರೋ? EC

## ನಿಮ್ಮ ಸಹೋದರರನ್ನು ಪ್ರೋತ್ಸಾಹಿಸಿರಿ (1:2, 3)

ಇತರ ಸಂಗತಿಗಳೊಳಗೆ, ಪೌಲನು ಪ್ರೋತ್ಸಾಹಪಡಿಸುವದಕ್ಕಾಗಿ ಥೆಸಲೋನಿಕದವರಿಗೆ ಬರೆದನು. ಆತನು ಅವರನ್ನು ಹೇಗೆ ಪ್ರೋತ್ಸಾಹಗೊಳಿಸಿದನು? ನಾವು ನಮ್ಮ ಸಹೋದರರಿಗೋಸ್ಕರ ಅದೇ ರೀತಿಯ ಉತ್ತೇಜನಕರವಾದಂತಹ ಮಾತುಗಳನ್ನು ಹೊಂದಿದ್ದೇವೋ?

*ಅವರಿಗೋಸ್ಕರ ಪ್ರಾರ್ಥಿಸುವ ಮೂಲಕ.* ತಾನು ಅವರಿಗೋಸ್ಕರ ಪ್ರಾರ್ಥನೆ ಮಾಡುತ್ತಿದ್ದಾನೆಂದು ಹೇಳುವ ಮೂಲಕ ಆತನು ಆರಂಭಿಸುತ್ತಾನೆ. ನಾವು ಅವರಿಗೋಸ್ಕರ ಸತ್ಯತೆಯಿಂದ ಪ್ರಾರ್ಥಿಸುತ್ತಿದ್ದೇವೆಂಬುದನ್ನು ಸಹೋದರರು ತಿಳಿದುಕೊಳ್ಳುವಾಗ, ಅವರು ಹುರದುಂಬಿಸಲ್ಪಡುತ್ತಾರೆ ಮತ್ತು ಆಶೀರ್ವಾದಗೊಳ್ಳುತ್ತಾರೆ.

*ಅವರನ್ನು ಶ್ಲಾಘನೆ ಮಾಡುವ ಮೂಲಕ.* ಕ್ರೈಸ್ತೀಯ ಜೀವಿತವನ್ನು ನಡಿಸುವದರಲ್ಲಿ ಅವರಲ್ಲಿದ್ದ ನಂಬಿಗಸ್ತಿಕೆಯನ್ನು ಆತನು ಪ್ರಶಂಸೆ ಮಾಡುತ್ತಾನೆ. ಅವರ ನಂಬಿಗಸ್ತಿಕೆಯ ಬಗ್ಗೆ ನನಗೆ ಅರಿವು ಇರುತ್ತದೆಂಬುದು ಸಹೋದರರಿಗೆ ತಿಳಿಯುವಾಗ, ಅವರಿಗೊಂದು ಆತ್ಮೀಕ ಉತ್ತೇಜನ ಸಿಕ್ಕುತ್ತದೆ.

*ಅವರಿಗೆ ಜ್ಞಾಪಕಡಿಸುವ ಮೂಲಕ.* ದೇವರು ಅವರನ್ನು ಆದುಕೊಂಡಿದ್ದಾನೆಂಬುದನ್ನು ಅವರಿಗೆ ದೃಢಪಡಿಸಿದನು. ನಾವು ದೇವರಿಂದ ಆದುಕೊಳ್ಳಲ್ಪಟ್ಟವರೆಂಬದು ಜ್ಞಾಪಿಸಲ್ಪಡುವಾಗ ಅದು ಯಾವಾಗಲೂ ನಮ್ಮ ನಂಬಿಕೆಗೆ ಒಂದು ಪ್ರೋತ್ಸಾಹವಾಗುತ್ತದೆ. ಕ್ರಿಸ್ತನೊಳಗೆ ಬರುವಂಥ ಎಲ್ಲರನ್ನೂ ದೇವರು ರಕ್ಷಿಸುವದಕ್ಕೆ ನಿರ್ಧರಿಸುತ್ತಾನೆ (ಎಫೆಸ 1:3,

4) ಮತ್ತು ನಮ್ಮನ್ನು ಆದುಕೊಂಡವರೊಳಗೆ ಸೇರುವಂತೆ ಸುವಾರ್ತೆಯ ಮೂಲಕ ಆತನು ಕರೆಯುವವನಾಗಿದ್ದಾನೆ.

ಪ್ರತಿಯೊಬ್ಬ ಕ್ರೈಸ್ತನು ಸಹ ಪ್ರೋತ್ಸಾಹದ ಕೆಲಸದಲ್ಲಿರತಕ್ಕದ್ದು, ಅವನು ಅಥವಾ ಅವಳು ಭೇಟಿಯಾಗುವಂತ ಬೇರೆ ಎಲ್ಲಾ ಕ್ರೈಸ್ತರಿಗೆ ಒಂದು ಪ್ರೋತ್ಸಾಹದ ಮಾತನ್ನು ಕೊಡಬೇಕು. EC

## ಥೆಸಲೋನಿಕದವರಿಗಾಗಿ ಕೃತಜ್ಞತೆ (1:1-3)

ಪೌಲನು ತನ್ನ ವಾಚಕರ ಕಡೆಗೆ ಒಂದು ಸಕಾರಾತ್ಮಕ ಮನೋಭಾವವನ್ನು ತೋರ್ಪಡಿಸುತ್ತಾನೆ. ಆತನು ಯಾವದೋ ಒಂದು ಸಂದರ್ಭದಲ್ಲಿ ಮಾತ್ರವಲ್ಲ, ಆದರೆ "ಯಾವಾಗಲೂ" ತನ್ನ ಪ್ರಾರ್ಥನೆಗಳಲ್ಲಿ "ದೇವರಿಗೆ ಕೃತಜ್ಞತಾಸ್ತುತಿ" ಸಲ್ಲಿಸಿದನು (ವ. 2). ಅವರಿಗೋಸ್ಕರ ಆತನು ಏಕೆ ಕೃತಜ್ಞತಾಭಾವನೆ ಹೊಂದಿದ್ದನು?

ಪೌಲನು *ಅವರ "ನಂಬಿಕೆ ಫಲವಾದ ಕೆಲಸ"ಕ್ಕಾಗಿ ಕೃತಜ್ಞತಾಸ್ತುತಿ ಮಾಡಿದನು.* ನಂಬಿಕೆಯು ನಿಷ್ಕ್ರಿಯವಾದದ್ದಲ್ಲ. ನಿಜವಾದ ನಂಬಿಕೆಯು ಯಾವಾಗಲೂ ಒಂದು ಕೆಲಸ ಅಥವಾ ಕೆಲಸಗಳನ್ನು ಉಂಟು ಮಾಡುವದಾಗಿದೆ. ಯಾಕೋಬನು ಹೀಗೆ ಬರೆದನು, "ನಾನು ನನ್ನ ಕ್ರಿಯೆಗಳ ಮೂಲಕ ನನ್ನ ನಂಬಿಕೆಯನ್ನು ನಿನಗೆ ತೋರಿಸುತ್ತೇನೆ" (ಯಾಕೋಬ 2:18).

ಪೌಲನು ಅವರ *"ಪ್ರೀತಿಪೂರ್ವಕವಾದ ಪ್ರಯಾಸಕ್ಕಾಗಿ" ಕೃತಜ್ಞತಾಸ್ತುತಿ ಸಲ್ಲಿಸಿದನು.* 3ನೇ ವಚನದಲ್ಲಿರುವ ಪ್ರೀತಿ ಎಂಬುದಕ್ಕಿರುವ ಗ್ರೀಕ್ ಪದವು *agapē*. ಹೊಸ ಒಡಂಬಡಿಕೆಯಲ್ಲಿ ಈ ಪದವು ಸಾಮಾನ್ಯವಾಗಿ ಕ್ರಿಸ್ತನ ಪ್ರೀತಿಯನ್ನು ಬಣ್ಣಿಸುವದಕ್ಕೆ ಬಳಸಲ್ಪಟ್ಟಿರುತ್ತದೆ. ನಾವು ಈ ವಿಧವಾದ ಪ್ರೀತಿಯನ್ನು ಅನುಸರಿಸಬೇಕೆಂದು ನಮಗೆ ಹೇಳಲಾಗಿರುತ್ತದೆ (ನೋಡಿರಿ ಎಫೆಸ 5:2). ಥೆಸಲೋನಿಕದವರು ಕ್ರಿಸ್ತನ ಪ್ರೀತಿಯನ್ನು ಅನುಕರುಣ ಮಾಡುವವರಾಗಿದ್ದರು, ಮತ್ತು ಅದಕ್ಕಾಗಿ ಪೌಲನು ಅವರನ್ನು ಶ್ಲಾಘನೆ ಮಾಡುತ್ತಿದ್ದಾನೆ.

ಪೌಲನು *ಅವರ "ನಿರೀಕ್ಷೆಯಿಂದುಂಟಾದ ಸ್ಥೈರಣೆಗಾಗಿ" ಕೃತಜ್ಞತಾಸ್ತುತಿ ಸಲ್ಲಿಸುತ್ತಿದ್ದಾನೆ.* ಅವರು ಎಳೆಯ ಕ್ರೈಸ್ತರಾಗಿದ್ದಾಗ್ಯೂ ಅವರಿಗಿದ್ದ ನಿರೀಕ್ಷೆಯು ಅವರೊಳಗೆ ಸ್ಥೈರಣೆಯನ್ನು ಪ್ರೇರಣೆ ಮಾಡಿತ್ತು. ಅವರು ನಿತ್ಯ ಪ್ರಭಾವವನ್ನು ಹೊಂದಿಕೊಳ್ಳುವದರ ಮೇಲೆಯೇ ತಮ್ಮ ದೃಷ್ಟಿಯನ್ನು ಸ್ಥಿರವಾಗಿಟ್ಟಿದ್ದರು (ನೋಡಿರಿ ರೋಮಾ 8:18-39). ಈ ನಿರೀಕ್ಷೆಯು "ನಮ್ಮ ಕರ್ತನಾದ ಯೇಸು ಕ್ರಿಸ್ತನ" ಮೇಲೆ ಇಡಲ್ಪಟ್ಟದ್ದಾಗಿತ್ತು, ಆತನು ಎಂದಿಗೂ ನಿರಾಶೆಗೊಳಿಸದವನಾಗಿದ್ದಾನೆ (ವ. 3).

ಪೌಲನು ತನ್ನ ಪರಿವರ್ತನೆಗೊಂಡವರಿಗೋಸ್ಕರ ಹೊಂದಿದ್ದ ಕೃತಜ್ಞತಾಭಾವನೆಯು "ನಂಬಿಕೆ," "ಪ್ರೀತಿ," ಮತ್ತು "ನಿರೀಕ್ಷೆ"ಗಳ ಸುತ್ತ ಕೇಂದ್ರಿಕೃತವಾಗಿತ್ತು, ಇವುಗಳು ಆಗಾಗ್ಗೆ ಒಟ್ಟೊಟ್ಟಿಗೆ ಕಾಣಿಸಿಕೊಳ್ಳುವ ಮೂರು ಅತಿ ಮುಖ್ಯ ಕ್ರೈಸ್ತೀಯ ಭೂಷಣಗಳು (ನೋಡಿರಿ 1 ಥೆಸಲೋನಿಕ 5:8; 1 ಕೊರಿಂಥ 13:13; ಕೊಲೊಸ್ಸೆ 1:3-5). ಪೌಲನು ಈ ಸಹೋದರರ ಒಳ್ಳೇ ಮಾದರಿಗೋಸ್ಕರ ದೇವರಿಗೆ ತನ್ನ ಕೃತಜ್ಞತಾಸ್ತುತಿಯನ್ನು ಸಲ್ಲಿಸುತ್ತಾನೆ. ಅವರ

ಕೃತ್ಯಗಳು ಪೌಲನಿಗೆ ಪ್ರೋತ್ಸಾಹವನ್ನುಂಟು ಮಾಡಿದ್ದವು. ನಾವು ಸಹ, ನಮ್ಮ ಸಹೋದರರ ಒಳ್ಳೇ ಮಾದರಿಯ ಮೂಲಕ ಪ್ರೋತ್ಸಾಹಗೊಳ್ಳಬೇಕು.

ಒಂದು ಪ್ರೇರಣಾತ್ಮಕವಾದ *"ನಂಬಿಕೆಯ ಫಲವಾದ ಕೆಲಸ"*-ಒಂದು ಚಿಕ್ಕ ಗ್ರಾಮದಲ್ಲಿನ ಒಬ್ಬ ಹಿರಿಯನು ಭೇಟಿಮಾಡುವದರಲ್ಲಿ, ಪ್ರೋತ್ಸಾಹ, ಮತ್ತು ಬುದ್ಧಿವಾದವನ್ನು ಹೇಳುವದರಲ್ಲಿ ದಣಿವೇ ಆಗದಷ್ಟು ಕೆಲಸ ಮಾಡುತ್ತಿದ್ದನು. ಆತನ ಕೆಲಸವು ಆತನ ನಂಬಿಕೆಯನ್ನು ತೋರ್ಪಡಿಸುವದಾಗಿದೆ.

ಒಂದು ಪ್ರೇರಣಾತ್ಮಕವಾದ *"ಪ್ರೀತಿಪೂರ್ವಕವಾದ ಪ್ರಯಾಸ"*-ಎಂಬತ್ತು ವರ್ಷ ವಯಸ್ಸಿನ ಒಬ್ಬ ದಂಪತಿಯು ಸೇವಾ ಕ್ಷೇತ್ರದಲ್ಲಿ (ಮಿಶನ್ ಫೀಲ್ಡ್) ಐವತ್ತಕ್ಕೂ ಹೆಚ್ಚು ವರ್ಷಗಳ ಕಾಲವಿರುತ್ತಾರೆ ಮತ್ತು ಈಗಲೂ ಮುಂದುವರೆಸಿರುತ್ತಾರೆ. ಅಂಥ ಸಮರ್ಪಣೆಯು ಖಂಡಿತವಾಗಿಯೂ ಒಂದು "ಪ್ರೀತಿಪೂರ್ವಕವಾದ ಪ್ರಯಾಸ" ಆಗಿರುತ್ತದೆ.

ಒಂದು ಪ್ರೇರಣಾತ್ಮಕವಾದ *"ನಿರೀಕ್ಷೆಯ ಸ್ಥೈರಣೆ"*-middle Tennessee ದಲ್ಲಿ ವಾಸಿಸುವ ಮತ್ತು ಸಮುದಾಯದಲ್ಲಿನ ಜನರೊಂದಿಗೆ ಬೈಬಲ್ ನ್ನು ಅಧ್ಯಯನ ಮಾಡುವ ಒಬ್ಬ ಹಿರಿಯ ಸ್ತ್ರೀಯು ಆಫ್ರಿಕಾದಿಂದ ಬರುವ ಅಂಚೆ ಮೂಲಕದ ಬೈಬಲ್ ಅಧ್ಯಯನದ ಕೋರ್ಸ್ ಗಳಿಗೆ ಅಂಕಗಳನ್ನು ಹಾಕುತ್ತಾಳೆ, ಮತ್ತು ಬಳಲಿಕೆಯಿಲ್ಲದವಳಾಗಿ ಆಫ್ರಿಕಾಗೆ ಪ್ರಯಾಣಿಸಿ ಸುವಾರ್ತೆಯನ್ನು ಕಲಿಸುತ್ತಾಳೆ. ಆಕೆಯು ತನಗೋಸ್ಕರ ಮತ್ತು ಇತರರಿಗೋಸ್ಕರ ಹೊಂದಿರುವ "ನಿರೀಕ್ಷೆಯ ಸ್ಥೈರಣೆ" ನಿಮಿತ್ತವಾಗಿ ಈ ಎಲ್ಲಾ ಕಾರ್ಯಗಳನ್ನು ಮಾಡಬಲ್ಲವಳಾಗಿದ್ದಾಳೆ.

ಇಂತಹ ಜನರು ಪ್ರೇರಣಾತ್ಮಕವಾಗಿರುತ್ತಾರೆ, ಆದರೆ ತಮ್ಮ ಕೃತ್ಯಗಳ ಮೂಲಕ ಕ್ರಿಸ್ತನೊಂದಿಗಿನ ತನ್ನ ನಡೆಯನ್ನು ತೋರ್ಪಡಿಸುವವರಲ್ಲಿ ಅವರು ಮಾತ್ರವೇ ಆಗಿರುವದಿಲ್ಲ. ಬಹಳಷ್ಟು ಸಭೆಗಳಲ್ಲಿ ಉತ್ತಮವಾದ ಮಾದರಿ ವ್ಯಕ್ತಿಗಳು ಸಿಕ್ಕುತ್ತಾರೆ. ನಾವು, ಪೌಲನ ಹಾಗೆ, ತಮ್ಮ ನಂಬಿಕೆ, ಪ್ರೀತಿ, ಮತ್ತು ನಿರೀಕ್ಷೆಗಳನ್ನು ತೋರ್ಪಡಿಸುವಂತಹ ಸೇವಕರಿಗೋಸ್ಕರ ಕೃತಜ್ಞತಾಸ್ತುತಿಯನ್ನು ಸಲ್ಲಿಸಬೇಕು. EE

## ದೇವರಿಗೆ ಕೃತಜ್ಞತಾಸ್ತುತಿ (1:1-5)

ದೇವರೊಂದಿಗೆ ನಮಗಿರುವ ಸಂಬಂಧವು ನಮ್ಮ ಧರ್ಮ ಮತ್ತು ನಮ್ಮ ಜೀವಿತಗಳಿಗೆ ತಳಹದಿಯಾಗಿರುತ್ತದೆ. ನಮ್ಮನ್ನು ಸಂಪೂರ್ಣವಾಗಿ ತಿಳಿದುಕೊಳ್ಳುವ ಮತ್ತು ನಮಗೆ ಅಗತ್ಯವಿರುವದನ್ನು ಕೊಡುವದಕ್ಕೆ ದೇವರಿಗೆ ಮಾತ್ರವೇ ಬುದ್ಧಿ, ಶಕ್ತಿ, ಮತ್ತು ಪ್ರೀತಿಗಳಿರುತ್ತವೆ. ದೇವರಿಗೆ ಆತನ ದಾರಿಯಲ್ಲಿ ಮರುಸ್ಪಂದನೆಯನ್ನು ನೀಡುವದು ನಮಗೆ ಉತ್ತಮವಾದದ್ದು ಮತ್ತು ಇತರೊಂದಿಗೆ ಹಾಗೂ ಆತನೊಂದಿಗಿನ ನಮ್ಮ ಸಂಬಂಧಕ್ಕೆ ಉತ್ತಮವಾಗಿರುತ್ತದೆ.

1 ಥೆಸಲೋನಿಕದವರಿಗೆ ಬರೆದ ಪತ್ರಿಕೆಯ ಮೊದಲ ಭಾಗವು ಪೌಲ, ಸೀಲ, ಮತ್ತು ತಿಮೊಥೆಯರು ಥೆಸಲೋನಿಕದವರೊಂದಿಗೆ ಹೊಂದಿದ್ದ ಹಿಂದಿನ ಮತ್ತು ಈಗಿನ ಸಂಬಂಧ ಹಾಗೂ ಯೇಸುವಿನಲ್ಲಿ ದೇವರೊಂದಿಗಿರುವ ಅವರ ಸಂಬಂಧಗಳ ಬಗ್ಗೆ ಮಾತಾಡುತ್ತದೆ. ಮೊದಲ ಮೂರು ಅಧ್ಯಾಯಗಳು ಯಾವದೇ ಆಜ್ಞೆಗಳನ್ನಾಗಲಿ ಅಥವಾ ಸಿದ್ಧಾಂತಿ

ವಿವರಣೆಗಳನ್ನಾಗಲಿ ಹೊಂದಿರದೇ ಕೇವಲ ಎಲ್ಲಾ ಸುದ್ದಿಗಳನ್ನೊಳಗೊಂಡಿರುತ್ತವೆ. ಈ ಅಧ್ಯಾಯಗಳು ಏನು ಸಂಭವಿಸಿರುತ್ತದೆ ಮತ್ತು ಈಗ ಏನು ಸಂಭವಿಸುತ್ತಿದೆ ಎಂಬದನ್ನಷ್ಟೆ ಜ್ಞಾಪಕಕ್ಕೆ ತರುತ್ತವೆ. ಅವುಗಳು ಪಾಲುಗಾರರಾಗಿರುವವರ ಸಂಬಂಧಗಳ ಕುರಿತು "ಕೇವಲ" ಶುಭ ಸುದ್ದಿಯ ಬಗ್ಗೆ ಮಾತಾಡುತ್ತವೆ.

ಇತರ ಯಾವದೇ ವೈಯಕ್ತಿಕ ಪತ್ರಿಕೆಯ ವಿಷಯದಲ್ಲಿರುವಂತೆಯೇ, 1 ಥೆಸಲೋನಿಕದವರಿಗೆ ಬರೆದ ಪತ್ರಿಕೆಯು ಲೇಖಕನ ಹಾಗೂ ಸ್ವೀಕರಿಸುವವರ ನಡುವೆ ಸಂಬಂಧಕ್ಕೆ ಒಂದು ಅಸ್ತಿವಾರವಾಗಿದ್ದಂತಹ ಘಟನೆಗಳ ಕುರಿತಾಗಿ ಮಾತ್ರವೇ ಮುಖ್ಯ ಗಮನವನ್ನು ಹರಿಸುತ್ತದೆ. ಈ ಪತ್ರಿಕೆ ಹಾಗೂ ಹೊಸ ಒಡಂಬಡಿಕೆಯ ಹೊರಗಿನ ಪತ್ರಿಕೆಗಳ ನಡುವಿನ ವ್ಯತ್ಯಾಸವೇನೆಂದರೆ ಇದು ದೇವರಿಂದ ಪ್ರೇರಿತವಾಗಿರುತ್ತದೆ ಮತ್ತು ಆ ಕಾರಣದಿಂದ ಸಂಪೂರ್ಣವಾಗಿ ಸತ್ಯವಾಗಿರುತ್ತದೆ. ಅಲ್ಲದೆ ಇದು ದೇವರಿಗೆ ಮೆಚ್ಚಿಕೆಯಾಗುವಂತಹ ಸಂಬಂಧಗಳನ್ನು ಬೆಳೆಸಿಕೊಳ್ಳುವದರಲ್ಲಿ ನಾವು ಹೇಗೆ ವರ್ತಿಸಬೇಕೆಂಬುದಕ್ಕೆ ಇದೊಂದು ನಮೂನೆಯಾಗುತ್ತದೆ. ಈ ಘಟನೆಗಳು ನಿಜವಾಗಿಯೂ ಸಂಭವಿಸಿದವು, ಮತ್ತು ಈ ಸತ್ಯಗಳು ನಮಗೆ ಗೊತ್ತಾಗಬೇಕು ಮತ್ತು ಅವುಗಳು ನಮ್ಮ ಜೀವಿತಗಳನ್ನು ಆಶೀರ್ವದಿಸುವ ಹಾಗೆ ಬಿಡಬೇಕು ಎಂಬದಕ್ಕೋಸ್ಕರ ದೇವರು ಈ ಪತ್ರಿಕೆಯನ್ನು ಪ್ರೇರಣೆಗೊಳಿಸಿದನು ಮತ್ತು ಸಂರಕ್ಷಿಸಿದನು!

ಹಾಗಾದರೆ, ಇದು ಒಂದು ಉದ್ದೇಶದಿಂದ ಕೂಡಿರುವ ಸುದ್ದಿಯಾಗಿರುತ್ತದೆ. ಇದು ನಮ್ಮ ಕ್ರೈಸ್ತೀಯ ಜೀವಿತಗಳಲ್ಲಿ ಒಂದು ವ್ಯತ್ಯಾಸವನ್ನುಂಟು ಮಾಡುವ ಸುದ್ದಿಯಾಗಿದೆ. ಇದು ನಮ್ಮನ್ನು ಯೇಸುವಿನ ಕೃತಜ್ಞತೆಯುಳ್ಳ ಹಿಂಬಾಲಕರಾಗುವಂತೆ ಮಾಡುವ ಸುದ್ದಿಯಾಗಿದೆ. ಇದು ನಮ್ಮನ್ನು ಪುನರುಜ್ಜೀವನಗೊಳಿಸುವ ಸುದ್ದಿಯಾಗಿದೆ! ಹೇಗೆ ಕೃತಜ್ಞತೆಯುಳ್ಳ ಜೀವಿತಗಳನ್ನು ಹೊಂದಬೇಕೆಂಬ ಕುರಿತಾಗಿ ನಾವು ಈ ಸುದ್ದಿಯಿಂದ ಏನನ್ನು ಕಲಿತುಕೊಳ್ಳಬಹುದು?

*ದೇವರನ್ನು ಒಪ್ಪಿಕೊ (1:1).* ದೇವರು ಯಾವಾಗಲೂ ನಮ್ಮನ್ನು ತನ್ನ ಸೃಷ್ಟಿಯೆಂದು ಒಪ್ಪಿಕೊಂಡಿರುತ್ತಾನೆ. ಪ್ರತಿಯಾಗಿ ನಾವು ಆತನನ್ನು ನಮ್ಮ ಸೃಷ್ಟಿಕರ್ತನೆಂದು ಒಪ್ಪಿಕೊಳ್ಳತಕ್ಕದ್ದು. ದೇವರ ಕುರಿತಾದ ನಿರಂತರ ಪ್ರಜ್ಞೆಯನ್ನು ನಾವು ಹೊಂದಿರುವದು ಎಷ್ಟು ಪ್ರಾಮುಖ್ಯವಾದದ್ದು-ಆತನು ಇದ್ದಾನೆಂಬ ಪ್ರಜ್ಞೆ, ಆತನ ಗುಣಸ್ವಭಾವ, ನಮ್ಮ ಮೇಲೆ ಆತನಿಗಿರುವ ಯೋಚನೆಗಳ, ಮತ್ತು ನಾವು ಆತನಿಗೆ ಪ್ರತಿಯಾಗಿ ಸ್ಪಂದಿಸಬೇಕೆಂದು ಇಚ್ಛಿಸುತ್ತಾನೆಂಬದರ ಪ್ರಜ್ಞೆ!

ಕ್ರೈಸ್ತರು ಹೊಸ ಒಡಂಬಡಿಕೆಯ ಪತ್ರಿಕೆಗಳ ಆರಂಭದ ಭಾಗಗಳನ್ನು ಓದುವಾಗ, ಅವೆಲ್ಲವೂ ಒಂದೇ ರೀತಿಯೆಂದು ನಮಗೆ ಅನ್ನಿಸಬಹುದು. ನಾವು ಅನೇಕ ಸಾರಿ ಮೊದಲ ಕೆಲವು ವಚನಗಳನ್ನು ಓದಿ ಬಿಟ್ಟು ಇವುಗಳು ಪರಿಚಿತವಾದವುಗಳು ಮತ್ತು ಸುಲಭವಾಗಿ ಅರ್ಥಮಾಡಿಕೊಳ್ಳತಕ್ಕವುಗಳೆಂದು ಭಾವಿಸಿಕೊಳ್ಳುತ್ತೇವೆ. ಅವುಗಳನ್ನು ವಿವರವಾಗಿ ಅಧ್ಯಯನ ಮಾಡುವದರಲ್ಲಿ ಅಥವಾ ಧ್ಯಾನಿಸುವದರಲ್ಲಿ ದೊಡ್ಡ ಪ್ರಯೋಜನವಿರುತ್ತದೆಂಬುದನ್ನು ಗ್ರಹಿಸದೆ ಹೋಗಬಹುದಾಗಿದೆ.

ಬೈಬಲ್ ದೇವರ ಲಿಖಿತ ಪ್ರಕಟನೆಯಾಗಿರುತ್ತದೆಂಬುದನ್ನು ನಾವು

ನೆನಪಿನಲ್ಲಿಟ್ಟುಕೊಳ್ಳಬೇಕು. ದೇವರು ಏನು ಬಯಸುತ್ತಾನೆಂಬುದರ ಬಗ್ಗೆ ಆತನಿಂದಲೇ ನೇರವಾಗಿ ಬಂದಿರುವಂಥ ತಿಳುವಳಿಕೆಗಳನ್ನು ಪಡೆಯುತ್ತೇವೆ. ನಮ್ಮ ಜೀವಿತಗಳಿಗೆ ಒಂದು ನಿಖರವಾದ ಮಾರ್ಗದರ್ಶನವನ್ನು ಇಲ್ಲಿ ಮಾತ್ರವೇ ನಾವು ಕಂಡುಕೊಳ್ಳುತ್ತೇವೆ. ಈ ಕಾರಣಕ್ಕಾಗಿಯೇ 1 ಥೆಸಲೋನಿಕದವರಿಗೆ ಪತ್ರಿಕೆಯನ್ನು ನಾವು ಕೇವಲ ಮತ್ತೊಂದು ಹಳೇ ಪತ್ರಿಕೆಯೆಂಬಂತೆ ಯೋಚಿಸುವ ಬದಲಾಗಿ, ಅದನ್ನು ಕ್ರೈಸ್ತರು ನಿಜವಾಗಿಯೂ ಏನು ಮಾಡಬೇಕೆಂದು ದೇವರು ಬಯಸುತ್ತಾನೆಂಬುದನ್ನು ತಿಳಿಯುವದಕ್ಕೆ ಒಂದು ಸದವಕಾಶವೆಂದು ಕಾಣತಕ್ಕದ್ದು. ಈ ಮಾತುಗಳು ಹೇಳಲ್ಪಡಬೇಕೆಂಬ ಕಾರಣಕ್ಕೆ ಮತ್ತು ಅವುಗಳು ಈ ಪರಿಸ್ಥಿತಿಗೆ ಉತ್ತಮವಾದವುಗಳೆಂದು ದೇವರು ಬಲ್ಲವನಾಗಿದ್ದನೆಂಬ ಕಾರಣಕ್ಕೆ ಈ ಮಾತುಗಳು ಬರೆಯಲ್ಪಟ್ಟಿರುತ್ತವೆ. ಇದು ಥೆಸಲೋನಿಕದವರೊಂದಿಗೆ ಮತ್ತು ನಮ್ಮೊಂದಿಗೆ ಸ್ವತಃ ದೇವರೇ ಮಾತಾಡುವದಾಗಿರುತ್ತದೆ!

ಕ್ರೈಸ್ತ ಬರಹಗಾರರು ಮತ್ತು ವಾಚಕರಿಗೆ, "ತಂದೆಯಾದ ದೇವರಲ್ಲಿಯೂ ಕರ್ತನಾದ ಯೇಸು ಕ್ರಿಸ್ತನಲ್ಲಿಯೂ" (1:1) ಎಂಬ ಪದಗುಚ್ಛವು ನಮಗೆ ನೆನಪಿಸುವದೇನೆಂದರೆ ನಮ್ಮ ಜೀವಿತಗಳು ಆತನ ಮೇಲೆ ಆಧಾರಗೊಂಡಿರುತ್ತವೆ, ಯಾಕೆಂದರೆ "ಆತನಲ್ಲಿಯೇ ನಾವು ಜೀವಿಸುತ್ತೇವೆ, ಚಲಿಸುತ್ತೇವೆ, ಇರುತ್ತೇವೆ" (ಅಪೊಸ್ತಲರ ಕೃತ್ಯಗಳು 17:28a) ಎಂಬುದನ್ನು ಜ್ಞಾಪಿಸುತ್ತದೆ. ದೇವರು ನಮ್ಮೊಂದಿಗೆ, ನಮ್ಮ ಪಕ್ಕದಲ್ಲಿ, ಮತ್ತು ನಮ್ಮೊಳಗೆ ಇದ್ದಾನೆಂಬ ವಾಸ್ತವಿಕತೆಯೊಂದಿಗೆ ಕ್ರೈಸ್ತರು ಜೀವಿಸಬಹುದು, ಮಾತಾಡಬಹುದು, ಮತ್ತು ಕೆಲಸ ಮಾಡಬಹುದು! ದೇವರ ಮತ್ತು ಯೇಸುವಿನ ಕುರಿತಾದ ನಿರಂತರವಾದ ಪ್ರಜ್ಞೆಯು ನಮಗೆ ನಮ್ಮ ಭಕ್ತಿಜೀವನಗಳನ್ನು ನಡಿಸುವದರಲ್ಲಿ ದೈನಂದಿನ ಪ್ರೋತ್ಸಾಹ ಮತ್ತು ಸ್ಫೂರ್ತಿಯನ್ನು ಒದಗಿಸುತ್ತದೆ. ಪೌಲನು ಇದನ್ನು ವ್ಯಕ್ತಪಡಿಸುವವನಾಗಿ ಹೀಗೆ ಹೇಳುತ್ತಾನೆ, "ನನಗಂತೂ ಬದುಕುವದೆಂದರೆ ಕ್ರಿಸ್ತನೇ" (ಫಿಲಿಪ್ಪಿ 1:21a) ಮತ್ತು "ಇನ್ನು ಜೀವಿಸುವವನು ನಾನಲ್ಲ, ಕ್ರಿಸ್ತನು ನನ್ನಲ್ಲಿ ಜೀವಿಸುತ್ತಾನೆ" (ಗಲಾತ್ಯ 2:20b).

ದೇವರೊಂದಿಗೆ ಜೀವಿಸುವ, ದಿನದ ಪ್ರತಿಯೊಂದು ಗಳಿಗೆಯಲ್ಲಿಯೂ ಆತನ ಪ್ರಸನ್ನತೆಯಲ್ಲಿ ಜೀವಿಸುವ ಈ ಪ್ರಜ್ಞೆಯನ್ನು ನಾವು ಹೇಗೆ ಬೆಳೆಸಿಕೊಳ್ಳಬಲ್ಲೆವು? ಇದನ್ನು ನಾವು ಕ್ರಿಸ್ತನಲ್ಲಿ ನಮ್ಮ ಸಹೋದರರು ಮತ್ತು ಸಹೋದರಿಯರ ಮಧ್ಯದಲ್ಲಿ ಹೇಗೆ ಪ್ರೋತ್ಸಾಹಿಸಬಲ್ಲೆವು? ಥೆಸಲೋನಿಕದವರು ತಮ್ಮ ದೇವರುಗಳನ್ನು ಬಿಟ್ಟುಬಿಡುವದರ ಮೂಲಕ (1:9), ದೇವರನ್ನು ಆತನ ವಾಕ್ಯವನ್ನು ಕೇಳಿ ಸ್ವೀಕರಿಸಿಕೊಳ್ಳುವ ಮೂಲಕ (2:13), ಕ್ರಿಸ್ತನನ್ನು ಅನುಸರಿಸುತ್ತಿದ್ದವರನ್ನು ಅನುಕರಣ ಮಾಡುವ ಮೂಲಕ (2:14), ಮತ್ತು ತಮ್ಮ ಕೆಲಸಕ್ಕೆ ಪ್ರೇರಣೆಯಾಗಿ ನಂಬಿಕೆ, ಪ್ರೀತಿ, ನಿರೀಕ್ಷೆಗಳ ಮೇಲೆ ಮುಖ್ಯ ಗಮನವನ್ನಿಡುವ ಮೂಲಕ (1:3) ಇದನ್ನು ಮಾಡಿದ್ದರು.

ದೇವರು ತನ್ನ ಜನರಿಗಾಗಿ ಏನನ್ನು ಬಯಸುತ್ತಾನೆ? ಪೌಲನ ಮೊದಲ ಆಲೋಚನೆಯು ಸಹೋದರರಿಗೆ "ಕೃಪೆಯನ್ನೂ ಶಾಂತಿಯನ್ನೂ" ವ್ಯಕ್ತಪಡಿಸುವದಾಗಿತ್ತು (1:1). ಲೇಖಕನ ಮನಸ್ಸಿನಲ್ಲಿದ್ದ ಪ್ರಬಲವಾದ ಯೋಚನೆಯು ಏನಾಗಿತ್ತೆಂದರೆ ತಾನು ಮತ್ತು ದೇವರು ಅವರ ಬಗ್ಗೆ ಏನನ್ನು ಯೋಚಿಸುತ್ತಾರೆಂಬುದನ್ನು ಥೆಸಲೋನಿಕದವರಿಗೆ ತಿಳಿಯಪಡಿಸುವದಾಗಿತ್ತು. ಈ ಎಳೆಯ ಕ್ರೈಸ್ತರು ದೇವರ ದಯೆ ಮತ್ತು ಆದರಣೆಯನ್ನು

ಹೊಂದಿಕೊಳ್ಳಬೇಕೆಂಬುದು ಪೌಲನ ಬಯಕೆಯಾಗಿತ್ತು. ಥೆಸಲೋನಿಕದವರಿಗೆ ಇನ್ನೂ ಅನೇಕ ಆಶೀರ್ವಾದಗಳು ಅಗತ್ಯವಿದ್ದಿರಬಹುದು ಅಥವಾ ಅವರು ಇಚ್ಛಿಸಿರಬಹುದು, ಆದರೆ ಇವೆರಡು ಅವೆಲ್ಲವುಗಳಿಗಿಂತಲೂ ಅತ್ಯಂಥ ದೊಡ್ಡವುಗಳಾಗಿದ್ದವು.

ಕ್ರೈಸ್ತರು ಹೇಗೆ ಒಬ್ಬರಿಗೊಬ್ಬರು ಸಹಾಯವನ್ನು ಮಾಡಬಹುದು ಎಂಬುದಕ್ಕೆ ಈ ಪುಸ್ತಕದ ಮೊದಲ ವಚನವು ಸಹ ಒಂದು ಉದಾಹರಣೆಯನ್ನು ಒದಗಿಸುತ್ತದೆ. ಪೌಲನು ಒಂದು ಪ್ರೋತ್ಸಾಹಗೊಳಿಸುವ ಪತ್ರಿಕೆಯನ್ನು ಬರೆಯುತ್ತಿದ್ದಾನೆ. ಥೆಸಲೋನಿಕದವರು ಅಂಥ ಮಾದರಿಯನ್ನು ಅನುಸರಿಸುವದರ ಮೌಲ್ಯವನ್ನು ಗುರುತಿಸಿಕೊಂಡಿದ್ದರು ಮತ್ತು ತಮ್ಮ ಬೋಧಕರನ್ನು ಅನುಕರಣ ಮಾಡುವವರಾಗಿದ್ದರು (1:6). ನೀನು ಒಬ್ಬ ಜಪತೆಯ ಕ್ರೈಸ್ತನಿಗೆ ಪ್ರೋತ್ಸಾಹವನ್ನು ಮಾಡಬಲ್ಲವನಾಗುವದಕ್ಕೆ ಮುನ್ನ ಎಷ್ಟು ಕಾಲ ನೀನು ಕ್ರೈಸ್ತನಾಗಿರತಕ್ಕದ್ದು? ಇದು ಹೊಸದಾಗಿ ಕ್ರೈಸ್ತರಾದವರು ಸಹ ಮಾಡಬಹುದಾದ ಒಂದು ಕಾರ್ಯವಾಗಿರುತ್ತದೆ.

ಬೈಬಲ್ ತರಗತಿಯಲ್ಲಿರುವ ಮಕ್ಕಳು ತಮ್ಮ ತಂದೆತಾಯಿಗಳಿಗೊಂದು ಭಕ್ತಿಯುಳ್ಳ ಪ್ರೋತ್ಸಾಹದ ಟಿಪ್ಪಣಿಯನ್ನು ಬರೆಯಬಹುದು. ಕಿರಿಯರು ಪ್ರಶಂಸಿಸಲ್ಪಟ್ಟವರು ಎಂಬುದನ್ನು ತೋರ್ಪಡಿಸುವದಕ್ಕಾಗಿ ಹಿರಿಯರು ಅವರಿಗೆ ತಮ್ಮ ಕೃತಜ್ಞತೆಗಳನ್ನು ಮಾತುಗಳಲ್ಲಿ ವ್ಯಕ್ತಪಡಿಸಬಹುದು. ದೂರದ ಸ್ಥಳಗಳಿಗೆ ಸ್ಥಳಾಂತರಗೊಂಡಿರುವ ಹಳೆಯ ಸದಸ್ಯರಿಗೆ ಅವರ ಒಳ್ಳೇ ಕಾರ್ಯಗಳನ್ನು ಮರೆತಿರುವದಿಲ್ಲ ಆದರೆ ಈಗಲೂ ಪ್ರಶಂಸಿಸಲ್ಪಡುತ್ತಿವೆಯೆಂಬುದನ್ನು ತೋರಿಸುವದಕ್ಕೆ ಅವರಿಗೆ ಬರೆದು ತಿಳಿಸಬಹುದು. ಕ್ರೈಸ್ತರು ಬೇರೆ ರಾಜ್ಯಗಳಲ್ಲಿ ಅಥವಾ ದೇಶಗಳಲ್ಲಿರುವ ತಮ್ಮ ಸಹೋದರರು ಹಾಗೂ ಸಹೋದರಿಯರಿಗೆ ದೇವರ ದಯೆ ಮತ್ತು ಆರೈಕೆಯು ದೊರಕಲಿ ಎಂದು ಹಾರೈಸಿ ಪತ್ರವನ್ನು ಬರೆಯಬಹುದಾಗಿದೆ.

ಇಂತಹ ಪರಿಚತವಾದ ವಚನದಲ್ಲಿ ಜೀವಿತಕಾಲದ ಒಂದು ಉತ್ತಮ ಅನ್ವಯಿಕೆಯನ್ನು ಕಂಡುಕೊಳ್ಳಬಹುದು. ದೇವರು ಅದನ್ನು ಆ ವಿಧದಲ್ಲಿಯೇ ಯೋಜನೆ ಮಾಡಿರುತ್ತಾನೆ, ಹೀಗೆ ನಾವು ಅದನ್ನು ಓದಿ, ಅರ್ಥಮಾಡಿಕೊಳ್ಳಲು, ಮತ್ತು ಅದನ್ನು ಕೈಕೊಂಡು ನಡೆಯಲು ಸಾಧ್ಯವಾಗುತ್ತದೆ!

*ದೇವರಿಗೆ ಕೃತಜ್ಞತಾಸ್ತುತಿ ಸಲ್ಲಿಸಿರಿ (1:2).* ಕೃತಜ್ಞತಾಭಾವವುಳ್ಳವರಾಗಿರುವದು ಕ್ರೈಸ್ತರಾಗಿರುವದರ ಭಾಗವಾಗಿರುತ್ತದೆ. ಪೌಲ, ಸೀಲ, ಮತ್ತು ತಿಮೊಥೆಯರು ಕೃತಜ್ಞತೆಯುಳ್ಳ ಬೋಧಕರಾಗಿದ್ದರು. ಅವರು ದೇವರಿಗೆ ಮಾಡುವ ಪ್ರಾರ್ಥನೆಗಳಲ್ಲಿ ಯಾವಾಗಲೂ ಕೃತಜ್ಞತಾಸ್ತುತಿಗಳನ್ನು ಅರ್ಪಿಸಿದರು: "ನಮ್ಮ ಪ್ರಾರ್ಥನೆಗಳಲ್ಲಿ ನಿಮಗೋಸ್ಕರ ವಿಜ್ಞಾಪನೆಮಾಡುವಾಗ ನಿಮ್ಮೆಲ್ಲರ ವಿಷಯದಲ್ಲಿ ದೇವರಿಗೆ ಕೃತಜ್ಞತಾಸ್ತುತಿ ಸಲ್ಲಿಸುತ್ತೇವೆ" (1:2). ಇದನ್ನು ಅವರು ಒಬ್ಬ ಬೋಧಕನ ಜೀವಿತದ ಒಂದು ಪ್ರಾಮುಖ್ಯವಾದ ಭಾಗವೆಂದು ಪರಿಗಣಿಸಿದ್ದರು, ಆದರೆ ಇದು ಕೇವಲ ಬೋಧಕರಿಗೂ ಪ್ರಸಂಗಿಗಳಿಗೂ ಮಾತ್ರವೇ ಆಗಿದೆಯೋ? ಈ ಬೆಲೆಯುಳ್ಳ ಪಾಠವು ನಮ್ಮೆಲ್ಲರಿಗೋಸ್ಕರವೂ ಆಗಿದೆ! ಪ್ರತಿಯೊಬ್ಬ ಕ್ರೈಸ್ತನಿಗೆ ಸಹ "ಯಾವಾಗಲೂ ಎಲ್ಲಾ ವಿಷಯಗಳಲ್ಲಿ . . . ಸ್ತೋತ್ರ ಮಾಡುತ್ತಾ" ಇರಬೇಕೆಂದು ಹೇಳಲಾಗಿರುತ್ತದೆ (ಎಫೆಸ 5:20a). ಸಾಮಾನ್ಯವಾಗಿ ಮಕ್ಕಳಿಗೆ ಕಲಿಸಿ

ಕೊಡುವ ಪದಗುಚ್ಛವು "ನಿಮಗೆ ಕೃತಜ್ಞತೆಗಳು" ಎಂದಾಗಿರುತ್ತದೆ. ಕ್ರೈಸ್ತರು "ಕೃತಜ್ಞತೆಗಳು" ಎಂದು ಹೇಳುವದನ್ನು ಕಲಿಯುವ ಅಗತ್ಯವಿರುತ್ತದೆ, ಅದು ಸಭ್ಯವಾದ ಮಾತು ಎಂಬ ಕಾರಣಕ್ಕಾಗಿ ಅಲ್ಲ (ಅದು ನಿಜಕ್ಕೂ ಸಭ್ಯವಾದ ಮಾತೇ!), ಆದರೆ ಅದೊಂದು ಭಕ್ತಿಯುಳ್ಳ ಮಾತಾಗಿರುತ್ತದೆ ಎಂಬ ಕಾರಣಕ್ಕಾಗಿಯೇ ಆಗಿದೆ.

ಈ ಕೃತಜ್ಞತೆಗಳನ್ನು ಅರ್ಪಿಸುವದು ಹೊಸ ಒಡಂಬಡಿಕೆಯ ಪತ್ರಿಕೆಗಳಲ್ಲಿ ಪರಿಚಿತವಿರುವ ಯೋಚನೆಯಾಗಿರುತ್ತದೆ. ಅದು ನಮ್ಮ ಪ್ರಾರ್ಥನೆಗಳಲ್ಲಿ ಒಂದು ಪರಿಚಿತವಾದ ಭಾಗವಾಗಿರುತ್ತದೋ? ನಾವು ಕೃತಜ್ಞತೆಗಳನ್ನು ಸಲ್ಲಿಸುವದಕ್ಕಾಗಿ ನಮ್ಮ ಜೀವಿತಗಳಲ್ಲಿ, ನಮ್ಮ ಕುಟುಂಬಗಳಲ್ಲಿ, ಮತ್ತು ನಮ್ಮ ಸಭೆಗಳಲ್ಲಿ ಕಾರಣಗಳನ್ನು ಹುಡುಕುತ್ತೇವೋ? ಯಾವದು ಒಳ್ಳೇದೋ ಅದನ್ನು ಯೋಚಿಸಿ ಅದಕ್ಕಾಗಿ ದೇವರಿಗೆ "ನಿಮಗೆ ಕೃತಜ್ಞತೆಗಳು" ಎಂದು ಹೇಳುವದು ನಮಗೆ ರೂಢಿಯಾಗಿರುತ್ತದೋ? ನಾವು ಏನಾದರೂ ಕೆಟ್ಟದ್ದು ಸಂಭವಿಸುವಾಗ ಸಹಾಯವನ್ನು ಕೇಳುವದಕ್ಕೆ ಎಷ್ಟು ಉತ್ಸುಕರಾಗಿರುತ್ತೇವೋ ಅದೇ ರೀತಿಯಲ್ಲಿ ಎಲ್ಲವೂ ಚೆನ್ನಾಗಿ ನಡೆಯುತ್ತಿರುವಾಗ ದೇವರಿಗೆ ನಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸುವದಕ್ಕೆ ಅಷ್ಟೇ ಉತ್ಸುಕರಾಗಿರುತ್ತೇವೋ? ನಾವು ಯಾವಾಗಲೂ ದೇವರಿಗೆ ಸ್ತೋತ್ರಗಳನ್ನು ಸಲ್ಲಿಸುವ ಜನರಾಗಿರೋಣ!

2ನೇ ವಚನಲ್ಲಿ ಏನು ಸಂಭವಿಸುತ್ತಿದೆ? ಪೌಲ, ಸೀಲ, ಮತ್ತು ತಿಮೊಥೆಯರು ಕೇವಲ ಕೃತಜ್ಞತಾರ್ಪಣೆಯ ಪ್ರಾರ್ಥನೆಗಳನ್ನಷ್ಟೆ ಮಾಡುತ್ತಿದ್ದರೋ? ಇಲ್ಲ, ಅವರು ಯಾರಿಗೋಸ್ಕರ ಕೃತಜ್ಞತಾಸ್ತುತಿಗಳನ್ನು ಸಲ್ಲಿಸುತ್ತಿದ್ದರೋ ಅವರಿಗೆ ಸಹ ತಾವು ಕೃತಜ್ಞತಾಸ್ತುತಿ ಸಲ್ಲಿಸುತ್ತಿದ್ದೇವೆಂಬುದನ್ನು ತಿಳಿಸಿದರು. ಕೃತಜ್ಞತಾಸ್ತುತಿಯ ಪ್ರಾರ್ಥನೆಯು ದೇವರ ವಿನ್ಯಾಸವಾಗಿರುತ್ತದೆ, ಆತನಿಗೆ ನಮ್ಮ ಕೃತಜ್ಞತಾಭಾವನೆಯನ್ನು ವ್ಯಕ್ತಪಡಿಸುವ ಒಂದು ದಾರಿಯಾಗಿ ಮಾತ್ರವಲ್ಲ, ಆದರೆ ಒಬ್ಬರೊಂದಿಗೊಬ್ಬರು ನಮ್ಮ ಸಂಬಂಧಗಳನ್ನು ಬೆಳೆಸಿಕೊಳ್ಳುವ ಒಂದು ದಾರಿಯಾಗಿ ಸಹ ಆಗಿರುತ್ತದೆ. ನಾವು ನಮ್ಮ ಸಹೋದರರಿಗೋಸ್ಕರ ಪ್ರಾರ್ಥನೆಯನ್ನು ಮಾಡಿದ ಬಳಿಕ ಅದನ್ನು ನಾವು ಅವರಿಗೆ ತಿಳಿಯಪಡಿಸತಕ್ಕದ್ದು. ಸಹೋದರರು ಕಷ್ಟಕ್ಕೊಳಗಾಗಿರುವ, ನಿರಾಶೆಗೊಂಡಿರುವ, ಬಲಹೀನ ಆತ್ಮಗಳಿಗೆ, "ನಾನು ಪ್ರತಿ ದಿನವೂ ನಿಮಗೋಸ್ಕರ ಪ್ರಾರ್ಥಿಸುತ್ತಿದ್ದೇನೆ" ಎಂದು ನಿಯತಕ್ರಮವಾಗಿ ಹೇಳುವದಾದರೆ ಅವರಿಗೆ ಎಷ್ಟೊಂದು ಸಹಾಯವಾಗುವದು! ಅವರು ಖಂಡಿತವಾಗಿಯೂ, "ಯಾರಿಗೂ ನನ್ನ ಆತ್ಮದ ಬಗ್ಗೆ ಚಿಂತೆಯೇ ಇಲ್ಲ" ಎಂದು ಎಂದಿಗೂ ಹೇಳಲಾರರು.

*ಭಕ್ತಿಯುಳ್ಳ ಜೀವಿತಗಳನ್ನು ಶ್ಲಾಘಿಸಿರಿ (1:3).* ಕೃತಜ್ಞತಾಸ್ತುತಿಯು ನಿಜವಾದದ್ದಾಗಿರಬೇಕು. ನಾವು ಕೃತಜ್ಞತೆಯುಳ್ಳವರಾಗಿರುವಾಗ, ಕೇವಲ ಒಂದು ಆಜ್ಞೆಯನ್ನು ಕೈಕೊಂಡು ನಡೆಯುತ್ತಿದ್ದೇವೋ ಅಥವಾ ನಾವು ಕೃತಜ್ಞತಾಸ್ತುತಿಯನ್ನು ವ್ಯಕ್ತಪಡಿಸಬಹುದಾದ ಒಳ್ಳೇ ಕ್ರಿಯೆಗಳನ್ನು ನಿಜವಾಗಿಯೂ ಜ್ಞಾಪಿಸಿಕೊಳ್ಳುತ್ತಿದ್ದೇವೋ? ಇಲ್ಲಿ ಬಣ್ಣಿಸಲ್ಪಟ್ಟಿರುವ ಪ್ರಕಾರ ಪ್ರಾರ್ಥಿಸುವ ಹಾಗೆ ಪೌಲನಿಗೆ ಸ್ಪೂರ್ತಿ ನೀಡಿದ್ದು ಏನೆಂದರೆ ಥೆಸಲೋನಿಕದವರ "ನಂಬಿಕೆಯ ಫಲವಾದ ಕೆಲಸವನ್ನೂ . . . ಪ್ರೀತಿಪೂರ್ವಕವಾದ ಪ್ರಯಾಸವನ್ನೂ ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೇಲಣ ನಿರೀಕ್ಷೆಯಿಂದುಂಟಾದ . . .

ಸ್ಮರಣೆಯನ್ನೂ" ಜ್ಞಾಪಕಮಾಡಿಕೊಂಡಿದ್ದು ಎಂಬದೆ (1:3). ಈ ಕ್ರೈಸ್ತರ ಒಳ್ಳೇ ಕ್ರಿಯೆಗಳು ಮತ್ತು ಮನೋಭಾವಗಳ ಬಗ್ಗೆ ಆತನು ಯೋಚಿಸಿದನು ಮತ್ತು ಬಳಿಕ ಆತನು ಪ್ರಾರ್ಥನೆ ಮಾಡುವ ವೇಳೇ ಅವುಗಳಿಗೋಸ್ಕರ ದೇವರಿಗೆ ಕೃತಜ್ಞತಾಸ್ತುತಿಯನ್ನು ಸಲ್ಲಿಸಿದನು. ಕ್ರೈಸ್ತರಾಗಿ, ನಮ್ಮ "ಯೋಚಿಸುವ" ಜೀವಿತಗಳು ನಮ್ಮ ಕ್ರೈಸ್ತ ಜೀವಿತಗಳ ಮೇಲೆ ಪರಿಣಾಮವನ್ನು ಬೀರುವವು. ನಮ್ಮ ಪ್ರಾರ್ಥನೆಗಳನ್ನು ಉತ್ತಮಗೊಳಿಸಿಕೊಳ್ಳಬೇಕೆಂದರೆ, ನಾವು ನಮ್ಮ ಯೋಚನೆಗಳ ಕಡೆಗೆ ಗಮನವನ್ನು ಕೊಡಬೇಕು.

ಸಾಮಾನ್ಯವಾಗಿ ನಾವು ನಮ್ಮ ನಡವಳಿಕೆಯನ್ನು ಭಕ್ತಿಹೀನ, ನೋವುಂಟು ಮಾಡುವ, ಅಥವಾ ಕಾನೂನುಬಾಹಿರವಾದವುಗಳಿಂದ ದೂರವಿರುವ ಮೂಲಕ ಮತ್ತು ಸರಿಯಾದದ್ದನ್ನು ಮಾತ್ರವೇ ಮಾಡುವ ಮೂಲಕ ತರಬೇತುಗೊಳಿಸಿಕೊಳ್ಳಲು ಪ್ರಯತ್ನಿಸುತ್ತೇವೆ, ಕೆಲವು ಸಾರಿ ನಾವು ನಮ್ಮ ಮನಸ್ಸುಗಳನ್ನು ತರಬೇತುಗೊಳಿಸಿಕೊಳ್ಳುವ ಬಗ್ಗೆ ಅಷ್ಟಾಗಿ ಯೋಚಿಸುವದಿಲ್ಲ. "ಮನಸ್ಸನ್ನು ನಿಗ್ರಹಿಸಿಕೊಳ್ಳುವದು"-ಬೇರೆಯವರಿಂದಲ್ಲ, ಆದರೆ ದೇವರ ನಿರ್ದೇಶನಗಳ ಪ್ರಕಾರವಾಗಿ ನಾವೇ ನಿಗ್ರಹಿಸಿಕೊಳ್ಳುವದು-ಒಂದು ಬೈಬಲಾಧಾರಿತ ಯೋಚನೆಯಾಗಿರುತ್ತದೆ. ಶಾಸ್ತ್ರಗಳು ನಮಗೆ "ಧ್ಯಾನಿಸಿರಿ" ಅಥವಾ ಯಾವದೋ ಒಂದರ ಮೇಲೆ "ನಿಮ್ಮ ಮನಸ್ಸಿಡಿರಿ" ಎಂದು ಹೇಳುವಾಗ, ನಮ್ಮ ಯೋಚನೆಗಳನ್ನು ಮತ್ತು ಮನೋಭಾವಗಳನ್ನು ಉತ್ತಮ ಪಡಿಸಿಕೊಳ್ಳುವದಕ್ಕೆ ನಮ್ಮ ಮನಸ್ಸುಗಳನ್ನು ಶಿಕ್ಷಿತಗೊಳಿಸಿಕೊಳ್ಳಬೇಕೆಂದು ಅಥವಾ ತರಬೇತುಗೊಳಿಸಿಕೊಳ್ಳಬೇಕೆಂದು ಪ್ರೋತ್ಸಾಹಿಸಲ್ಪಡುತ್ತಿದ್ದೇವೆಂದು ತಿಳಿಯತಕ್ಕದ್ದು.

ನಾವು ಯಾವ ಯೋಚನೆಗಳನ್ನು ಹೊಂದಿರಬೇಕೆಂದು ದೇವರು ಬಯಸುತ್ತಾನೆ? ಕೀರ್ತನೆಗಾರನು ಯಾವನು "ಯೆಹೋವನ ಧರ್ಮಶಾಸ್ತ್ರದಲ್ಲಿ ಆನಂದ ಪಡುವವನಾಗಿ ಅದನ್ನೇ ಹಗಲಿರುಳು ಧ್ಯಾನಿಸುತ್ತಿರುವನೋ ಅವನು ಎಷ್ಟೋ ಧನ್ಯನು" ಎಂಬದರ ಬಗ್ಗೆ ಮಾತಾಡುತ್ತಾನೆ (ಕೀರ್ತನೆ 1:2). ಪೌಲನು ಹೀಗೆ ಹೇಳಿದನು, ". . . ಯಾವದು ಸತ್ಯವೂ ಮಾನ್ಯವೂ ನ್ಯಾಯವೂ ಶುದ್ಧವೂ ಪ್ರೀತಿಕರವೂ ಮನೋಹರವೂ ಆಗಿದೆಯೋ ಯಾವದು ಸದ್ಗುಣವಾಗಿದೆಯೋ ಯಾವದು ಕೀರ್ತಿಗೆ ಯೋಗ್ಯವಾಗಿದೆಯೋ ಅವೆಲ್ಲವುಗಳನ್ನೂ ಲಕ್ಷ್ಯಕ್ಕೆ ತಂದುಕೊಳ್ಳಿರಿ" (ಫಿಲಿಪ್ಪಿ 4:8). ನಾವು ನಮ್ಮ ಜೊತೆಯ ಕ್ರೈಸ್ತರಲ್ಲಿ ಯಾವದು ಒಳ್ಳೇದೋ ಅದನ್ನು ಹುಡುಕಬೇಕು, ಅದರ ಕುರಿತು ಯೋಚಿಸಬೇಕು, ಅದರ ಕುರಿತು ಪ್ರಾರ್ಥಿಸಬೇಕು, ಮತ್ತು ಆ ಯೋಚನೆಗಳನ್ನು ಬೇರೆಯವರ ಸಂಗಡ ಹಂಚಿಕೊಳ್ಳಬೇಕು. ಅದು ನಮಗೆ ಮತ್ತು ನಾವು ಯಾರ ಜೀವಿತಗಳನ್ನು ಸ್ಪರ್ಶಿಸುತ್ತೇವೋ ಅವರಿಗೆ ಸಹಾಯವಾಗುವದು ಎಂದು ದೇವರು ಹೇಳಿದ್ದಾನೆ.

*ದೇವರೊಂದಿಗಿನ ನಿನ್ನ ಸಂಬಂಧದ ಮೇಲೆ ಧ್ಯಾನಿಸಿರಿ (1:4).* ನಮ್ಮ ಕುರಿತಾಗಿ ದೇವರು ಏನು ಯೋಚಿಸುತ್ತಾನೆ? ಇದನ್ನು ನಾವು ಹೇಗೆ ಕಂಡು ಹಿಡಿಯಬಹುದು? 4ನೇ ವಚನವನ್ನು ಓದಿರಿ: "ದೇವರು ಪ್ರೀತಿಸಿದ ಸಹೋದರರೇ, ಆತನು ನಿಮ್ಮನ್ನು ಆದುಕೊಂಡನೆಂಬದನ್ನೂ . . . ಬಲ್ಲೆವು." ಈ ವಚನವು ನಮಗೆ ಥೆಸಲೋನಿಕದ ಸಭೆಯಲ್ಲಿದ್ದವರ ಕುರಿತು ದೇವರು ಹೊಂದಿದ್ದ ಯೋಚನೆಗಳಲ್ಲಿ ಎರಡು ಯೋಚನೆಗಳನ್ನು ತಿಳಿಯಪಡಿಸುತ್ತದೆ: ದೇವರು ಅವರನ್ನು ಪ್ರೀತಿಸುತ್ತಾನೆ ಮತ್ತು ದೇವರು ಅವರನ್ನು

ಆದುಕೊಂಡನು. ದೇವರು ಕ್ರೈಸ್ತರನ್ನು ಪ್ರೀತಿಸುತ್ತಾನೆ ಮತ್ತು ನಮ್ಮನ್ನು ಆರಿಸಿಕೊಂಡಿದ್ದಾನೆಂಬುದನ್ನು ನಾವು ತಿಳಿದುಕೊಳ್ಳಬಲ್ಲೆವು. ನಾವು ಕೆಲವು ಸಾರಿ ಹೀಗೆ ಕೇಳಿಕೊಳ್ಳಬಹುದು, "ಆ ವ್ಯಕ್ತಿಯನ್ನು ಪ್ರೀತಿಸುವದಕ್ಕೆ ನನಗೆ ಬಹಳ ಕಷ್ಟಕರವೆನ್ನಿಸುತ್ತದೆ," ಅಥವಾ ಬಹುಶಃ, "ನಾನು ಆ ವ್ಯಕ್ತಿಯನ್ನು ಒಬ್ಬ ಕ್ರೈಸ್ತನಾಗಿರುವದಕ್ಕೆ ಆರಿಸಿಕೊಂಡಿರುತ್ತಿರಲಿಲ್ಲ." ಕೊರಿಂಥದ ಸಭೆಯು ಸಹೋದರರ ಮಧ್ಯದಲ್ಲಿ ವ್ಯಾಜ್ಯಗಳನ್ನು ಹೊಂದಿರುವಾಗ ಮತ್ತು ಅವರಿಗೆ ಒಂದೇ ದೇಹವಾಗಿ ಕೆಲಸ ಮಾಡಬೇಕೆಂದು ಪ್ರೋತ್ಸಾಹಿಸುವ ವೇಳೆ, ಅವರಿಗೆ ಹೀಗೆ ಹೇಳಲಾಯಿತು, ". . . ದೇವರು ಆ ಅಂಗಗಳಲ್ಲಿ ಪ್ರತಿಯೊಂದನ್ನು ತನಗೆ ಸರಿಯಾಗಿ ತೋಚಿದ ಪ್ರಕಾರ ದೇಹದೊಳಗೆ ಇಟ್ಟಿದ್ದಾನೆ" (1 ಕೊರಿಂಥ 12:18). ದೇವರು ಯಾರನ್ನು ತನ್ನ ಕುಟುಂಬದಲ್ಲಿಟ್ಟಿದ್ದಾನೋ ಅವರನ್ನು ಪ್ರೀತಿಸುತ್ತಾನೆ!

ಆವು ದೇವರ ಸೇವೆ ಮಾಡಲು ಪ್ರಯತ್ನಿಸುವದರಲ್ಲಿ ಪ್ರಾಮಾಣಿಕವಾಗಿರುವದಾದರೆ, ಜನರ ಕುರಿತು ಆತನಿಗಿರುವ ಮನೋದೃಷ್ಟಿಗಳನ್ನು ಅಂಗೀಕರಿಸಿಕೊಳ್ಳುತ್ತೇವೆ ಮತ್ತು ಆತನ ದೃಷ್ಟಿಕೋನವನ್ನು ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತೇವೆ. ನಾವು ಹೀಗೆ ಹೇಳುವೆವು, "ನಾನು ಆ ವ್ಯಕ್ತಿಯನ್ನು ಆರಿಸಿಕೊಂಡಿರುತ್ತಿರಲಿಲ್ಲವಾದಾಗ್ಯೂ, ದೇವರು ಆತನನ್ನು ಆದುಕೊಂಡಿದ್ದಾನೆ; ಮತ್ತು ಆತನಿಗೇ ಉತ್ತಮವಾಗಿ ಗೊತ್ತಿದೆ. ದೇವರು ಆತನನ್ನು ಆದುಕೊಂಡಿದ್ದಾನೆಂಬುದು ನನಗೆ ಗೊತ್ತಿದೆಯಾದ್ದರಿಂದ, ನಾನು ಆತನನ್ನು ಅದೇ ರೀತಿಯಲ್ಲಿಯೇ ಕಾಣುವೆನು." ಒಬ್ಬನನ್ನು ನಮ್ಮ ಸಹೋದರನೆಂದು ಕಾಣುವದಕ್ಕೆ ಯೋಗ್ಯನಲ್ಲವೆಂಬದಾಗಿ ಯೋಚಿಸಕೂಡದು; ಬದಲಾಗಿ, ಆತನು ನಮ್ಮನ್ನು "ನಾವು ಮಾಡಿದ ಪುಣ್ಯ ಕ್ರಿಯೆಗಳ ನಿಮಿತ್ತದಿಂದಲ್ಲ ಆತನ ಕರುಣೆಯಲ್ಲಿಯೇ . . . ರಕ್ಷಿಸಿದನು" ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು (ತೀತನಿಗೆ 3:5a). ನಾವು ಯೋಗ್ಯರಲ್ಲ ದಿದ್ದಾಗ್ಯೂ ದೇವರು ನಮ್ಮನ್ನು ರಕ್ಷಿಸಿದನೆಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳುವದರಿಂದ ಬೇರೆಯವರೊಂದಿಗೆ ಅವರಿಗೆ ಯೋಗ್ಯವಾದ ರೀತಿಯಲ್ಲಿಯಲ್ಲ, ಆದರೆ ದೇವರು ಅವರೊಂದಿಗೆ ನಡೆದುಕೊಳ್ಳುವ ರೀತಿಯಲ್ಲಿ-ಕರುಣೆಯಿಂದ-ನಡೆದುಕೊಳ್ಳುವಂತೆ ನಮಗೆ ಸಹಾಯವಾಗುತ್ತದೆ.

*ದೇವರ ಸಂದೇಶಕ್ಕೆ ಪ್ರತಿಕ್ರಿಯೆಯನ್ನು ತೋರಿರಿ (1:5).* ದೇವರು ನಮ್ಮೊಂದಿಗೆ ತನ್ನ ಸಂದೇಶವೊಂದರ ಮೂಲಕ ಮಾತಾಡುತ್ತಾನೆ. ಆತನು ಒಂದು ಸಂದೇಶದ ಮೂಲಕವಾಗಿ ತನ್ನನ್ನು ಪ್ರಟಕಗೊಳಿಸಿಕೊಂಡಿದ್ದಾನೆ. ಆತನು ತನ್ನ ರಕ್ಷಣೆಯ ಕೊಡುಗೆಯನ್ನು ಒಂದು ಸಂದೇಶದ ಮುಖಾಂತರ ಕೊಡುತ್ತಾನೆ. ಆತನು ತನ್ನ ಜನರಾಗಿ ನಮ್ಮನ್ನು ಒಂದು ಸಂದೇಶದ ಮುಖಾಂತರ ಮಾರ್ಗದರ್ಶಿಸುತ್ತಾನೆ. ಆತನ ಸಂದೇಶಕ್ಕೆ ನಾವು ಹೇಗೆ ಪ್ರತಿಕ್ರಿಯೆಯನ್ನು ತೋರಬೇಕು?

5ನೇ ವಚನವು ದೇವರ ಸಂದೇಶದ ಕುರಿತು ಎರಡು ಆಲೋಚನೆಗಳನ್ನು ತಿಳಿಸುತ್ತದೆ. ಮೊದಲನೆಯದು ಯಾವದೆಂದರೆ ಸುವಾರ್ತೆಯು "ಮಾತಿನಲ್ಲಿ" ಬಂದಿತು ಎಂಬದೆ. ಎರಡನೆಯದು ಯಾವದೆಂದರೆ ಸುವಾರ್ತೆಯು "ಶಕ್ತಿಯೊಡನೆಯೂ ಪವಿತ್ರಾತ್ಮದೊಡ ನೆಯೂ ಬಹು ನಿಶ್ಚಯದೊಡನೆಯೂ ಬಂದಿತು ಎಂಬದೆ". ಈ ಪ್ರತಿಯೊಂದು

ಆಲೋಚನೆಗಳು ಸಹ ತನ್ನ ಸುವಾರ್ತೆಯ ಹೇಗೆ ಹರಡಿಸಲ್ಪಡಬೇಕೆಂಬದು ದೇವರ ಬಯಕೆಯಾಗಿದೆ ಎಂಬುದರ ಬಗ್ಗೆ ಒಂದು ಕಾರ್ಯವನ್ನು ಪ್ರಕಟಗೊಳಿಸುತ್ತದೆ.

ಮೊದಲ ಯೋಚನೆಯೇನೆಂದರೆ ಸಂದೇಶವು ಸಾರಲ್ಪಡುವಾಗ ಸುವಾರ್ತೆಯು ಹರಡುತ್ತದೆ. ಸುವಾರ್ತೆಯ ನಿಜವಾದ ಸಂದೇಶವು ಜನರಿಗೆ ತಲುಪಬೇಕೆಂದರೆ, ದೇವರ ಸಂದೇಶವನ್ನು ಸತ್ಯವಾದ ಹಾಗೂ ನಿಖರವಾದ ಮಾತುಗಳಲ್ಲಿ ಬೋಧಿಸಲ್ಪಡತಕ್ಕದ್ದು. ನಾವು ಬೇರೆಯವರ ಹೇಳಿಕೆಗಳು ಮತ್ತು ಅವರ ಜೀವಿತಗಳ ಮೇಲೆ ಅವಲಂಭಿತ ರಾಗುವಾಗ, ಜನರು ಪಡೆದುಕೊಳ್ಳುವಂಥ ಸಂದೇಶಗಳಲ್ಲಿ ನ್ಯೂನ್ಯತೆಗಳು ಕಂಡು ಬರುವವು. ಸಂದೇಶವು ಪರಿಪೂರ್ಣವಾದದ್ದಾಗಿತ್ತೋ ಅಥವಾ ಇಲ್ಲವೋ ಎಂದು ನಮಗೆ ಎಂದಿಗೂ ಹೇಳುವದಕ್ಕಾಗುವದಿಲ್ಲ. ಆದುದರಿಂದ, ಸುವಾರ್ತೆಯು ಸಾರಲ್ಪಡುವದು ಸಾರಭೂತವಾಗಿತ್ತು ಮತ್ತು ಸಾರಭೂತವಾಗಿರುತ್ತದೆ. ಸುವಾರ್ತೆಯೆಂದರೆ ದೇವರ ಕುರಿತಾದ ಮನುಷ್ಯನ ಆಲೋಚನೆಗಳಲ್ಲ, ಆದರೆ ಮನುಷ್ಯನಿಗೆ ದೇವರ ಸಂದೇಶವಾಗಿ ರುತ್ತದೆ. ನಾವು “ದೇವರ ಆಲೋಚನೆಗಳನ್ನು” ತಿಳಿದುಕೊಳ್ಳುವಂತಾಗಲು ಪವಿತ್ರಾತ್ಮನು ತನಗೆ “ಮಾತುಗಳನ್ನು” ಅನುಗ್ರಹಿಸಿದನೆಂಬದಾಗಿ ಪೌಲನು ಪ್ರಕಟಗೊಳಿಸಿದನು (1 ಕೊರಿಂಥ 2:11-13). ಥೆಸಲೋನಿಕದವರು ಸಂದೇಶವನ್ನು ಕೇಳಿದಾಗ, ಅವರು “ಅದನ್ನು ಮನುಷ್ಯರ ವಾಕ್ಯವೆಂದೆಣಿಸದೆ ದೇವರ ವಾಕ್ಯವೆಂದೇ ತಿಳಿದು ಅಂಗೀಕರಿಸಿದ್ದರು” . . . (1 ಥೆಸಲೋನಿಕ 2:13)

ಸುವಾರ್ತೆಯು “ಶಕ್ತಿಯೊಡನೆಯೂ ಪವಿತ್ರಾತ್ಮದೊಡನೆಯೂ ಬಹು ನಿಶ್ಚಯದೊಡನೆಯೂ” ಬಂದಿತು. ಈ ಬಣ್ಣನೆಯು “ಶಕ್ತಿಯು ಯಾವದಾಗಿತ್ತು, ಮತ್ತು ಅದು ಹೇಗೆ ತೋರ್ಪಡಿಸಲ್ಪಟ್ಟಿತು?”; “ಪವಿತ್ರಾತ್ಮನು ಏನನ್ನು ಮಾಡಿದನು?”; “'ಬಹು ನಿಶ್ಚಯ'ಯು ಬೋಧಕರದ್ದೋ ಅಥವಾ ಶ್ರೋತೃಗಳದ್ದೋ?” ಎಂಬಂತಹ ಪ್ರಶ್ನೆಗಳನ್ನು ಎಬ್ಬಿಸುತ್ತದೆ. 5ನೇ ವಚನದ ಕಡೇ ಭಾಗವು ಈ ಪ್ರಶ್ನೆಗಳ ಉತ್ತರಗಳೊಳಗೆ ಪ್ರಯೋಜನಕರವಾದ ಅಂತರ್ದೃಷ್ಟಿಗಳನ್ನು ನಮಗೆ ಒದಗಿಸುತ್ತದೆ. “ನಾವು ನಿಮ್ಮಲ್ಲಿದ್ದು ನಿಮಗೋಸ್ಕರ ಎಂತವರಾಗಿ ವರ್ತಿಸಿದೆವೆಂಬದು” ಎಂಬುದೇ ಶಕ್ತಿ, ಪವಿತ್ರಾತ್ಮ, ಮತ್ತು ಬಹು ನಿಶ್ಚಯಗಳ ತೋರ್ಪಡಿಸುವಿಕೆಯಾಗಿತ್ತು. ಈ ವಿಗ್ರಹಾರಾಧಕ ಜನಾಂಗದವರು ಬೋಧಕರ ಜೀವಿತಗಳನ್ನು ನೋಡಿದಾಗ, ಅದು ಸುವಾರ್ತೆಗೆ ವಿಧೇಯರಾಗುವಂತೆ ಅವರಿಗೆ ಸಹಾಯವಾಯಿತು. ಇದರಲ್ಲಿ ಪವಿತ್ರಾತ್ಮನಿಂದ ಮಾಡಲ್ಪಟ್ಟ ಸ್ವಭಾವಿಕವಾದ ಅದ್ಭುತಗಳು ಮಾತ್ರವೇ ಅಲ್ಲ, ಆದರೆ ಭಕ್ತಿಯುಳ್ಳ ಜೀವಿತಗಳ ಆತ್ಮೀಕ ಶಕ್ತಿಯು ಸಹ ಸೇರಿತ್ತು.

ಪ್ರಸಂಗಿಯಾದ Bob Abney ಮತ್ತು ಇತತರು 1993ರಲ್ಲಿ Albaniaಗೆ ಹೋಗಿದ್ದರು, ಆತನಿಗೆ ಒಬ್ಬ ಯುವಕನಿಗೆ ಸುವಾರ್ತೆಯನ್ನು ಕಲಿಸುವ ಸಂದರ್ಭವು ಸಿಕ್ಕಿತ್ತು. ಕ್ರೈಸ್ತರ ಗುಂಪಿನೊಂದಿಗೆ ಅಧ್ಯಯನ ಮಾಡಿದ ಬಳಿಕ, ಆ ಯುವಕನು ಹೀಗೆ ಹೇಳಿದನು, “ನೀವು ಬೇರೆ ಧರ್ಮಗಳಿಗಿಂತಲೂ ವ್ಯತ್ಯಾಸವಾಗಿದ್ದೀರಿ.” ಯಾವದು ಆ ವ್ಯತ್ಯಾಸ ಎಂಬದಾಗಿ Bob ಕೇಳಿದಾಗ, ಆ ವ್ಯಕ್ತಿಯು ಹೀಗೆ ಉತ್ತರಿಸಿದನು, “ನೀವು ಒಬ್ಬರನ್ನೊಬ್ಬರು ಪ್ರೀತಿಸುತ್ತೀರಿ.” ಆತನು ಕ್ರೈಸ್ತರ ಜೀವಿತಗಳಿಂದ ಸ್ವೀಕರಿಸಿದ ಶಕ್ತಿಶಾಲಿ ಸಂದೇಶ

ಅದಾಗಿತ್ತು. ಯೇಸು ಎಲ್ಲಾ ಕ್ರೈಸ್ತರಿಗೂ ಈ ಪ್ರೀತಿಯ ಶಕ್ತಿಯನ್ನು ಸುವಾರ್ತೆಯ ಭಾಗವಾಗಿ ವಾಗ್ದಾನ ಮಾಡಿದನು: "ನಿಮ್ಮೊಳಗೆ ಒಬ್ಬರ ಮೇಲೊಬ್ಬರಿಗೆ ಪ್ರೀತಿಯಿದ್ದರೆ ಎಲ್ಲರೂ ನಿಮ್ಮನ್ನು ನನ್ನ ಶಿಷ್ಯರೆಂದು ತಿಳುಕೊಳ್ಳುವರು" (ಯೋಹಾನ 13:35). ವಾಕ್ಯವು ಕಲಿಸಲ್ಪಡುವ ಪ್ರತಿ ಸಾರಿಯೂ ಸಂದೇಶದ ಈ ಪ್ರಾತ್ಯಕ್ಷತೆಯು ತೋರಿಸಲ್ಪಡುವಂತೆ ಮಾಡುವದಕ್ಕೆ ಜಾಗ್ರತೆ ವಹಿಸೋಣ!

*ಮುಕ್ತಾಯ*. ನಮ್ಮ ಸಹೋದರರು ಹಾಗೂ ಸಹೋದರಿಯರ ಆತ್ಮೀಕ ಹಿತಾಸಕ್ತಿಗಾಗಿ ಕಳಕಳಿಯನ್ನು ವ್ಯಕ್ತಪಡಿಸುವದು, ಅವರಿಗಾಗಿ ಕೃತಜ್ಞತಾಸ್ತುತಿಯೊಡನೆ ಪ್ರಾರ್ಥಿಸುವದು, ಅವರಿಗಾಗಿ ನಾವು ಪ್ರಾರ್ಥಿಸುತ್ತಿದ್ದೇವೆಂಬುದನ್ನು ಅವರಿಗೆ ಹೇಳುವದು, ಮತ್ತು ದೇವರು ಅವರನ್ನು ಪ್ರೀತಿಸುತ್ತಾನೆಂಬ ಭರವಸೆಯನ್ನು ಪುನಃ ಅವರಿಗೆ ಕೊಡುವದು ಇವೆಲ್ಲವೂ ದೇವರ ಕೃತಜ್ಞತೆಯುಳ್ಳ ಹಿಂಬಾಲಕನಾಗಿರುವದರಲ್ಲಿ ಸೇರಿರುತ್ತವೆ. ಈ ಸಂಗತಿಗಳನ್ನು ಮಾಡುವದರಿಂದ ದೇವರು ಹೇಗಿರುತ್ತಾನೆ ಮತ್ತು ತನ್ನ ಜನರೊಂದಿಗೆ ಹೇಗೆ ನಡೆದುಕೊಳ್ಳಬೇಕೆಂದು ಆತನು ಬಯಸುತ್ತಾನೆ ಎಂಬುದನ್ನು ನಮಗೆ ಜ್ಞಾಪಿಸಲ್ಪಡುವದು. ನಾವು ದೇವರಿಗೆ ಕೃತಜ್ಞತೆಯುಳ್ಳವರಾಗಿರುವಾಗ, ನಾವು ಬೇರೆಯವರಿಗೆ ಸಹಾಯಕರವಾಗಿರುವ ರೀತಿಯಲ್ಲಿ ಈ ಕೃತಜ್ಞತೆಯನ್ನು ಆತನಿಗೆ ವ್ಯಕ್ತಪಡಿಸುವ ದಾರಿಗಳನ್ನು ಕಂಡುಕೊಳ್ಳುವೆವು. ನಾವು ಈ ಆದಿ ಕ್ರೈಸ್ತರ ಮಾರ್ಗದರ್ಶನವನ್ನು ಅನುಸರಿಸೋಣ! TP

## ಸುವಾರ್ತೆಯು ಹೇಗೆ ಬರುವದು? (1:2-5)

ಪೌಲನು ಥೆಸಲೋನಿಕದವರಿಗಾಗಿ ಕೃತಜ್ಞತಾಸ್ತುತಿಯನ್ನು ಸಲ್ಲಿಸಿದ್ದಕ್ಕೆ ಇನ್ನೊಂದು ಕಾರಣವೆಂದರೆ ದೇವರು ಅವರನ್ನು ಆದುಕೊಂಡದ್ದು. ಅವರು ಸುವಾರ್ತೆಯನ್ನು ಅಂಗೀಕರಿಸಿಕೊಂಡಾಗ ಈ ಆದುಕೊಳ್ಳುವಿಕೆಯು ಸಂಭವಿಸಿತು. ದೇವರಿಂದ ಆದುಕೊಳ್ಳಲ್ಪಟ್ಟವರು ಸುವಾರ್ತೆಯನ್ನು ಕೇಳಿಸಿಕೊಂಡು ಅದನ್ನು ಸ್ವೀಕರಿಸಿಕೊಳ್ಳುವದಕ್ಕೆ ತೀರ್ಮಾನಿಸಿಕೊಂಡ ಯಾವದೇ ಕುಲ ಅಥವಾ ದೇಶಕ್ಕೆ ಸೇರಿದ ಜನರಾಗಿರುವರು. ಆದುಕೊಳ್ಳಲ್ಪಟ್ಟವರಾಗುವದನ್ನು ನಾವು ಆರಿಸಿಕೊಂಡವರಾಗಿದ್ದೇವೆ. Raymond C. Kelcy ಹೀಗೆ ಹೇಳುತ್ತಾನೆ, "ದೇವರ ಆದುಕೊಳ್ಳುವಿಕೆಯ ವಿಧಾನದ [ಮುಖಾಂತರ] . . . ಆದುಕೊಳ್ಳಲ್ಪಟ್ಟವನಾಗುವಂತೆ ಮನುಷ್ಯನು ಮನಸ್ಸು ಮಾಡುವಿಕೆಯ ಮೇಲೆ [ದೇವರ] ಆದುಕೊಳ್ಳುವಿಕೆಯು ಶರತ್ತುಬದ್ಧವಾಗಿರುತ್ತದೆ."[10]

ಥೆಸಲೋನಿಕದವರು ಸುವಾರ್ತೆಯನ್ನು ಹೇಗೆ ಸ್ವೀಕರಿಸಿಕೊಂಡರೆಂಬುದನ್ನು ನೋಡುವಾಗ ದೇವರು ಹೇಗೆ ಆತ್ಮಗಳನ್ನು ಪರಿವರ್ತಿಸಿ ತನ್ನ ಮಹಿಮೆಯುಳ್ಳ ಕುಟುಂಬದೊಳಗೆ ಕರೆ ತರುತ್ತಾನೆಂಬುದನ್ನು ಅರ್ಥಮಾಡಿಕೊಳ್ಳುವದಕ್ಕೆ ಸಹಾಯವಾಗುತ್ತದೆ. ಸುವಾರ್ತೆಯು ಅವರಿಗೆ ಹೇಗೆ ಬಂದಿತು, ಮತ್ತು ಅದು ನಮಗೆ ಹೇಗೆ ಬರುತ್ತದೆ?

*ಸುವಾರ್ತೆಯು ಮಾತಿನಿಂದ ಬರುತ್ತದೆ.* ಥೆಸಲೋನಿಕದವರನ್ನು ಪರಿವರ್ತಿಸಿದ್ದು ಮಾತಿನ ಶಕ್ತಿಯಲ್ಲವಾದರೂ, ಸುವಾರ್ತೆಯನ್ನು ಮಾತಿನ ಮೂಲಕ ಹೇಳಿ ಜನರ

ಮನಸ್ಸುಗಳಿಗೆ ತಲುಪಿಸಲ್ಪಡಬೇಕಾಗಿತ್ತು. ಸುವಾರ್ತೆಯ ಎಲ್ಲಾ ಸಾರುವಿಕೆಯು ಮಾತಿನಿಂದ ಅಥವಾ ಬರಹದಿಂದ ಆರಂಭಗೊಳ್ಳುತ್ತದೆ.

*ಅದು ಶಕ್ತಿಯೊಡನೆ ಬಂದಿತು.* ನಮ್ಮ ಸಾರುವಿಕೆಯ ಮಾತುಗಳು ಕೇವಲ ಆರಂಭವಷ್ಟೇ ಆಗಿರುತ್ತವೆ, ಹೊರತು ಮುಕ್ತಾಯವಲ್ಲ. ದೇವರು ತನ್ನ ವಾಕ್ಯವನ್ನು ಹೇಗೆ ಉಪಯೋಗಿಸುತ್ತಾನೆಂಬುದನ್ನು ಮಾನವ ಮನಸ್ಸುಗಳು ಗ್ರಹಿಸಲಾರವು. ತನ್ನ ಶಕ್ತಿಯನ್ನು ಬಳಸುವವನಾಗಿ ಆತನು ತನ್ನ ವಾಕ್ಯದ ಮೂಲಕ ಕಾರ್ಯಮಾಡುತ್ತಾನೆ ಮತ್ತು ತಾನಿಚ್ಛಿಸುವ ರೀತಿಯ ಜನರನ್ನಾಗಿ ನಮ್ಮನ್ನು ಆಕಾರಕ್ಕೆ ತರುತ್ತಾನೆ. ನಮಗೆ ಅದನ್ನು ವಿವರಿಸುವದಕ್ಕೆ ಸಾಧ್ಯವಿಲ್ಲವಾದರೂ, ನಾವು ಅದನ್ನು ಆನಂದಿಸಬಹುದು.

*ಅದು ಪವಿತ್ರಾತ್ಮನಲ್ಲಿ ಬಂದಿತು.* ದೇವರ ವಾಕ್ಯವು ಪವಿತ್ರಾತ್ಮನ ಖಡ್ಗವಾಗಿದೆ (ಎಫೆಸ 6:17). ಪೌಲನು, ಪವಿತ್ರಾತ್ಮನಿಂದ ಮಾರ್ಗದರ್ಶಿಸಲ್ಪಟ್ಟವನಾಗಿ, ಅವರಿಗೆ ಸತ್ಯ ವಾಕ್ಯವನ್ನು ತಂದನು, ಮತ್ತು ಆತನು ಮಾತಾಡಿದ ಮಾತು ದೇವರ ಉದ್ದೇಶಗಳನ್ನು ನೆರವೇರಿಸುವಂತೆ ಪವಿತ್ರಾತ್ಮನಿಂದ ಬಲಗೊಳಿಸಲ್ಪಟ್ಟಿತು.

*ಅದು ಬಹು ನಿಶ್ಚಯದಿಂದ ಬಂದಿತು.* ಅದು ಎಲ್ಲರ ಮೇಲಿರುವ ದೇವರ ಪ್ರೀತಿಯ ಬಗ್ಗೆ, ಪ್ರತಿಯೊಬ್ಬ ಮನುಷ್ಯನಿಗಾಗಿ ಕ್ರಿಸ್ತನು ಹೊಂದಿದ ಮರಣದ ಬಗ್ಗೆ, ಮತ್ತು ಸುವಾರ್ತೆಗೆ ವಿಧೇಯರಾಗುವವರೆಲ್ಲರೂ ರಕ್ಷಣೆ ಹೊಂದುವರೆಂಬ ಸಾಧ್ಯತೆಯ ಕುರಿತ ಬಹು ನಿಶ್ಚಯವನ್ನು ಮೂಡಿಸಿತು. ಅಷ್ಟುಮಾತ್ರವಲ್ಲದೆ, ಪೌಲ, ಸೀಲ, ಮತ್ತು ತಿಮೊಥೆಯರು ದೇವರ ಕೆಲಸವು ಮಾಡಲ್ಪಡುತ್ತಿದೆಯೆಂಬ ಭರವಸೆಯಿಂದ ತುಂಬಿದವರಾಗಿದ್ದರು.

ಥೆಸಲೋನಿಕದವರು ಸಾರುವದನ್ನು ಕೇಳಿಸಿಕೊಂಡರು, ಅದನ್ನು ತಮ್ಮ ಆತ್ಮಗಳೊಳಗೆ ಅಂಗೀಕರಿಸಿಕೊಂಡರು, ಮತ್ತು ಸುವಾರ್ತೆಗೆ ಸಂಪೂರ್ಣವಾಗಿ ವಿಧೇಯರಾಗುವಂತೆ ಅವರನ್ನು ನಡಿಸುವದಕ್ಕೆ ಪವಿತ್ರಾತ್ಮನು ಆ ಮಾತುಗಳನ್ನು ಸಾಧನಗಳನ್ನಾಗಿ ಬಳಸಿದನು. ಸುವಾರ್ತೆಯು ಅವರಿಗೆ ಈ ವಿಧದಲ್ಲಿ ಬಂದಿತು; ಅದು ಇಂದು ಸಹ ಅದೇ ರೀತಿಯಲ್ಲಿ ನಮಗೆ ಬರುತ್ತದೆ. EC

## ಅವರು ಆದುಕೊಳ್ಳಲ್ಪಟ್ಟವರೆಂಬ ಖಚಿತತೆ (1:4-7)

4ನೇ ವಚನದಲ್ಲಿ, ದೇವರು ಥೆಸಲೋನಿಕದಲ್ಲಿನ ಸಹೋದರರನ್ನು "ಆದುಕೊಂಡನು" (NASB) ಅಥವಾ "ಆಯ್ಕೆ ಮಾಡಿಕೊಂಡನು" (KJV) ಎಂಬದಾಗಿ ಪೌಲನು ಒತ್ತಿ ಹೇಳಿದನು. ದೇವರ ಪ್ರೀತಿಯಲ್ಲಿರುವಂತೆ ಆದುಕೊಳ್ಳಲ್ಪಡುವದು ನಿಜಕ್ಕೂ ಒಂದು ಆಶೀರ್ವಾದವೇ.

ಥೆಸಲೋನಿಕದವರು "*ದೇವರು ಪ್ರೀತಿಸಿದವರು*" ಆಗಿದ್ದರು (ವ. 4). ಒಂದು ಅರ್ಥದಲ್ಲಿ, ದೇವರು ಎಲ್ಲರನ್ನೂ ಪ್ರೀತಿಸುತ್ತಾನೆ (ಯೋಹಾನ 3:16), ಆದರೆ ಆತನ ಪ್ರೀತಿಯನ್ನು ಕೊಡುಗೆಯನ್ನು ಅಂಗೀಕರಿಸಿಕೊಂಡು ಆತನೊಂದಿಗೆ ಸಂಧಾನವಾಗಿರುವ ಕ್ರೈಸ್ತರು ಮಾತ್ರವೇ ಈ ವಿಶೇಷವಾದ ಅರ್ಥದಲ್ಲಿ ಆತನಿಗೆ ಪ್ರಿಯರಾಗಿರುತ್ತಾರೆ. "[ತಮ್ಮನ್ನು] ದೇವರ ಪ್ರೀತಿಯಲ್ಲಿ ಕಾಪಾಡಿಕೊಳ್ಳಲು" ಆತನ ಹಿಂಬಾಲಕರು ಆತನಿಗೆ ವಿಧೇಯರಾಗತಕ್ಕದ್ದು (ಯೂದನು 21).

ದೇವರ ಪ್ರೀತಿಯಲ್ಲಿರುವದಕ್ಕೆ ಆದುಕೊಳ್ಳಲ್ಪಟ್ಟವರಾಗುವದು ಎರಡು ಸಂಗತಿಗಳ ಮೇಲೆ ಅವಲಂಭಿತವಾಗಿರುತ್ತದೆ. ಮೊದಲನೆಯದಾಗಿ, ಅದು ದೇವರು ಕ್ರಿಯೆಯ ಮೇಲೆ ಆಧಾರವಾಗಿರುತ್ತದೆ. ಯೋಹಾನ 3:16 ಹೀಗೆ ಹೇಳುತ್ತದೆ, "ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು . . . ಕೊಟ್ಟನು." ಎರಡನೆಯದಾಗಿ, ಆತನ ವರದಾನವನ್ನು ನಂಬಿಕೆ ಮತ್ತು ವಿಧೇಯತೆಯ ಮೂಲಕ ನಾವು ಸ್ವೀಕರಿಸಿಕೊಳ್ಳುವದರ ಮೇಲೆ ಆಧಾರವಾಗಿರುತ್ತದೆ. ಇಬ್ರಿಯ ಪತ್ರಿಕೆಯ ಬರಹಗಾರನು ಹೀಗೆ ಬರೆಯುತ್ತಾನೆ, "ತನಗೆ ವಿಧೇಯರಾಗುವವರೆಲ್ಲರಿಗೂ ನಿರಂತರವಾದ ರಕ್ಷಣೆಗೆ ಕಾರಣನಾದನು" (ಇಬ್ರಿಯ 5:9). ದೇವರು ಒಂದು ಗುಂಪನ್ನು ರಕ್ಷಣೆಗಾಗಿ ಮತ್ತು ಒಂದು ಗುಂಪನ್ನು ನಾಶನಕ್ಕಾಗಿ ಆರಿಸಿಕೊಂಡಿದ್ದಾನೆ. ನಾವು ನಂಬಿಕೆಯಿಟ್ಟು ಆತನಿಗೆ ವಿಧೇಯರಾಗುವ ಮೂಲಕ ರಕ್ಷಣೆಯನ್ನಾದರೂ ಆರಿಸಿಕೊಳ್ಳಬಹುದು, ಅಥವಾ ಆತನ ಮಗನನ್ನು ತಿರಸ್ಕರಿಸುವ ಮೂಲಕ ನಾಶನವನ್ನಾದರೂ ಆರಿಸಿಕೊಳ್ಳಬಹುದು (ಯೋಹಾನ 12:48).

ಥೆಸಲೋನಿಕದವರು ವಿಧೇಯರಾಗಿದ್ದರು, ಪೌಲನು ಅವರ ಬಗ್ಗೆ ಮಾಡಿದ ವರ್ಣನೆಯಲ್ಲಿ ಅದು ಸ್ಪಷ್ಟವಾಗಿ ಕಂಡು ಬರುತ್ತದೆ (ನೋಡಿರಿ 1 ಥೆಸಲೋನಿಕ 2:13). ಆತನು ಹೀಗೆ ಬರೆದನು, "ನೀವು ನಮ್ಮನ್ನೂ ಕರ್ತನಾದ ಯೇಸುವನ್ನೂ ಅನುಸರಿಸುವವರಾದಿರಿ" (ವ. 6). ಪೌಲನು ಕ್ರಿಸ್ತನನ್ನು ಅನುಸರಿಸುವದಕ್ಕೆ ಪರಿಶ್ರಮ ಪಟ್ಟನು, ಮತ್ತು ಬೇರೆಯವರು ತನ್ನ ಮಾದರಿಯನ್ನು ಅನುಸರಿಸಬೇಕೆಂಬುದು ಆತನ ಬಯಕೆಯಾಗಿತ್ತು (1 ಕೊರಿಂಥ 11:1). ಆದುದರಿಂದ, ಆತನು "ಮಕೆದೋನ್ಯದಲ್ಲಿಯೂ ಆಖಾಯದಲ್ಲಿಯೂ ಕ್ರಿಸ್ತನನ್ನು ನಂಬುವವರೆಲ್ಲರಿಗೆ ಮಾದರಿಯಾದಿರಿ" (ವ. 7) ಎಂದು ಹೇಳಿದಾಗ, ಆತನು ಅವರನ್ನು ವಿಧೇಯರಾಗಿದ್ದಕ್ಕೆ ಮತ್ತು ತಮ್ಮ ಮಾದರಿಯನ್ನು ಅನುಸ ರಿಸುವಂತೆ ಬೇರೆಯವರನ್ನು ಪ್ರೋತ್ಸಾಹಿಸಿದ್ದಕ್ಕೆ ಪ್ರಶಂಸೆಯನ್ನು ವ್ಯಕ್ತಪಡಿಸುತ್ತಿದ್ದಾನೆ.

ಕ್ರೈಸ್ತರು ಇಂದು "*ದೇವರು ಪ್ರೀತಿದವರು.*" ಥೆಸಲೋನಿಕದವರು ವಿಧೇಯರಾಗಿದ್ದ ರಾದ್ದರಿಂದ, ಅವರು ಆದುಕೊಳ್ಳಲ್ಪಟ್ಟವರು ಎಂಬ ನಿಶ್ಚಯತೆಯು ಪೌಲನಿಗಿತ್ತು. ಅದೇ ರೀತಿಯಲ್ಲಿಯೇ, ಕ್ರೈಸ್ತರು ವಿಧೇಯತೆಯ ಜೀವಿತಗಳನ್ನು ನಡಿಸುವಾಗ, ನಾವು ಅವರು ಆದುಕೊಳ್ಳಲ್ಪಟ್ಟವರೆಂಬ ನಿಶ್ಚಯತೆಯನ್ನು ಹೊಂದಿರಬಹುದು. ಖಂಡಿತವಾಗಿಯೂ, ನಾವು ಹೀಗೆ ಹಾಡುವದು ಸರಿಯಾಗಿಯೇ ಇರುತ್ತದೆ,

ಯೇಸುವಿನ ಬಾಹುಗಳಲ್ಲಿ ಸುರಕ್ಷಿತ,
ಆತನ ಸೌಮ್ಯವಾದ ಎದೆಯಲ್ಲಿ ಭದ್ರ,
ಅಲ್ಲಿ ಆತನ ಪ್ರೀತಿಯ ನೆರಳಿನಲ್ಲಿ,
ಸುಖವಾಗಿ ನನ್ನ ಆತ್ಮವು ವಿಶ್ರಮಿಸುವದು.[11]

ಥೆಸಲೋನಿಕದವರ ಆದುಕೊಳ್ಳುವಿಕೆಯ ಬಗ್ಗೆ ಪೌಲನಿಗೆ ನಿಶ್ಚಯತೆಯಿತ್ತು, ಮತ್ತು ನಾವು ನಮ್ಮ ಆದುಕೊಳ್ಳಲ್ಪಟ್ಟಿರುವಿಕೆಯ ಬಗ್ಗೆ ನಿಶ್ಚಯತೆಯನ್ನು ಹೊಂದಿರಬಲ್ಲೆವು. EE

**ನೆನಪಿಟ್ಟುಕೊಳ್ಳಬೇಕಾದ ಒಂದು ಮಾದರಿ (1:6-8)**

ಸುವಾರ್ತೆಯನ್ನು ಸ್ವೀಕರಿಸಿಕೊಂಡ ತಕ್ಷಣದಲ್ಲೇ ಥೆಸಲೋನಿಕದವರು ಹಿಂಸೆಗೊಳಗಾದರು. ಹೇಗೂ, ಆ ಹಿಂಸೆಯ ಹೊರತಾಗಿಯೂ ಅವರು ಸಂತೋಷಿಸಿದರು ಯಾಕೆಂದರೆ ಅವರು ನಿತ್ಯಜೀವಕ್ಕೆ ಬಾಧ್ಯಸ್ಥರಾಗುತ್ತಿದ್ದಾರೆಂಬುದನ್ನು ಬಲ್ಲವರಾಗಿದ್ದರು. ಅವರ ಬಲವಾದ ನಂಬಿಕೆಯ ಸುದ್ದಿಯು ಆ ಪ್ರಾಂತ್ಯದಲ್ಲೆಲ್ಲಾ ಹಬ್ಬಿತು, ಮತ್ತು ಅವರು ಮಕೆದೋನ್ಯ ಹಾಗೂ ಆಖಾಯದಲ್ಲಿರುವ ಎಲ್ಲಾ ವಿಶ್ವಾಸಿಗಳಿಗೆ ಮಾದರಿಯಾದರು. ಅವರು ಸುವಾರ್ತೆಯನ್ನು ಸಂತೋಷದಿಂದ ಅಂಗೀಕರಿಸಿಕೊಂಡಿದ್ದರು, ಮತ್ತು ಅದನ್ನು ಅಂಗೀಕರಿಸಿಕೊಂಡ ಬಳಿಕ ಕಷ್ಟಗಳ ಹೊರತಾಗಿಯೂ ನಂಬಿಗಸ್ತರಾಗಿದ್ದರು.

ಒಬ್ಬ ವ್ಯಕ್ತಿಯು ಕ್ರೀಡೆಗಳಲ್ಲಿ ಹೇಗೆ ಉನ್ನತಿ ಸಾಧಿಸಬೇಕೆಂಬುದಕ್ಕೆ ಒಂದು ಮಾದರಿಯಾಗಿರಬಲ್ಲನು, ಆದರೆ ಆ ಮಾದರಿಯು ಕಾಲವು ಗತಿಸಿದ ಹಾಗೆ ನೆನಪಿನಿಂದ ಅಳಿದು ಹೋಗುವದು. ಥೆಸಲೋನಿಕದ ಸಹೋದರರು ಹೇಗೆ ಬಲವಾದ, ನಂಬಿಗಸ್ತರಾದ ಕ್ರೈಸ್ತರಾಗಿರಬೇಕು ಎಂಬುದಕ್ಕೆ ಮಾದರಿಗಳಾಗಿದ್ದರು. ಆ ವಿಧವಾದ ಮಾದರಿಯು ಕಾಲದ ಪರೀಕ್ಷೆಗಳನ್ನು ಮೀರಿ ನಿಲ್ಲುತ್ತದೆ ಮತ್ತು ಮಿಕ್ಕ ಎಲ್ಲಾ ಮಾದರಿಗಳಿಗಿಂತಲೂ ಉನ್ನತದಲ್ಲಿ ನಿಲ್ಲುತ್ತದೆ. ಥೆಸಲೋನಿಕದವರು ಬೇರೆಯವರಿಗೆ ಹೇಗೆ ಒಂದು ಮಾದರಿಯಾಗಿದ್ದರೆಂಬು ದನ್ನು ಪರೀಕ್ಷಿಸೋಣ.

*ಅವರು ಅನುಕರಣೆಗೆ ಮಾದರಿಯಾಗಿದ್ದರು*. ಅವರಿಗೆ ಯಾರನ್ನು ಅನುಕರಣೆ ಮಾಡಬೇಕು-ಯೇಸು ಮತ್ತು ಪೌಲ-ಎಂದು ಗೊತ್ತಿತ್ತು. ಹಿಂಸೆಯ ಸಮಯದಲ್ಲಿ ಅವರು ಯೇಸು ಮತ್ತು ಪೌಲನ ರೀತಿಯಲ್ಲಿದ್ದರು. ಒಬ್ಬನು ಒಂದು ಮಾದರಿಯಾಗಿರುವದಕ್ಕೆ ಮುಂಚೆ ಒಬ್ಬ ಅನುಕರಣ ಮಾಡುವವನಾಗಿರಬೇಕು. ಒಬ್ಬರು ಹೀಗೆ ಹೇಳಿದ್ದಾರೆ "ಪ್ರತಿಯೊಬ್ಬರೂ ಮೂಲಸ್ವರೂಪದಲ್ಲಿಯೇ ಹುಟ್ಟುತ್ತಾರೆ ಆದರೆ ಸಾಯುವಾಗ ಒಂದು ನಕಲು ರೂಪದಲ್ಲಿ ಸಾಯುತ್ತಾರೆ." ಥೆಸಲೋನಿಕದವರು ಯೇಸುವಿನ ಮತ್ತು ಪೌಲನ ನಕಲು ರೂಪವಾಗಿ (ಅನುಕರಣ) ಮಾರ್ಪಟ್ಟಿದ್ದರು.

*ಅವರು ಸ್ಥೈರಣೆಯಲ್ಲಿ ಮಾದರಿಯಾಗಿದ್ದರು*. ಕಠಿಣ ಸಮಯಗಳು ಬಂದಾಗ ಅವರು ಸೋತು ಹಿಂಜರಿಯಲಿಲ್ಲ. ದೇವರ ವಾಕ್ಯವು ಅವರ ಹೃದಯದ ಆಳಗಳಲ್ಲಿ ಬರೆಯಲ್ಪಟ್ಟಿತ್ತು, ಮತ್ತು ಹಿಂಸೆಯ ಗಾಳಿಯು ಬೀಸುವಾಗ ಅವರ ಸಮರ್ಪಣೆಯು ಮಸುಕಾಗಲಿಲ್ಲ.

*ಅವರು ಸಂತೋಷಕ್ಕೆ ಮಾದರಿಯಾಗಿದ್ದರು*. ಬಿರುಗಾಳಿಯಲ್ಲಿಯೂ ಉತ್ತಮ ವಾತಾವರಣದಲ್ಲಿಯೂ ಪವಿತ್ರಾತ್ಮನ ಸಂದೇಶಕ್ಕೆ ವಿಧೇಯರಾಗುವದರಿಂದ ಸಿಕ್ಕುವ ಸಂತೋಷವನ್ನು ಪ್ರತಿಬಿಂಬಿಸಿದರು. ಈ ವಿಧವಾದ ಸಂತೋಷವು ಅತ್ಯಂಥ ಆತ್ಮೀಕವಾದವರಿಂದ ಹಿಡಿದು ಅತ್ಯಂಥ ಕೀಳು ಪಾಪಿಯನ್ನು ಸಹ ಪ್ರಭಾವಿತಗೊಳಿಸುತ್ತದೆ.

*ಅವರು ನಂಬಿಕೆಗೆ ಮಾದರಿಯಾಗಿದ್ದರು*. ಅವರ ನಂಬಿಕೆಯು ಅವರಲ್ಲಿಯಾಗಲಿ ಅಥವಾ ಅವರ ಸಕಾರಾತ್ಮಕ ಯೋಚನೆಯಲ್ಲಾಗಲಿ ಅಲ್ಲ, ಆದರೆ ದೇವರಲ್ಲಿಯೇ ಇತ್ತು. ಅವರು ದೇವರಲ್ಲಿ ನಂಬಿಕೆಯಿಟ್ಟಿದ್ದರು!

ನಾವು ಬೇರೆಯವರಿಗೆ ಸಹಾಯ ಮಾಡುವವರಾಗುವಂತೆ ಥೆಸಲೋನಿಕದವರು ನಮಗೆ ಸಹಾಯವನ್ನು ಮಾಡಿದ್ದಾರೆ. ನಾವು ಬೇರೆಯವರಿಗಾಗಿ ಮಾಡಬಹುದಾದ ಉತ್ತಮ

ಕಾರ್ಯವೆಂದರೆ ಅವರನ್ನು ನಮ್ಮ ಮಾದರಿಯ ಮೂಲಕ ನಡಿಸುವದು-ಯೇಸುವನ್ನು ಅನುಸರಿಸುವದು, ಹಿಂಸೆಯಲ್ಲಿ ನಂಬಿಗಸ್ತರಾಗಿರುವದು, ಸಂತೋಷದಲ್ಲಿ ಮುಂದುವರೆಯುವದು, ಮತ್ತು ದೇವರಲ್ಲಿ ನಂಬಿಕೆ. EC

## ಅನುಸರಿಸುವದಕ್ಕೆ ಮಾದರಿಗಳು (1:6-10)

ಅನುಕರಣೆ ಮಾಡುವದು ಜನರಲ್ಲಿರುವ ಬಲವಾದ ಪ್ರವೃತ್ತಿಯಾಗಿರುತ್ತದೆ. ಮಕ್ಕಳು ಬೇರೆ ಮಕ್ಕಳನ್ನು ಮತ್ತು ಪ್ರಾಯಸ್ಥರನ್ನು ಅನುಕರಣ ಮಾಡುತ್ತಾರೆ. ಪ್ರಾಯಸ್ಥರು ಸಹ ಒಳ್ಳೇ ಮತ್ತು ಕೆಟ್ಟ ಮಾದರಿಗಳನ್ನು ಅನುಕರಣ ಮಾಡುತ್ತಾರೆ. ಕ್ರೀಡಾಪಟುಗಳು, ವ್ಯಾಪಾರಿಗಳು, ಮತ್ತು ವೃತ್ತಿಪರರು ಕುಶಲತೆಗಳನ್ನು ಅಭಿವೃದ್ಧಿಪಡಿಸಿಕೊಳ್ಳಲು ಮತ್ತು ತಮ್ಮ ಜೀವನದ ಲಕ್ಷ್ಯ ಹಾಗೂ ವೃತ್ತಿಗಳಲ್ಲಿ ಪ್ರಗತಿಯನ್ನು ಸಾಧಿಸುವದಕ್ಕೆ ಬೇರೆಯವರ ಕ್ರಿಯೆಗಳನ್ನು ನಕಲು ಮಾಡುತ್ತಾರೆ. ನಾವು ಬೇರೆಯವರನ್ನು ಅನುಕರಣ ಮಾಡಿ ಅವರು ವಿಫಲರಾದ ಕಡೆಯಲ್ಲಿ ನಾವು ಯಶಸ್ಸು ಗಳಿಸುವದಕ್ಕೆ ಪ್ರಯತ್ನಿಸುತ್ತೇವೆ.

1ನೇ ಅಧ್ಯಾಯದ ಕಡೆಯ ಭಾಗವು ಅನುಕರಣ ಮಾಡುವದರ ಬಗ್ಗೆ ಬಹಳಷ್ಟನ್ನು ಹೇಳಲು ಹೊಂದಿರುತ್ತದೆ. ಥೆಸಲೋನಿಕದವರು ಸುವಾರ್ತೆಗೆ ಪ್ರತಿಕ್ರಿಯೆಯನ್ನು ತೋರಿದ ವೇಳೆ ಅವರು ಮಾಡಿದ ದೊಡ್ಡ ಆರಂಭಗಳ ಕುರಿತಾಗಿ ಮೊದಲ ಥೆಸಲೋನಿಕ 1:6-10 ವಚನಗಳು ವರ್ಣಿಸುತ್ತವೆ. ಅವರ ಕೃತ್ಯಗಳು ಕರ್ತನ ಮತ್ತು ಆತನ ಶಿಷ್ಯರ ಜೀವಿತಗಳ ಅನುಕರಣವಾಗಿದ್ದವು ಮತ್ತು ಬೇರೆ ಕ್ರೈಸ್ತರಿಂದ ಅನುಸರಿಸಲ್ಪಡುವದಕ್ಕೆ ಯೋಗ್ಯವಾಗಿದ್ದವು. ಇತರ ಸಹೋದರರ ಜೀವಿತಗಳ ಕುರಿತ ತಿಳುವಳಿಕೆಯು ಈ ಹೊಸ ಕ್ರೈಸ್ತರ ಅನುಭವಗಳ ಭಾಗವಾಗಿತ್ತು, ಮತ್ತು ಇದು ಅವರಿಗೆ ಯೇಸುವಿನ ಪುನರಾಗಮನಕ್ಕಾಗಿ ಸಿದ್ಧಗೊಳಿಸುವಂತಹ ಒಂದು ಕಾರ್ಯವಾಗಿತ್ತು.

ನಾವು ಯಾರನ್ನು ಅನುಸರಿಸತಕ್ಕದ್ದು, ಮತ್ತು ಇದನ್ನು ನಾವು ಹೇಗೆ ಮಾಡಬಲ್ಲೆವು? ನಾವು ಯಾರಿಗೋಸ್ಕರ ಮಾದರಿಯಾಗಿರತಕ್ಕದ್ದು?

*ಕ್ರೈಸ್ತೀಯ ಮಾದರಿಗಳನ್ನು ಅನುಕರಣ ಮಾಡಿರಿ (1:6).* ಒಂದು ಸಾಮಾನ್ಯ ಮಾತು ಏನೆಂದರೆ "ಕ್ರೈಸ್ತತ್ವವನ್ನು ಉಪದೇಶಿಸುವದಕ್ಕಿಂತಲೂ ನೋಡಿ ಕಲಿತರೆ ಉತ್ತಮ"-ಅಂದರೆ ಕೇವಲ ಪಾಠಗಳನ್ನು ಕೇಳಿಸಿಕೊಳ್ಳುವದರ ಮೂಲಕಕ್ಕಿಂತಲೂ ಒಬ್ಬ ವ್ಯಕ್ತಿಯಲ್ಲಿ ದೇವರ ಚಿತ್ತವು ಮಾಡಲ್ಪಡುವದನ್ನು ನೋಡಿ ಕಲಿತುಕೊಳ್ಳುವದು ಸುಲಭವಾಗಿರುತ್ತದೆ. ಇನ್ನೊಂದು ಮಾತು ಇರುತ್ತದೆ ಏನೆಂದರೆ, "ಕ್ರೈಸ್ತತ್ವವನ್ನು ನೋಡಿ ಕಲಿಯುವದಕ್ಕಿಂತಲೂ ಉಪದೇಶಿಸುವದು ಉತ್ತಮ," ಇದು ದೇವರ ವಾಕ್ಯವನ್ನು ಪರಿಪೂರ್ಣವಾಗಿ ತಿಳಿದುಕೊಂಡಿರುವದು ಮತ್ತು ಪ್ರತಿಯೊಬ್ಬ ಕ್ರೈಸ್ತನು ಅಪರಿಪೂರ್ಣನಾಗಿ ನಡೆದುಕೊಳ್ಳುತ್ತಾನೆ ಮತ್ತು, ಈ ಕಾರಣದಿಂದ ಒಂದು ಪರಿಪೂರ್ಣವಲ್ಲದ ಮಾದರಿ ಆಗಿರುತ್ತಾನೆಂಬುದನ್ನು ತಿಳಿದುಕೊಂಡಿರುವದರ ಪ್ರಯೋಜನದ ಬಗ್ಗೆ ಒತ್ತಿ ಹೇಳುವದಾಗಿದೆ.

ಬೈಬಲ್ ಸತ್ಯವೇನೆಂದರೆ ಕ್ರೈಸ್ತತ್ವವನ್ನು ಉಪದೇಶಿಸಲ್ಪಡುವ ಮತ್ತು ನೋಡಿ ಕಲಿಯಲ್ಪಡುವ ಎರಡರ ಮೂಲಕವೂ ಸಹ ಉತ್ತಮವಾಗಿ ಕಲಿತುಕೊಳ್ಳಬಹುದಾಗಿರುತ್ತದೆ.

ನಮಗೆ ದೇವರ ಚಿತ್ತದ ಬಗ್ಗೆ ಕಲಿಸಲ್ಪಡತಕ್ಕದ್ದು, ಆದರೆ ನಾವು ಬೇರೆಯವರ ಜೀವಿತಗಳಲ್ಲಿ ಕ್ರೈಸ್ತತ್ವವನ್ನು ನೋಡುವದು ಸಹ ಅಗತ್ಯವಿರುತ್ತದೆ. ದೇವರು ನಮಗೆ ಯೇಸುವಿನ ಜೀವಿತದಲ್ಲಿ ಒಂದು ಪರಿಪೂರ್ಣವಾದ ಮಾದರಿಯನ್ನು ಅನುಗ್ರಹಿಸಿರುತ್ತಾನೆ. ಥೆಸಲೋನಿಕದವರಿಗೆ ಸುವಾರ್ತೆಯು ಕಲಿಸಲ್ಪಟ್ಟಾಗ, ಅವರು ಯೇಸುವಿನಂತೆ ನಡೆದುಕೊಳ್ಳಲು ಮತ್ತು ದೇವರ ಚಿತ್ತವನ್ನು ಮಾಡುವದಕ್ಕೆ ಬಯಸಿದ್ದರು. ಅವರು ತಮ್ಮ ಬೋಧಕರ ನಡವಳಿಕೆಯನ್ನು ಸಹ ಅನುಕರಣ ಮಾಡಿದರು (1:6). ಬೋಧಿಸುವಂಥ ನಮ್ಮೆಲ್ಲರನ್ನು ಸಹ ಇದು ನಮ್ಮ ಕ್ರಿಯೆಗಳಿಂದ ಬೇರೆಯವರನ್ನು ದಾರಿ ತಪ್ಪಿಸುವದಾದರೆ ಉಂಟಾಗುವ ಹಾನಿಯ ಬಗ್ಗೆ ಸೂಕ್ಷ್ಮವಾಗಿ ಅರಿವು ಹೊಂದಿರುವಂತೆ ಮಾಡತಕ್ಕದ್ದು. ಅದೇ ಸಮಯದಲ್ಲಿ, ಬೇರೆಯವರು ದೇವರ ವಾಕ್ಯವನ್ನು ಕಾರ್ಯರೂಪಕ್ಕೆ ತರುವದಕ್ಕಾಗಿ ಪ್ರಯತ್ನಿಸುವವರಾಗಿ ಅನುರಕಣ ಮಾಡುವದಕ್ಕೆ ಒಂದು ಭಕ್ತಿಯ ಜೀವಿತದ ಮಾದರಿಯು ಎಂಥ ಬಲವನ್ನು ಹೊಂದಿರುತ್ತದೆಂಬುದರ ಅರಿವು ಸಹ ನಮಗೆ ಇರತಕ್ಕದ್ದು.

ಅನೇಕ ಕ್ರೈಸ್ತರಿಗೆ “ಬಹಳ ಹಿಂಸೆ” ಎಂಬುದು ಒಂದು ದೂರದ ಯೋಚನೆಯಾಗಿರಬಹುದಾದರೂ, ಥೆಸಲೋನಿಕದವರಿಗೆ ಅದು ಅವರು ಸುವಾರ್ತೆಗೆ ವಿಧೇಯರಾದ ದಿನದಿಂದಲೂ ಇದ್ದಂಥ ಒಂದು ಹೊರೆಯಾಗಿತ್ತು. ಪ್ರಾಚೀನ ಜಗತ್ತಿನ ಬಹಳಷ್ಟು ಪಟ್ಟಣಗಳು ಕೆಲವು ನೂರು ಕುಟುಂಬಗಳನ್ನಷ್ಟೆ ಹೊಂದಿದವುಗಳಾಗಿದ್ದವು. ಅಂಥ ಚಿಕ್ಕ ಸಮುದಾಯಗಳಲ್ಲಿ ಸುವಾರ್ತೆಯು ಸಾರಲ್ಪಟ್ಟಾಗ, ಯಾರು ತಮ್ಮ ನಂಬಿಕೆಗಳನ್ನು ಬದಲಾಯಿಸಿಕೊಂಡಿದ್ದಾರೆಂಬುದು ಎಲ್ಲರಿಗೂ ತಿಳಿದು ಹೋಗುತ್ತಿತ್ತು. ದೈನಂದಿನ ಕುಟುಂಬ ಧ್ಯಾನದ ಸಮಯಗಳು, ದೇವಾಲಯದ ಆರಾಧನೆ, ರೂಢಿಯಾಗಿದ್ದ ಹಬ್ಬಗಳು, ಮತ್ತು ವಾರ್ಷಿಕ ಪವಿತ್ರಯಾತ್ರೆಗಳು-ಇವೆಲ್ಲವೂ ಸುಳ್ಳು ದೇವರುಗಳಿಗೆ ಮನ್ನಣೆ ಕೊಡುವವುಗಳಾಗಿ ಮಾಡಲ್ಪಟ್ಟವುಗಳು-ಇವೆಲ್ಲವಿಗಳಿಗೆ ಇನ್ನು ಮೇಲೆ ಕ್ರೈಸ್ತನ ಜೀವಿತದ ಭಾಗವಾಗಿರಲಿಲ್ಲ. ಆತನ ಮನೆಯಲ್ಲಿ ವಿಗ್ರಹಗಳಿರುತ್ತಿರಲಿಲ್ಲ; ಆತನು ದೇವಾಲಯಗಳಲ್ಲಿ ನಡೆಯುತ್ತಿದ್ದ ಯಜ್ಞಗಳಲ್ಲಿ ಭಾಗಿಯಾಗುತ್ತಿರಲಿಲ್ಲ; ಧಾರ್ಮಿಕ ಮೆರವಣಿಗೆಗಳಲ್ಲಿ ಆತನು ಗೈರುಹಾಜರನಾಗಿರುತ್ತಿದ್ದನು. ಇದು ನೆರೆಯವರಿಗೆ ಗೊತ್ತಾಗುತ್ತಿತ್ತು, ಮತ್ತು ಅವರಿಗೆ ಅದು ಇಷ್ಟವಾಗುತ್ತಿರಲಿಲ್ಲ. ನಿಂದನೆ, ಬಹಿಷ್ಕಾರ, ಮತ್ತು ಹೊಡೆತಗಳು ಒಬ್ಬ ಕ್ರೈಸ್ತನಾಗಿರುವದರ ಭಾಗವಾಗಿದ್ದವು.

ಇಂಥ ಪರಿಸ್ಥಿತಿಗಳ ಹೊರತಾಗಿಯೂ, ಥೆಸಲೋನಿಕದ ಕ್ರೈಸ್ತರು ಸಂತೋಷದಿಂದ ತುಂಬಿದ್ದರು. ಇದು ನಮಗೆ ಗ್ರಹಿಸಿಕೊಳ್ಳಲು ಕಷ್ಟಕರವಾಗಿರುತ್ತದೆ! ಅಂತಹ ಒಂದು ಮನೋಭಾವವನ್ನು ಅವರು ಹೇಗೆ ಬೆಳೆಸಿಕೊಂಡಿದ್ದರು? ಮಾನವ ಆತ್ಮವು-ತನ್ನ ನೋವಿನ ಭಾವನೆಗಳು, ಭೇದಭಾವ, ಮತ್ತು ಪ್ರತ್ಯೇಕಿಕರಣ ಜೊತೆಯಾಗಿ-ಪವಿತ್ರಾತ್ಮನಿಗೆ ದಾರಿಯನ್ನು ಮಾಡಿದ್ದವು, ಆತನು ಕ್ರೈಸ್ತರಿಗೆ ದೇವರ ಪ್ರೀತಿ ಮತ್ತು ಸ್ನೇಹ, ಮತ್ತು ದೇವರ ಶಾಂತಿ ಹಾಗೂ ಭದ್ರತೆ, ದೇವರ ಒದಗಿಸುವಿಕೆ ಹಾಗೂ ಅಂತ್ಯಸ್ಥಿತಿಯ ವಿಷಯವಾಗಿ ಅವರಿಗೆ ಪುನರಾಶ್ವಾಸನೆಯನ್ನು ನೀಡಿದನು. ಅವರು ಈ ಆಶೀರ್ವಾದಗಳ ಬಗ್ಗೆ ಆಲೋಚಿಸುವಾಗ, ಅವರಿಗೆ ಸಂತೋಷಿಸುವದಕ್ಕೆ ಸಾಧ್ಯವಾಗಿತ್ತು. ಪೌಲನು ಈ ವಿಧದಲ್ಲಿ ವರ್ತಿಸುವದನ್ನು ಅವರು ಕಂಡಿದ್ದರು, ಯಾಕೆಂದರೆ ಆತನು “ಇದ್ದ ಸ್ಥಿತಿಯಲ್ಲಿಯೇ

ಸಂತುಷ್ಟನಾಗಿರುವದನ್ನು ಕಲಿತುಕೊಂಡಿದ್ದನು" (ಫಿಲಿಪ್ಪಿ 4:11).

ಈಗ ಅವರು ವಿಗ್ರಹಾರಾಧನೆಗೆ ಗೈರಾಗಿದ್ದರು. ಅವರು ತಮ್ಮ ಸಂಬಂಧಿಗಳ ಮತ್ತು ನೆರೆಯವರ ಜೊತೆಗಿನ ಧಾರ್ಮಿಕ ಅನ್ಯೋನ್ಯತೆಯನ್ನು ಕಳೆದುಕೊಂಡಿದ್ದರು. ಅವರು ಆ ಆಯ್ಕೆಯನ್ನು ಮಾಡಿಕೊಂಡಿದ್ದರು. ದೇವರನ್ನು ಮತ್ತು ಭಕ್ತಿಯುಳ್ಳ ಜನರನ್ನು ಅನುಕರಣ ಮಾಡುವ ಮೂಲಕ, ಅವರು ತಮ್ಮ ಜೀವಿತದಲ್ಲಿ ಉತ್ತಮವಾದ ದಾರಿಯನ್ನು ಆರಿಸಿಕೊಂಡಿದ್ದಾರೆಂಬದನ್ನು ಗ್ರಹಿಸಿಕೊಳ್ಳಬಲ್ಲವರಾಗಿದ್ದರು. ಇದರಿಂದ ದೊಡ್ಡದಾದ ಕಷ್ಟದಲ್ಲಿ ಸಹ ಸೈರಣೆಯಿಂದಿರುವ ಹಾಗೆ ಅವರಿಗೆ ಪ್ರೋತ್ಸಾಹವುಂಟಾಯಿತು. ನಾವು ವ್ಯತ್ಯಾಸವನ್ನು ಕಾಣಬಲ್ಲೆವೋ? ನಾವು ಸರಿಯಾದ ಆಯ್ಕೆಯನ್ನು ಮಾಡಬಲ್ಲೆವೋ? ನಾವು ಕರ್ತನ ಮಾದರಿಯು ಜೀವನದ ಅತ್ಯುತ್ತಮ ದಾರಿಯೆಂದು ತಿಳಿದುಕೊಂಡವರಾಗಿ, ಆತನ ಮಾದರಿಯನ್ನು ಅನುಸರಿಸಬಲ್ಲೆವೋ?

*ಬೇರೆಯವರು ಅನುಕರಣ ಮಾಡುವದಕ್ಕೆ ಒಂದು ಮಾದರಿಯಾಗಿರಿ (1:7).* ದೇವರ ದಾರಿಯನ್ನು ಆರಿಸಿಕೊಳ್ಳುವದು ನಮಗೆ ಉತ್ತಮವಾದದ್ದು, ಆದರೆ ನಾವು ಈ ಆಯ್ಕೆಯನ್ನು ಮಾಡುವದು ಬೇರೆಯವರಿಗೆ ಸಹ ಉತ್ತಮವಾಗಿರುವದು. ದೇವರು ತಾನು ಏನಾಗಿದ್ದಾನೆಂಬುದನ್ನು ತಿಳಿದುಕೊಳ್ಳುವಂತೆ ಇತರರಿಗೆ ಸಹಾಯ ಮಾಡಲು ಯಾವಾಗಲೂ ತನ್ನ ಜನರನ್ನು ಬಳಸಿಕೊಂಡಿರುತ್ತಾನೆ.

ಅಪೊಸ್ತಲರ ಕೃತ್ಯಗಳು ಪುಸ್ತಕವು ನಮಗೆ ಥೆಸಲೋನಿಕದಲ್ಲಿರುವ ಕ್ರೈಸ್ತರ ಬಗ್ಗೆ ಮಾತ್ರವೇ ಅಲ್ಲ, ಆದರೆ ಮಕೆದೋನ್ಯದಲ್ಲಿನ ಫಿಲಿಪ್ಪಿ ಮತ್ತು ಬೆರೋಯ, ಮತ್ತು ಆಖಾಯದಲ್ಲಿನ ಅಥೇನೆ ಮತ್ತು ಕೊರಿಂಥ ಪಟ್ಟಣಗಳಲ್ಲಿನ ಕ್ರೈಸ್ತರ ಬಗ್ಗೆ ಸಹ ತಿಳಿಸುತ್ತದೆ. ಅನೇಕ ಸಭೆಗಳಲ್ಲಿ ಅನೇಕ ಕ್ರೈಸ್ತರು, ಈ ಸಹೋದರರು ಸೇರಿದಂತೆ, ಎಲ್ಲರೂ ಥೆಸಲೋನಿಕದವರು ಕಠಿಣ ಪರಿಸ್ಥಿತಿಗಳ ಮಧ್ಯದಲ್ಲಿಯೂ ಸುವಾರ್ತೆಗೆ ಸಂತೋಷದಿಂದ ಸ್ಪಂದಿಸಿದ್ದರ ಕುರಿತಾಗಿ ಕೇಳಿಸಿಕೊಂಡಿದ್ದರು, ಮತ್ತು ಅವರು ಆ ಮಾದರಿಯನ್ನು ಅನುಸರಿಸುವಂತೆ ಪ್ರೋತ್ಸಾಹಿಸಲ್ಪಟ್ಟಿದ್ದರು. ಇದರಿಂದ ಅವರಿಗೆ ಕಠಿಣ ಸಮಯಗಳಲ್ಲಿ ಸಹಾಯ ಉಂಟಾಗಿತ್ತು. ಸ್ಪಷ್ಟವಾಗಿರುವ ಹಾಗೆ, ಇತರ ಸಭೆಗಳ ಕುರಿತಾದ ಸುದ್ದಿಯು ಕ್ರೈಸ್ತ ಪರಿಸರದ ಭಾಗವಾಗಿತ್ತು, ಅದು ಸಭೆಗಳಿಗೆ ಪಕ್ವಗೊಳ್ಳುವದಕ್ಕೆ ಸಹಾಯವನ್ನು ಒದಗಿಸುತ್ತಿತ್ತು.

ನಾವು ಆಗಾದ ಸ್ಥಳೀಯ ಸಭೆಯಲ್ಲಿ ಏನು ನಡೆಯುತ್ತದೆ ಎಂಬುದನ್ನು ನೋಡುವದು ನಮ್ಮ ಕೆಲಸವಲ್ಲ ಎಂದು ಯೋಚಿಸಿಕೊಳ್ಳುತ್ತೇವೆ. ಸಭೆಗಳ ನಡುವೆ ಇರಬೇಕಾದ ಸಂಬಂಧಗಳ ಕುರಿತಾಗಿ ದೇವರಿಗಿರುವ ಬಯಕೆಯು ವ್ಯತ್ಯಾಸವಾದದ್ದು. ನಾವು ಕೆಲವು ಸಾರಿ ಸ್ವಾತಂತ್ರ್ಯ ಹಾಗೂ ಪ್ರತ್ಯೇಕಿಕರಣಕ್ಕೋಸ್ಕರ ತಪ್ಪಾಗಿ ಗ್ರಹಿಸಿಕೊಳ್ಳಲ್ಪಟ್ಟ ಸ್ವಯಮಾಧಿಕಾರ-ಸಭೆಯು ದೇವರ ಮಾರ್ಗದರ್ಶನದಲ್ಲಿ ತನ್ನ ವ್ಯವಹಾರಗಳನ್ನು ಸ್ವತಃ ನೋಡಿಕೊಳ್ಳಬೇಕು-ಹೊಂದಿರುತ್ತೇವೆ. ಬೈಬಲ್ ಮಾದರಿಯು ಏನೆಂದರೆ ನಾವು ನಮ್ಮ ಸುದ್ದಿಗಳನ್ನು ಹಂಚಿಕೊಳ್ಳಬೇಕು. ಎರಡು ಸಾವಿರ ವರ್ಷಗಳ ಹಿಂದೆ ಪ್ರಪಂಚದ ಆಚೆ ಕಡೆಯ, ಆಸ್ಟ್ರೇಲಿಯಾದ ಜನರು ಸಹ ಥೆಸಲೋನಿಕದಲ್ಲಿ ಏನು ನಡೆಯಿತೆಂಬುದನ್ನು ಬಲ್ಲವರಾಗಿದ್ದರು!

ಅಧಿಕಾರಿಗಳು ಅವರನ್ನ ಹಿಂಸಿಸಿದರು ಮತ್ತು ಅವರ ನೆರೆಯವರು ಅವರನ್ನು ಅಪಹಾಸ್ಯ ಮಾಡಿದರೆಂಬುದನ್ನು ನಾವು ಆಲೋಚಿಸುವಾಗ, ನಾವು ಕಷ್ಟಗಳನ್ನು ಎದುರಿಸುವ ವೇಳೆ ಅದು ನಮಗೆ ಸಹಾಯವಾಗಬಲ್ಲದು. ಥೆಸಲೋನಿಕದ ಕ್ರೈಸ್ತರಿಗೆ ಉದ್ಯೋಗವನ್ನು ಹುಡುಕಿಕೊಳ್ಳುವದು, ಆಹಾರ ಮತ್ತು ಇತರ ಅಗತ್ಯವಸ್ತುಗಳನ್ನು ಖರೀದಿಸುವದು, ತಮ್ಮ ನೆರೆಯವರೊಳಗೆ ಸ್ನೇಹಿತರನ್ನು ಹೊಂದುವದು ಕಷ್ಟಕರವಾಗಿದ್ದಿರ ಬಹುದು. ನಮಗೆ ಈ ಆದಿ ಕ್ರೈಸ್ತರ ರೀತಿಯಲ್ಲಿಯೇ ಕಷ್ಟಗಳಿರುತ್ತವೋ ಅಥವಾ ಇಲ್ಲವೋ, ಆದರೆ ನಮ್ಮ ಆತ್ಮೀಕ ಹಿತಾಸಕ್ತಿಯ ಮತ್ತು ಪ್ರಗತಿಯ ವಿರುದ್ಧ ಗಂಡಾಂತರಗಳಿರುವದು ನಮಗೆ ಅತ್ಯಂಥ ವಾಸ್ತವಿಕವಾಗಿರುತ್ತದೆ. ವಿರೋಧದ ನಡುವೆಯೂ ಇತರರು ನಂಬಿಗಸ್ತ ರಾಗಿ ಉಳಿದಿದ್ದರು ಎಂಬುದನ್ನು ತಿಳಿದುಕೊಳ್ಳುವದರಿಂದ ದೃಢತೀರ್ಮಾನದ ಆತ್ಮಗ ಳೊಂದಿಗೆ ಸ್ಥೈರಿಸಿಕೊಳ್ಳುವದಕ್ಕೆ ನಮಗೆ ಸಹಾಯವಾಗುವದು.

ಅತ್ಯಂಥ ಚಿಕ್ಕ ಸಭೆಯ ಸದಸ್ಯರು ಕಠಿಣ ಪರಿಸ್ಥಿತಿಗಳಲ್ಲಿ ಸಹ ತಮ್ಮ ಕ್ರೈಸ್ತತ್ವವನ್ನು ಆಚರಿಸುವದಕ್ಕೆ ಮನಸ್ಸುಳ್ಳವರಾಗಿರುವದಾದರೆ ಆ ಸಭೆಯು ಒಂದು ಪಟ್ಟಣ, ರಾಜ್ಯ, ದೇಶ, ಮತ್ತು ಖಂಡಕ್ಕೆ ಒಂದು ಪ್ರೋತ್ಸಾಹದಾಯಕವಾದ ಮಾದರಿಯಾಗಬಲ್ಲದು. ಕೆಲವು ದೊಡ್ಡ ಸಭೆಗಳು ಮಾತ್ರವೇ ನಮ್ಮ ಮಾದರಿಯಾಗಿರತಕ್ಕದ್ದು ಎಂದು ನಾವು ಯೋಚಿಸುತ್ತೇವೆ, ಆದರೆ ಒಂದು ಚಿಕ್ಕ ಸಭೆಯಲ್ಲಿರುವ ಒಂದೇ ಒಂದು ಆಸಕ್ತಿಯುಳ್ಳ ಆತ್ಮವು ಸುತ್ತಲಿನಲ್ಲಿರುವ ಒಂದು ಅತ್ಯಂಥ ದೊಡ್ಡ ಸಭೆಗೆ ಮಾದರಿಯನ್ನು ಒದಗಿಸಬಲ್ಲದು ಎಂಬುದನ್ನು ಈ ಹೊಸ ಕ್ರೈಸ್ತರು ನಮಗೆ ನೆನಪಿಸತಕ್ಕದ್ದು.

*ಮಾದರಿಯಾಗಿರುವಂತೆ ಬೇರೆಯವರಿಗೆ ಮಾರ್ಗದರ್ಶಿಸಿರಿ (1:8).* ಸುವಾರ್ತೆಯು ಥೆಸಲೋನಿಕದಲ್ಲಿ ಹರಡಿದಂತೆ, ಬೋಧಕರಿಗೆ ಕೆಲಸವೇ ಇಲ್ಲದಂತಾಯಿತು! ವಿದ್ಯಾರ್ಥಿಗಳು ಆ ಕೆಲಸವನ್ನು ವಹಿಸಿಕೊಂಡಿದ್ದರು. ತಮ್ಮ ಪಾಠಗಳನ್ನು ಉತ್ತಮ ರೀತಿಯಲ್ಲಿ ಕಲಿತವರಾಗಿ, ಹೊಸ ಕ್ರೈಸ್ತರು ಬೇರೆ ಎಲ್ಲರಿಗೂ ಸುವಾರ್ತೆಯ ಕುರಿತು ಹೇಳುತ್ತಿದ್ದರು. ಆ ಕ್ಷೇತ್ರದಲ್ಲಿ ಮಾತ್ರವೇ ಅಲ್ಲ, ಆದರೆ ಪ್ರಪಂಚದಾದ್ಯಂಥ, ಜನರು ಸುವಾರ್ತೆಯ ಕುರಿತು ಮತ್ತು ಅದರಿಂದ ಹೇಗೆ ಪ್ರಯೋಜನವನ್ನು ಹೊಂದಿಕೊಳ್ಳಬೇಕು ಎಂಬದರ ಬಗ್ಗೆ ಕೇಳಿಸಿಕೊಳ್ಳುತ್ತಿದ್ದರು, ಥೆಸಲೋನಿಕದಲ್ಲಿ ಏನು ನಡೆಯುತ್ತಿದೆ ಎಂಬುದರ ಬಗ್ಗೆ ಜನರು ಬಹಳ ಉತ್ಸಾಹದಿಂದ ಹೇಳುತ್ತಿದ್ದರು (1:8). ಏನು ಸಂಭವಿಸಿತೆಂಬುದನ್ನು ಕೇಳುವಂತೆ ಜನರ ಮನವೊಲಿಸಲು ಪ್ರಯತ್ನಿಸುವದಕ್ಕಾಗಿ ಪೌಲ, ಸೀಲ, ಮತ್ತು ತಿಮೊಥೆಯರು ಎಲ್ಲೆಡೆ ಹೋಗಬೇಕಾಗಿರಲಿಲ್ಲ. ಸಂದೇಶ ಮತ್ತು ಅದರ ಫಲಿತಗಳು ಬೋಧಕರಿಗಿಂತಲೂ ವೇಗವಾಗಿ ಪ್ರಯಾಣಿಸಿದ್ದವು.

ನಿಜವಾದ ನಂಬಿಕೆಯು ಜನರ ಜೀವಿತಗಳನ್ನು ಒಂದು ಒಳ್ಳೇ ದಾರಿಯಲ್ಲಿ ಬದಲಾಯಿಸುವದು. ಫಲಿತಗಳನ್ನು ಕಾಣುವಂತ ಇತರರು ಕಾರಣವೇನೆಂದು ತಿಳಿದುಕೊಳ್ಳಲು ಮತ್ತು ಅದನ್ನು ಬೇರೆಯವರಿಗೆ ತಿಳಿಸುವದಕ್ಕೆ ಬಯಸುವರು! ಕೆಟ್ಟ ವಾರ್ತೆಯು ಶೀಘ್ರವಾಗಿ ಹಬ್ಬಿಕೊಳ್ಳುತ್ತದೆ ಯಾಕೆಂದರೆ ಅದು ಆಘಾತಕರ ಮತ್ತು ಅಸಹಜ ಆಗಿರುತ್ತದೆ. ನಿಜವಾದ ಕ್ರೈಸ್ತತ್ವವು ಸಹ ಅಷ್ಟೇ ಆಘಾತಕರ ಮತ್ತು ಅಷ್ಟೇ ಅಸಹಜವಾಗಿರಬಲ್ಲದು, ಆದರೆ ಅದು ಆಕರ್ಷಕವು ಮತ್ತು ಮೋಸ, ಸಂದೇಹ, ಹಾಗೂ

ಅಭದ್ರತೆಯಿಂದ ಕೂಡಿದ ಪ್ರಪಂಚಕ್ಕೆ ತೀವ್ರವಾಗಿ ಅಗತ್ಯವಿರುವಂಥದ್ದು ಸಹ ಆಗಿರುತ್ತದೆ. ನಿಯತಕ್ರಮವಾಗಿ ಇಡೀ ಸಭೆಯು ಶುಭ ಸುದ್ದಿಯನ್ನು ಕೇಳುವಂತೆ ಒಂದು ಸಭೆಯಲ್ಲಿನ ಒಬ್ಬ ವ್ಯಕ್ತಿಯು ಸಹಾಯ ಮಾಡಬಲ್ಲನು. ಸ್ಥಳೀಯ ಸಭೆಯ ಸುದ್ದಿಯನ್ನು ಒಬ್ಬ ವ್ಯಕ್ತಿಯು ಬೇರೆ ಅನೇಕರಿಗೆ ತಲುಪಿಸುವ ಕೆಲಸವನ್ನು ಮಾಡಬಹುದು. ದೇವರು ತನ್ನ ಸಭೆಯ ಕುರಿತಾಗಿ ತನ್ನ ಜನರು ಸಕಾರಾತ್ಮಕ ರೀತಿಯಲ್ಲಿ ಮಾತಾಡುವದನ್ನು ಕೇಳಿಸಿಕೊಳ್ಳುವದನ್ನು ಇಷ್ಟ ಪಡುತ್ತಾನೆ. ಅದು ಆತನಿಗೆ ಘನವನ್ನುಂಟು ಮಾಡುತ್ತದೆ ಮತ್ತು ಆತ್ಮಗಳಿಗೆ ಸಹಾಯಕವಾಗುತ್ತದೆ. ಕ್ರೈಸ್ತರು ಬೇರೆ ಜನರಲ್ಲಿ ಕಾಣುವ ಒಳ್ಳೇದನ್ನು ಅನುಸರಿಸುವಂತೆ ಅವರನ್ನು ಪ್ರೋತ್ಸಾಹಗೊಳಿಸುವದಕ್ಕಾಗಿ ಶುಭ ಸುದ್ದಿಗಳನ್ನು ಅಧಿಕಗೊಳಿಸುತ್ತಲಿರೋಣ.

*ಒಂದು ಮಾದರಿಯನ್ನು ತೋರುವದಕ್ಕೆ ನಿರ್ಧರಿಸಿಕೊಳ್ಳಿರಿ (1:9, 10).* ಒಂದು ಆಯ್ಕೆಯನ್ನು ಮಾಡುವದು ಅನುಕರಣ ಮಾಡುವದಕ್ಕೆ ಮೊದಲ ಹೆಜ್ಜೆಯಾಗಿರುತ್ತದೆ. ಅನೇಕ ದೇವರುಗಳನ್ನು ನಂಬುತ್ತಿದ್ದ ಜನರಿಗೆ, ಪೌಲನು ಅಥೇನೆಯಲ್ಲಿನ ಜನರಿಗೆ ತಿಳಿಯದೆ ಇದ್ದಂಥ ಏಕೈಕ ಸತ್ಯ ದೇವರ ಕುರಿತಾಗಿ ತಿಳಿಸುತ್ತಾನೆ (ಅಪೊಸ್ತಲರ ಕೃತ್ಯಗಳು 17:22-31). ಈತನು ಅಬಾಧಿತ ಶಕ್ತಿ, ಸರ್ವೋಚ್ಚವಾದ ಬುದ್ಧಿ, ಮತ್ತು ಮೀಗಿಲಾದ ಪ್ರೀತಿಯನ್ನು ಹೊಂದಿರುವ ದೇವರು ಎಂಬದಾಗಿ ಆತನು ಹೇಳಿದನು. ಈತನಿಗೆ ಹೋಲಿಕೆ ಮಾಡಿದರೆ ಬೇರೆ ಯಾವದೇ ದೇವರುಗಳು ಅಲ್ಪವಾಗಿದ್ದರು. ಎಲ್ಲಕ್ಕಿಂತಲೂ ದೊಡ್ಡ ಆಶ್ಚರ್ಯವೆಂದರೆ ದೇವರ ಮಹಿಮಾಪ್ರಭಾವ ಅಲ್ಲ, ಆದರೆ ಆತನ ಸಾಮಿಪ್ಯತೆಯೇ, ಯಾಕೆಂದರೆ ಆತನು "ನಮ್ಮಲ್ಲಿ ಒಬ್ಬನಿಗೂ ದೂರವಾದವನಲ್ಲ" (ವ. 27). ದೇವರು ಒಬ್ಬ ತಂದೆಗೆ ಹೋಲಿಸಲ್ಪಟ್ಟಿದ್ದಾನೆ, ಆತನ ಮಕ್ಕಳು ಎಲ್ಲೆಡೆಯೂ ಇರುವ ಜನರು ಮತ್ತು ಅವರು ಈಗಾಗಲೇ ಅನೇಕ ವಿಧಗಳಲ್ಲಿ ಆತನ ಹೋಲಿಕೆಯಂತೆಯೇ ಇರುತ್ತಾರೆ. ಥೆಸಲೋನಿಕದವರು ವಿಗ್ರಹಾರಾಧನೆ ಮತ್ತು ಏಕೈಕ ಸತ್ಯ ದೇವರನ್ನು ಹಿಂಬಾಲಿಸುವದರ ನಡುವಿನ ವ್ಯತ್ಯಾಸವನ್ನು ಕಾಣುವದಕ್ಕೆ ಶಕ್ತರಾಗಿದ್ದರು.

ತಾವು ಬಹುದೇವತಾ ಆರಾಧನೆಯ ಸಂಸ್ಕೃತಿಯಲ್ಲಿ ಬೆಳೆದು ಬಂದಿದ್ದಾಗ್ಯೂ, ಥೆಸಲೋನಿಕದವರು ವ್ಯತ್ಯಾಸವನ್ನು ಕಂಡಿದ್ದರು ಮತ್ತು ಅವರು ಕಡಿಮೆಯಾದದ್ದನ್ನು ತೋರೆದು ಬಿಟ್ಟು ಸರ್ವೋಚ್ಚವಾದದ್ದನ್ನು ಆನಂದಿಸುವದಕ್ಕೆ ಕಾತರದಿಂದ ಇದ್ದರು (1:9, 10). ಅವರು ತನ್ನ ಸ್ವಂತ ಮಕ್ಕಳನ್ನು ಕಾಣುವ ರೀತಿಯಲ್ಲಿ ಒಬ್ಬ ಸ್ನೇಹವುಳ್ಳ ತಂದೆಯಂತಿರುವ ದೇವರಿಗೋಸ್ಕರ ಅವರು ನಿರಂಕುಶಾಧಿಕಾರ ಮತ್ತು ಸ್ವಾರ್ಥದಿಂದ ಕೂಡಿದ್ದ ಗ್ರೀಕ್ ದೇವತಾಗಣವನ್ನು ತೊರೆಯುವದಕ್ಕೆ ಅವರು ನಿರ್ಧರಿಸಿಕೊಂಡಿದ್ದರು. ಅವರು ಆಯ್ಕೆಗಳ ಬಗ್ಗೆ ಯೋಚನೆಗಳನ್ನು ಮಾಡಿದವರಾಗಿ ಒಂದು ತೀರ್ಮಾನಕ್ಕೆ ಬಂದಿದ್ದರು. ಅವರು ಒಬ್ಬನನ್ನು ಆಲಂಗಿಸಿಕೊಳ್ಳುವದಕ್ಕಾಗಿ ಅನೇಕರನ್ನು ತೊರೆದಿದ್ದರು. ಅದು ಅವರ ಸ್ವಂತ ಆಯ್ಕೆಯಾಗಿತ್ತು ಹೊರತು ದೇವರುಗಳಿಂದ ಒಂದು ಕಲ್ಪಿತವಾದ ಕಟ್ಟಪ್ಪಣೆಯಾಗಿರಲಿಲ್ಲ.

ಇದು ನಮಗೆ ಕಲಿತುಕೊಳ್ಳಲು ಒಂದು ಪ್ರಾಮುಖ್ಯವಾದ ಪಾಠವಾಗಿರುತ್ತದೆ. ದೇವರು ಇತರ ಎಲ್ಲಾ ಜೀವಿಗಳಿಗಿಂತಲೂ ಸರ್ವೋಚ್ಚನಾಗಿದ್ದಾನೆ. ದೇವರ ವಾಕ್ಯವು ಎಲ್ಲಾ ಜ್ಞಾನಕ್ಕಿಂತ ಸರ್ವೋಚ್ಚವಾಗಿದೆ. ದೇವರ ಮಾರ್ಗವು ಬೇರೆ ಎಲ್ಲಾ ಜೀವನಶೈಲಿಗಳಿಗಿಂತಲೂ ಸರ್ವೋಚ್ಚವಾಗಿದೆ. ಹೇಗೂ, ತನ್ನನ್ನು ಹಿಂಬಾಲಿಸುವಂತೆ

ಆತನು ನಮ್ಮನ್ನು ಒತ್ತಾಯ ಪಡಿಸುವದಿಲ್ಲ. ಒಬ್ಬ ಕ್ರೈಸ್ತನಾಗುವದು ಮತ್ತು ದೇವರ ಮಾರ್ಗದಲ್ಲಿ ಮುಂದುವರೆಯುವದು ಸ್ವಂತ ನಿರ್ಧಾರದಿಂದ ಮಾಡಲ್ಪಡುವದಾಗಿದೆ. ಅದರಲ್ಲಿ ಯಾವದೇ ಬಲತ್ಕಾರವೂ ಇರುವದಿಲ್ಲ-ನಮ್ಮನ್ನು ದತ್ತು ಸ್ವೀಕಾರ ಮಾಡುವಂತೆ ನಾವು ದೇವರಿಗೆ ಅನುಮತಿಸುವದಾದರೆ ಆಶೀರ್ವಾದದ ಪ್ರಯೋಜನ ಮಾತ್ರವೇ ಇರುವದು. ದೇವರ ವಾಕ್ಯಕ್ಕೆ ಅವಕಾಶ ಕೊಡುವ ಮೂಲಕ ಮತ್ತು ಆತನ ಮಾರ್ಗದಲ್ಲಿ ಜೀವಿಸುವ ಮೂಲಕ ಆತನಿಗಾಗಿ ಒಂದು ಆಯ್ಕೆಯನ್ನು ಮಾಡಿಕೊಳ್ಳಿರಿ!

ದೇವರನ್ನು ಮತ್ತು ಆತನ ಹಿಂಬಾಲಕರನ್ನು ಅನುಕರಣ ಮಾಡುವದಕ್ಕೆ ನಾವು ನಿರ್ಧರಿಸಿಕೊಳ್ಳುವದಾದರೆ, ನಾವು ಕೆಲವು ಪ್ರೇರಕಗಳನ್ನು ಹೊಂದಿರಬೇಕು, ಆತನನ್ನು ನಮ್ಮ ನಾಯಕನನ್ನಾಗಿ ಮಾಡಿಕೊಳ್ಳಲಿಚ್ಛಿಸುವದಕ್ಕೆ ಕೆಲವು ಕಾರಣಗಳು ಇರತಕ್ಕದ್ದು. ಯೇಸುವಿನ ಪುನರುತ್ಥಾನ ಮತ್ತು ಆತನು ಹಿಂದಿರುಗಿ ಬರುತ್ತೇನೆಂದು ಮಾಡಿದ ವಾಗ್ದಾನಗಳು ಸುವಾರ್ತೆಯ ನಾಟಕೀಯವಾದ ಭಾಗಗಳಾಗಿದ್ದು ಅವುಗಳಿಗೆ ಹಿಂದೆ ವಿಗ್ರಹಾರಾಧಕ ಜನಾಂಗಕ್ಕೆ ಸೇರಿದ ಜನರು ಪ್ರತಿಕ್ರಿಯೆಯನ್ನು ತೋರಿಸಿದ್ದರು. ಸತ್ಯ ದೇವರ ಕುಮಾರನನ್ನು ಸಂಧಿಸುವದಕ್ಕಾಗಿ ಸಿದ್ಧತೆ ಮಾಡಿಕೊಳ್ಳುವದು ಈ ಕ್ರೈಸ್ತರಲ್ಲಿ ಒಂದು ದೊಡ್ಡ ಎದುರುನೋಡುವಿಕೆಯನ್ನು ತುಂಬಿಸಿತ್ತು. ಸಿದ್ಧತೆಯಿಲ್ಲದವರಾಗಿ ದೇವರನ್ನು ಮುಖಾಮುಖಿಯಾಗಿ ಸಂಧಿಸುವದಕ್ಕೆ ಬರುವದರಿಂದಾಗುವ ಹಾನಿಯಿಂದ ತನ್ನ ಜನರನ್ನು ತಪ್ಪಿಸುವದಕ್ಕಾಗಿ ತನ್ನ ಪ್ರಾಣವನ್ನು ಕೊಟ್ಟವನು ಯೇಸುವೇ ಆಗಿದ್ದನು. ಯೇಸುವನ್ನು ಸಂಧಿಸುವದು ಒಂದು ಸಂಭ್ರಮಿಸುವ ಮತ್ತು ಕೃತಜ್ಞತಾಸ್ತುತಿಯ ಒಂದು ಅನುಭವವಾಗಲಿತ್ತು; ಅವರ ಕುರಿತಾಗಿ-ಮತ್ತು ನಮ್ಮ ಕುರಿತಾಗಿ-ಬಹಳವಾಗಿ ಚಿಂತಿಸಿ ಶಿಲುಬೆಯ ಮೇಲೆ ಮರಣಿಸುವದಕ್ಕೂ ಸಿದ್ಧನಾದವನನ್ನು ಸಂಧೀಸುವದಕ್ಕೆ ಅದೊಂದು ಸದವಕಾಶವಾಗುವದು. ಥೆಸಲೋನಿಕದವರು ದೇವರ ಸಾರೂಪ್ಯವುಳ್ಳವರಾಗಿರುವದಕ್ಕೆ ಬಯಸಿದರು, ಆತನ ಪಕ್ಕದಲ್ಲಿರುವದಕ್ಕೆ ಬಯಸಿದರು; ಆದರೆ ಅವರಿಗೆ ದೇವರ *ಸಂಗಡ*, ಆತನ ಬದಿ*ಯಲ್ಲಿ* ಇರುವ ನಿರೀಕ್ಷೆಯನ್ನು ಸಹ ಹೊಂದಿದ್ದರು!

*ಮುಕ್ತಾಯ*. ಕ್ರೈಸ್ತೀಯ ಜೀವಿತಗಳನ್ನು ನಡಿಸುವದಕ್ಕೆ ನಮಗೆ ಮಾದರಿಗಳಿರ ಬೇಕೆಂಬುದು ದೇವರ ಉದ್ದೇಶವಾಗಿತ್ತು. ಆತನು ಈ ಕೆಲಸವನ್ನು ಯೇಸುವಿನ ಜೀವನದೊಂದಿಗೆ ಆರಂಭಿಸಿದನು. ಆತನು ಇದನ್ನು ಸುವಾರ್ತೆಯನ್ನು ಹರಡಿಸುವ ಅಪೊಸ್ತಲರ ಜೀವಿತಗಳಲ್ಲಿ ಕೊಂಡೊಯ್ದನು. ಅವರು ಕ್ರೈಸ್ತ ಬೋಧಕರಿಗೆ ಮತ್ತು ಇತರ ಹಿಂಬಾಲಕರಿಗೆ ಒಂದು ಮಾದರಿಯನ್ನು ತೋರಿದರು. ಥೆಸಲೋನಿಕದ ಸಭೆಯು ಅವರ ಮಾದರಿಯನ್ನು ಅನುಸರಿಸಿದರು ಮತ್ತು ಅದನ್ನು ಮತ್ತೊಬ್ಬರಿಗೆ ಹಸ್ತಾಂತರಿಸಿದರು. ನಾವು ಈ ಆದರ್ಶವನ್ನು ಅನುರಿಸುವದಕ್ಕೆ ಮನಸ್ಸುಳ್ಳವರಾಗಿದ್ದೇವೋ? TP

## ಒಂದು ಒಳ್ಳೇ ಮಾದರಿಯ ಬಲ (1:8-10)

ಥೆಸಲೋನಿಕದವರು ದೇವರ ವಾಕ್ಯಕ್ಕೆ ವಿಧೇಯರಾಗುವ ವಿಷಯದಲ್ಲಿ ಉಮ್ಮತ ಮಾದರಿಗಳನ್ನು ತೋರಿದರು. "ಮಾದರಿ" ಎಂಬುದಕ್ಕೆ ಪೌಲನು ಬಳಸಿದ ಗ್ರೀಕ್ ಪದವು *tupos*, ಅದರರ್ಥವು "ಛಾಯೆ," "ನಮೂನೆ," ಅಥವಾ "ಮಾದರಿ."[12] ಪೌಲನು ಮಾದರಿ ಎಂದು

ಬಣ್ಣಿಸಿದ ಸಭೆ ಇದೊಂದೇ ಆಗಿರುತ್ತದೆ.

ಅವರ ಒಳ್ಳೇ *ಮಾದರಿಯು ಪರಿಣಾಮಕಾರಿ ಆಗಿತ್ತು*. ಪೌಲನು ಹೀಗೆ ಹೇಳಿದನು, "ಕರ್ತನ ವಾಕ್ಯವು ನಿಮ್ಮಿಂದಲೇ . . . ಘೋಷಿತವಾದದ್ದಲ್ಲದೆ" (ವ. ೮). ಮೂಲ ಭಾಷೆಯು ಇಲ್ಲಿ ಒಂದು ಪ್ರತಿಧ್ವನಿಸುವಿಕೆ ಅಥವಾ ಮರುಧ್ವನಿಸುವಿಕೆ ಎಂಬ ಅರ್ಥವನ್ನು ಸೂಚಿಸುತ್ತದೆ. ಥೆಸಲೋನಿಕದವರು ಒಂದು ಧ್ವನಿಫಲಕವಾಗಿ ಮಾರ್ಪಟ್ಟಿದ್ದರ, ಅವರ ನಂಬಿಗಸ್ತಿಕೆಯ ಸುದ್ದಿಯು ಮಕೆದೋನ್ಯದಿಂದ ಮೊದಲ್ಗೊಂಡು (ಗ್ರೀಸ್ ದೇಶದ ಉತ್ತರದ ಭಾಗ) ಆಖಾಯದ ತನಕ (ಗ್ರೀಸ್ ದೇಶದ ದಕ್ಷಿಣ ಭಾಗ) ಕೇಳಲ್ಪಡುತ್ತಿತ್ತು. ಅವರ ಉತ್ತಮ ಮಾದರಿಯು ಪರ್ಯಾಯ ದ್ವೀಪದಲ್ಲೆಲ್ಲಾ ಪರಿಚಿತವಾಗಿತ್ತು.

೯ನೇ ವಚನದಲ್ಲಿ, ಬೇರೆ ಪ್ರಾಂತ್ಯಗಳಿಗೆ ಸೇರಿದ ಜನರು ಥೆಸಲೋನಿಕದವರ ಒಳ್ಳೇ ಕಾರ್ಯಗಳ ಕುರಿತಾಗಿ, ಅವರು ಹೇಗೆ ವಿಗ್ರಹಗಳನ್ನು ಬಿಟ್ಟುಬಿಟ್ಟು "ಜೀವವುಳ್ಳ ಸತ್ಯದೇವರನ್ನು ಸೇವಿಸುವವರಾದರು" ಎಂಬ ಬಗ್ಗೆ "ತಾವೇ ಹೇಳುತ್ತಾರೆ" ಎಂಬದಾಗಿ ಪೌಲನು ಹೇಳಿದನು. ಥೆಸಲೋನಿಕದವರಿಗೆ ತಿಳಿಯದೆಯೇ, ಅವರ ಮಾದರಿಯು ಅತ್ಯಂಥ ದೂರದ ತನಕ ಪ್ರತಿಧ್ವನಿಸಿ, ನೂರಾರು ಜನರ ಮೇಲೆ, ಬಹುಶಃ ಸಾವಿರಾರು ಜನರ ಮೇಲೆ ಒಂದು ಉತ್ತಮ ಪ್ರಭಾವವನ್ನು ಬೀರಿತ್ತು.

ನಮ್ಮ *ಒಳ್ಳೇ ಮಾದರಿಯು ಪರಿಣಾಮಕಾರಿ ಆಗಿರುವದು*. ಕರ್ತನ ಸೇವೆಯನ್ನು ಮಾಡುವದಕ್ಕೆ ತಮ್ಮ ಜೀವಿತಗಳನ್ನು ಸಮರ್ಪಿಸಿಕೊಂಡಿರುವಂಥ ನಮಗೆ ಪರಿಚಿತವಿರುವ ವಿಶೇಷ ಜನರ ಬಗ್ಗೆ ಯೋಚಿಸಿರಿ. ಕೆಲವರು ಪ್ರಸಂಗಿಗಳು. ಇನ್ನು ಕೆಲವರು ಮಿಶನರಿಗಳು. ಕೆಲವರು ಇಷ್ಟೊಂದು ವರ್ಷಗಳಿಂದ ಒಂದು ಅತ್ಯಮೋಘವಾದ ಪ್ರಭಾವವನ್ನು ಬೀರಿರುವ ಬೋಧಕರಾಗಿರುವರು. ನಾವು ಸಕಾರಾತ್ಮಕ ಮಾದರಿಗಳಾಗಿರುವದಕ್ಕಾಗಿ ಅಂಥ ಜನರನ್ನು ನಾವು ಮನ್ನಣೆ ಮಾಡತಕ್ಕದ್ದು. ಪೌಲನು ಥೆಸಲೋನಿಕದ ಸಭೆಯವರನ್ನು ಪ್ರೀತಿಸಿದನು ಮತ್ತು ಗೌರವಿಸಿದನು ಹಾಗೂ ಅವರನ್ನು ಸೂಕ್ತವಾದ ರೀತಿಯಲ್ಲಿ ಶ್ಲಾಘಿಸಿದನು. ಕ್ರಿಸ್ತನಲ್ಲಿರುವ ಸಹೋದರರು ಹಾಗೂ ಸಹೋದರಿಯರು ವಾಕ್ಯಕ್ಕೆ ಹೇಗೆ ವಿಧೇಯರಾಗಬೇಕು ಮತ್ತು ಕರ್ತನ ಸೇವೆ ಮಾಡಬೇಕು ಎಂಬುದಕ್ಕೆ ಉತ್ತಮ ಮಾದರಿಯನ್ನು ತೋರುವಾಗ, ನಾವು ಸಹ ಅವರನ್ನು ಪ್ರೀತಿಸಬೇಕು, ಗೌರವಿಸಬೇಕು, ಮತ್ತು ಶ್ಲಾಘಿಸಬೇಕು. EE

## ಕ್ಲುಪ್ತವಾಗಿ ಪರಿವರ್ತನೆಯ ಕುರಿತು (1:9, 10)

ಪೌಲನು ಚರ್ಚೆಯನ್ನು ಥೆಸಲೋನಿಕದವರು ಪರಿವರ್ತನೆಗೊಂಡ ವಿಷಯದ ಕಡೆಗೆ ತಿರುಗಿಸುತ್ತಾನೆ. ಬಹುಶಃ ಸಭೆಯಲ್ಲಿ ಹೆಚ್ಚಾಗಿ ಸೇರಿದ್ದವರಲ್ಲಿ ಹೆಚ್ಚಿನವರು ಅನ್ಯಜನಾಂಗದವರಾಗಿದ್ದರು.

ಅವರು ದೇವರ ಬಳಿಗೆ ಬಂದದ್ದರ ಕುರಿತಾದ ವರ್ಣನೆಯನ್ನು ಎರಡು ಚಿಕ್ಕದಾದ ವಚನಗಳಲ್ಲಿ ಕೊಡಲಾಗಿರುತ್ತದೆ. ಅಂಥ ದೊಡ್ಡ ಬದಲಾವಣೆಯ ಕುರಿತಾಗಿ ಇಷ್ಟೊಂದು ಚಿಕ್ಕದಾದ ಸ್ಥಳಾವಕಾಶದಲ್ಲಿ ವ್ಯಕ್ತಪಡಿಸಲ್ಪಡಬಲ್ಲದು ಎಂಬುದು ಆಶ್ಚರ್ಯಕರವಾಗಿ ರುತ್ತದೆ.

ಅವರನ್ನು ಪರಿವರ್ತನೆಗೆ ನಡಿಸಿದ ಹೆಜ್ಜೆಗಳಾವವು?

*ಪಾಪದಿಂದ.* ನಾವು ಶುಭವಾರ್ತೆಗೆ ಬರಬೇಕೆಂದರೆ ಕೆಟ್ಟ ವಾರ್ತೆಯನ್ನು ದಾಟಿಕೊಂಡು ಹೋಗಬೇಕಾಗಿರುತ್ತದೆ. ನಾವು ದೇವರ ಬಳಿಗೆ ಬರಬೇಕೆಂದರೆ, ನಾವು ಏನಾಗಿದ್ದೇವೆ ಮತ್ತು ಎಲ್ಲಿದ್ದೇವೆಂಬುದನ್ನು ತೊರೆದು ಬಿಡಬೇಕು. ಪಶ್ಚಾತ್ತಾಪವು ರಕ್ಷಣೆಯ ಕಡೆಗೆ ಬರುವದಕ್ಕಿರುವ ಅತ್ಯಂಥ ಕಠಿಣವಾದ ಹೆಜ್ಜೆಯಾಗಿರುತ್ತದೆ. ಥೆಸಲೋನಿಕದವರು ಪರಿವರ್ತನೆಗೊಳ್ಳುವ ಮುಂಚೆ ವಿಗ್ರಹಗಳನ್ನು ಆರಾಧಿಸುತ್ತಿದ್ದರು. ಅವರು ಅಪ್ಪಟ ವಿಗ್ರಹಾರಾಧಕತೆಯ ಹಿನ್ನಲೆಯೊಳಗಿಂದ ದೇವರ ಕಡೆಗೆ ತಿರುಗಿಕೊಂಡಿದ್ದರು.

Jeffrey Dahmerನು ಅಂದಾಜು ಮೂವತ್ತು ಪುರುಷರು ಮತ್ತು ಬಾಲಕರನ್ನು ಕೊಲೆ ಮಾಡಿದ್ದಾನೆಂಬ ಆರೋಪಕ್ಕೊಳಗಾಗಿದ್ದನು, ನ್ಯಾಯವಿಚಾರಿಸಲ್ಪಟ್ಟಿದ್ದನು, ಮತ್ತು ದೋಷಿಯೆಂದು ಸಾಭಿತುಗೊಂಡಿದ್ದನು. ಶಿಕ್ಷೆಗೆ ಗುರಿಯಾದ ಬಳಿಕ, ಆತನು ತನ್ನ ಪ್ರಾಯಶ್ಚಿತ್ತಾತ್ಮಕದಲ್ಲಿ ತನ್ನ ಕಾಲವನ್ನು ಆರಂಭಿಸಿದನು. Mary Mott ಯೋಚಿಸಿದ್ದೇನೆಂದರೆ ಯಾವನಿಗಾದರೂ ಸುವಾರ್ತೆಯ ಅಗತ್ಯತೆಯಿರುವದಾದಲ್ಲಿ ಅದು Dahmerನಿಗೇ ಎಂಬದೆ. ಆಕೆಯು ಪತ್ರವನ್ನು ಬರೆದು ಆತನಿಗೆ ಬೈಬಲ್ ಪತ್ರವ್ಯವಹಾರದ ಕೋರ್ಸ್ ಮಾಡುವ ಮನಸ್ಸಿದೆಯೋ ಎಂದು ವಿಚಾರಿಸಿದಳು. ದೇವರ ವಾಕ್ಯವನ್ನು ಅಧ್ಯಯನ ಮಾಡುವದಕ್ಕೆ ಆಕೆಯು ನೀಡಿದ ಆಮಂತ್ರಣವನ್ನು ಆತನು ಒಪ್ಪಿಕೊಂಡನು ಮತ್ತು ಆಕೆಯು ಅವನಿಗೆ ಕೋರ್ಸ್ ನ್ನು ಕಳುಹಿಸಿ ಕೊಟ್ಟಳು. ಆತನಿಗೆ ದೇವರ ಚಿತ್ತದ ಕುರಿತ ತಿಳುವಳಿಕೆಯು ಅಧಿಕವಾಗಿ ಬೆಳೆಯಿತು, ಮತ್ತು ಆತನು ದೀಕ್ಷಾಸ್ನಾನ ಮಾಡಿಸಬೇಕೆಂದು ವಿನಂತಿಸಿಕೊಂಡನು. ಆತನು ತನ್ನ ಪಾಪದ ಹಳೇ ಜೀವಿತವನ್ನು ಬಿಟ್ಟು ದೇವರನ್ನು ಸೇವಿಸುವದಕ್ಕೆ ತಿರುಗಿಕೊಂಡಾಗ, ಆತನು ಜೈಲಿನಲ್ಲಿದ್ದ ಯಾವದೋ ಒಂದು ರೀತಿಯ ನೀರಿನ ಹೊಂಡದಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡು ಕ್ರಿಸ್ತನಲ್ಲಿ ಸೇರಿಕೊಂಡನು. ಸುವಾರ್ತೆಯು ಸರ್ವರಿಗಾಗಿಯೂ-ಅತ್ಯಂಥ ಕೆಟ್ಟವರು, ಅತ್ಯುತ್ತಮವಾದವರು, ಮತ್ತು ಎರಡರ ಮಧ್ಯದಲ್ಲಿರುವ ಯಾವನೇ ಆಗಿರಬಹುದು-ಇರುತ್ತದೆ!

*ದೇವರ ಕಡೆಗೆ.* "ದೇವರ ಕಡೆಗೆ ತಿರುಗಿಕೊಂಡು" ಎಂಬ ಮಾತಿನಲ್ಲಿ ದೇವರ ವಾಕ್ಯವನ್ನು ಅಂಗೀಕರಿಸಿಕೊಳ್ಳುವದು, ಆತನನ್ನು ಏಕೈಕ ಸತ್ಯ ದೇವರು ಎಂದು ಒಪ್ಪಿಕೊಳ್ಳುವಿಕೆ ಸೇರಿರುತ್ತದೆ. ಸುಳ್ಳುಗಳು ಮತ್ತು ಅನಸ್ತಿತ್ವವುಳ್ಳ ವಿಗ್ರಹಾರಾಧಕರ ದೇವರುಗಳಿಗೆ ತದ್ವಿರುದ್ಧವಾಗಿ, ದೇವರು ಜೀವವುಳ್ಳವನು ಮತ್ತು ಸತ್ಯವಾದವನು ಎಂಬದಾಗಿ ಪೌಲನು ಹೇಳಿದನು. ವಿಗ್ರಹಗಳು ಹೇಗೆ ಸತ್ತವುಗಳಾಗಿರುವದರ (ವಾಸ್ತವಿಕತೆಯಿಲ್ಲದ) ನಿಮಿತ್ತವಾಗಿ ಸುಳ್ಳು ಆಗಿರುತ್ತವೋ ಹಾಗೆಯೇ ದೇವರು ಜೀವವುಳ್ಳವನಾಗಿರುವದರ ನಿಮಿತ್ತವಾಗಿ ಸತ್ಯ ಆಗಿದ್ದಾನೆ.

*ಎದುರುನೋಡುವವರಾದಿರಿ.* ಕ್ರೈಸ್ತ ಜೀವಿತದಲ್ಲಿರುವ ಪ್ರಮುಖ ನಿರೀಕ್ಷೆಯೆಂದರೆ ಕ್ರಿಸ್ತನ ಪುನರಾಗಮನವನ್ನು ಎದುರು ನೋಡುವದು. ಥೆಸಲೋನಿಕದವರು ಎರಡನೆಯ ಬರೋಣವನ್ನು ಕಾತುರದಿಂದ ಎದುರು ನೋಡುವವರಾಗಿ ಜೀವಿಸುತ್ತಿದ್ದರು.

"ಎದುರುನೋಡು" ಎಂಬುದಕ್ಕಿರುವ ಗ್ರೀಕ್ ಪದವು ಒಂದು ಸಾಮಾನ್ಯವಾಗಿ ಬಳಕೆಯಲ್ಲಿರುವ ಪದದ ಸಂಯುಕ್ತ ಪದವಾಗಿರುತ್ತದೆ, ಅದರ ಮುಂಚೆ ಯೋಚನೆಯನ್ನು ತೀಕ್ಷ್ಣಗೊಳಿಸುವ ಉಪಸರ್ಗವು ಇರುತ್ತದೆ, ಆದರೆ ಅದು ಒಬ್ಬರಾಗಿ ನಿಂತಿರುವ ವೇಳೆ

"ಮೇಲೆ" ಎಂಬ ಅರ್ಥವನ್ನು ಸಹ ಕೊಡುತ್ತದೆ. ನಾವು ಅರ್ಥವನ್ನು ಈ ವಿಧದಲ್ಲಿ ಯೋಚಿಸಬಹುದು: ಅವರು ತಮ್ಮ ಕರ್ತನಿಗಾಗಿ "ಎದುರುನೋಡುತ್ತಾ ಇದ್ದರು." ಅವರು ನಿರೀಕ್ಷಿಸುವ ಪ್ರಜ್ಞೆಯನ್ನು, ಒಂದು ಜಯೋತ್ಸಾಹದ ನಿರೀಕ್ಷೆ, ಮತ್ತು ನಿರಂತರವಾದ ಸ್ಥೈರಣೆಯನ್ನು ಹೊಂದಿದ್ದರು. ಅವರು ಒಬ್ಬ ವ್ಯಕ್ತಿಗೋಸ್ಕರ ಎದುರು ನೋಡುತ್ತಿದ್ದರು, ಹೊರತು ಒಂದು ಘಟನೆಗೋಸ್ಕರವಲ್ಲ.

ಅನ್ಯಜನರು ಕ್ರೈಸ್ತರಾಗಿ ಪರಿವರ್ತನೆಗೊಂಡಾಗ ಒಂದು ದೊಡ್ಡ ಬದಲಾವಣೆಯನ್ನು ಅನುಭವಿಸಿದರೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳೋಣ. ಅವರು ಒಂದು ಸಂಪೂರ್ಣ ತಿರುಗು-ಮುರುಗುಗೊಂಡರು, ಜೀವವಿಲ್ಲದ ದೇವರುಗಳನ್ನು ಸೇವಿಸುವದರಿಂದ ವಿಮುಖರಾಗಿ ಸತ್ಯ ದೇವರನ್ನು ನಂಬಿಗಸ್ತರಾಗಿ ಸೇವಿಸುವ ಒಂದು ಜೀವಿತದ ಕಡೆಗೆ ತಿರುಗಿಕೊಂಡರು. ಅವರ ದಿನಗಳಲ್ಲಿ ವಿಗ್ರಹಾರಾಧನೆಯು ವ್ಯಾಪಕವಾಗಿತ್ತು. ಪ್ರತಿಯೊಬ್ಬರೂ ಅದನ್ನು ಮಾಡುತ್ತಿದ್ದರು. ಸತ್ಯ ದೇವರನ್ನು ಆರಾಧಿಸುವವರು ಅಲ್ಪಸಂಖ್ಯಾತರಾಗಿದ್ದರು. ಹೀಗಿದ್ದಾಗ್ಯೂ ಥೆಸಲೋನಿಕದವರು ಸತ್ಯವನ್ನು ತಿಳಿದುಕೊಂಡರು, ಅದನ್ನು ಅಂಗೀಕರಿಸಿಕೊಂಡರು, ಮತ್ತು ಏನೇ ಬೆಲೆಯನ್ನು ಕಟ್ಟಬೇಕಾದಾಗ್ಯೂ ಅದರಲ್ಲಿ ಸಂತೋಷಿಸಿದರು. EC

## ವಿಗ್ರಹಗಳನ್ನು ಬಿಟ್ಟುಬಿಟ್ಟು ಜೀವವುಳ್ಳ ದೇವರ ಕಡೆಗೆ (1:9, 10)

ಪೌಲನು ಥೆಸಲೋನಿಕದಲ್ಲಿನ ಸಭಾಮಂದಿರದಲ್ಲಿ ಮೂರು ಸಬ್ಬತ್ ದಿನಗಳ ಕಾಲ ವಾದಿಸುವವನಾಗಿ, ಯೇಸುವೇ ಕ್ರಿಸ್ತನು ಎಂಬದಕ್ಕೆ ಪುರಾವೆಗಳನ್ನು ನೀಡಿದನು ಎಂಬದರ ವಿವರಣೆಯನ್ನು ಅಪೊಸ್ತಲರ ಕೃತ್ಯಗಳು 17:1-9 ವಚನಗಳು ನೀಡುತ್ತವೆ. ದೇವಭಕ್ತರಾದ ಗ್ರೀಕ್ ರಲ್ಲಿ ಮತ್ತು ಪ್ರಮುಖ ಸ್ತ್ರೀಯರಲ್ಲಿ ಅನೇಕರು ಆ ಸಂದೇಶವನ್ನು ಆದರ ಭಾವದಿಂದ ಸ್ವೀಕರಿಸಿದರು, ಆದರೆ ಯೆಹೂದಿ ನಾಯಕರು, ಹೊಟ್ಟೇಕಿಚ್ಚಿನಿಂದ ತುಂಬಿದವರಾಗಿ ಪೌಲನ ವಿರುದ್ಧವಾಗಿ ಜನರ ಗುಂಪು ಕೂಡಿಸಿ ಗದ್ದಲ ಎಬ್ಬಿಸಿದರು. ಅವರು ಯಾಸೋನನ ಮನೆಯ ಮೇಲೆ ದಾಳಿ ಮಾಡಿ ಈ ಖ್ಯಾತ ಹೇಳಿಕೆಯನ್ನು ನೀಡಿದರು: "ಲೋಕವನ್ನು ಅಲ್ಲಕಲ್ಲೋಲ ಮಾಡಿದ ಈ ಮನುಷ್ಯರು ಇಲ್ಲಿಗೂ ಬಂದಿದ್ದಾರೆ" (ಅಪೊಸ್ತಲರ ಕೃತ್ಯಗಳು 17:6b). ಇದರ ಪರಿಣಾಮದಿಂದಾಗಿ, ಪೌಲನನ್ನು ಥೆಸಲೋನಿಕದಿಂದ ಹೊರಗೆ ಓಡಿಸಲಾಯಿತು, ಆದರೆ ಅದಕ್ಕೂ ಮುನ್ನವೇ ಆತನು ಅಲ್ಲಿ ಸಭೆಯನ್ನು ಸ್ಥಾಪಿಸಿ ಬಿಟ್ಟಿದ್ದನು.

ಅನಂತರದಲ್ಲಿ, ಥೆಸಲೋನಿಕದ ಸಭೆಯಿಂದ ಒಳ್ಳೇ ವರದಿಯನ್ನು ಸ್ವೀಕರಿಸಿದ ಬಳಿಕ, ಆತನು ಅವರಿಗೆ ಈ ಪತ್ರಿಕೆಯನ್ನು ಬರೆದನು. ತಿಮೊಥೆಯನು ಮಕೆದೋನ್ಯದಿಂದ ಹಿಂದಿರುಗಿ ಬರುತ್ತಿದ್ದ ಹಾಗೆ, ಕೊರಿಂಥದಲ್ಲಿ ಪೌಲನನ್ನು ಕೂಡಿಕೊಂಡನು ಮತ್ತು ಥೆಸಲೋನಿಕದಲ್ಲಿನ ಪರಿಸ್ಥಿತಿಯ ಕುರಿತಾದ ಶುಭ ಸುದ್ದಿಯನ್ನು ಆತನಿಗೆ ತಿಳಿಯ ಪಡಿಸಿದನು. ಪೌಲನು ಅವರ ಪರಿವರ್ತನೆಯ ಕುರಿತಾಗಿ ಮತ್ತು ಕ್ರಿಸ್ತನಲ್ಲಿ ಅವರ ಬೆಳವಣಿಗೆಯನ್ನು ಕುರಿತು ಸಂತೋಷಿಸುವವನಾಗಿ ತನ್ನ ಪತ್ರಿಕೆಯನ್ನು ಆರಂಭಿಸುತ್ತಾನೆ.

*"ವಿಗ್ರಹಗಳನ್ನು ಬಿಟ್ಟುಬಿಟ್ಟು ದೇವರ ಕಡೆಗೆ ತಿರುಗಿಕೊಂಡು" (1:9).* 9ನೇ ವಚನದ ಮೊದಲ ಭಾಗದಲ್ಲಿ ಪೌಲನು ಹೀಗೆ ಹೇಳುತ್ತಾನೆ, "ನೀವು ವಿಗ್ರಹಗಳನ್ನು ಬಿಟ್ಟುಬಿಟ್ಟು

ದೇವರ ಕಡೆಗೆ ತಿರುಗಿಕೊಂಡು." ಪ್ರಾಚೀನ ಜಗತ್ತಿನಲ್ಲಿ ಥೆಸಲೋನಿಕವು ಒಂದು ವಿಗ್ರಹಾರಾಧಕ ಸ್ಥಳವಾಗಿತ್ತು. ಅದು ಈಗಿನ ವರೆಗೂ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದ್ದು ಈ ದಿನದ ಗ್ರೀಕ್ ರಿಂದ ಅದು ಸಲೋನಿಕಾ ಎಂದು ಕರೆಯಲ್ಪಡುತ್ತದೆ. ಈಗಲೂ ಅದು ವೇಗವಾಗಿ ಬೆಳೆಯುತ್ತಿರುವ ನಗರವಾಗಿರುತ್ತದೆ, ಅದಕ್ಕೆ ಒಂದು ಕಾರಣವೆಂದರೆ ಅದು ಸಮುದ್ರಕ್ಕೆ ಸಂಪರ್ಕ ಕಲ್ಪಿಸುತ್ತದೆಂಬುದೆ. ಪ್ರಥಮ ಶತಮಾನದಲ್ಲಿ, ರೋಮನ್ ಸಾಮ್ರಾಜ್ಯದ ಪೂರ್ವ-ಪಶ್ಚಿಮದ ರಸ್ತೆಗಳಲ್ಲೊಂದಾದ Egnatian ಮಾರ್ಗವು ಥೆಸಲೋನಿಕದ ಮೂಲಕವೇ ಹಾದು ಹೋಗುವದಾಗಿತ್ತು.

ಮೋಡಗಳಿಲ್ಲದೆ ಸ್ಪಷ್ಟವಾದ ದಿನದಲ್ಲಿ ಗ್ರೀಕ್ ದೇವರುಗಳ ನಿವಾಸವೆಂದು ಕಲ್ಪಿಸಿಕೊಳ್ಳಲಾಗಿದ್ದ ಒಲಂಪಸ್ ಪರ್ವತವನ್ನು ಒಬ್ಬನು ಥೆಸಲೋನಿಕದಿಂದ ವೀಕ್ಷಿಸಬಹುದಿತ್ತು. ಒಲಂಪಸ್ ಪರ್ವತಕ್ಕೆ ಸಮೀಪದಲ್ಲಿ ಜೀವಿಸುತ್ತಿದ್ದ ಜನರು ಗ್ರೀಕ್ ದೇವರುಗಳ ಆರಾಧಕರಾಗಿದ್ದರೆಂಬದಾಗಿ ನಾವು ನಿರೀಕ್ಷಿಸುವೆವು. ಸಾರುವದನ್ನು ಕೇಳಿಸಿಕೊಂಡು ಸುವಾರ್ತೆಯನ್ನು ಅಂಗೀಕರಿಸಿಕೊಂಡ ಜನರು, ಆ ಕಾಲಕ್ಕೆ ಮುಂಚೆ ಗ್ರೀಕ್ ದೇವರುಗಳನ್ನು ಆರಾಧಿಸಿದ್ದರೆಂಬುದನ್ನು ೨ನೇ ವಚನವು ಸ್ಪಷ್ಟವಾಗಿ ಸೂಚಿಸುತ್ತದೆ.

ಪೌಲನು ಅವರ ಕುರಿತಾಗಿ ಹೇಳಿದ್ದೇನೆಂದರೆ, "ನೀವು ವಿಗ್ರಹಗಳನ್ನು ಬಿಟ್ಟುಬಿಟ್ಟು ದೇವರ ಕಡೆಗೆ ತಿರುಗಿಕೊಂಡಿರಿ." "ತಿರುಗಿಕೊಂಡು" ಎಂಬ ಈ ಪದವು ಅಪೊಸ್ತಲರ ಕೃತ್ಯಗಳು 3:19ರಲ್ಲಿ "ಮಾನಸಾಂತರಪಟ್ಟು ತಿರುಗಿಕೊಳ್ಳಿರಿ" ಎಂಬ ಅರ್ಥವನ್ನು ಒದಗಿಸಲ್ಪಟ್ಟಿರುವ ಅದೇ ಪದದ ಮೂಲದಿಂದ ಬಂದಿರುತ್ತದೆ (KJV). ಆ ಜನರು ಪರಿವರ್ತನೆಗೊಂಡಿದ್ದರು. ಪರಿವರ್ತನೆ ಎಂದರೇನು? ಅದು ತಿರುಗಿಕೊಳ್ಳುವದಾಗಿದೆ. ಪರಿವರ್ತನೆಗೊಳ್ಳುವಿಕೆಯ ತಿರುಳಿನಲ್ಲಿ ಮತ್ತು ಮುಖ್ಯಭಾಗದಲ್ಲಿರುವದೇ ತಿರುಗಿಕೊಳ್ಳುವಿಕೆ ಆಗಿದೆ.

"ತಿರುಗಿಕೊಂಡು" ಎಂಬುದಕ್ಕಿರುವ ಪದವು "ಪಶ್ಚಾತ್ತಾಪ" ಎಂಬದಕ್ಕಿರುವ ಪದಗಳೆರಡೂ ಒಂದೇ ಆಗಿರುವದಿಲ್ಲ. "ಪಶ್ಚಾತ್ತಾಪ" ಎಂಬುದು *metanoia* ಎಂಬ ಪದದಿಂದ ಬಂದಿರುತ್ತದೆ ಮತ್ತು ಅದು ಮನಸ್ಸನ್ನು ಬದಲಾಯಿಸಿಕೊಳ್ಳುವದು ಎಂದರ್ಥವಾಗಿದೆ. ದಿವಂಗತ Charles Robertson ಆಗಾಗ್ಗೆ ಹೀಗೆ ಹೇಳುತ್ತಿದ್ದರು, "ಪಶ್ಚಾತ್ತಾಪ ಎಂದರೆ 'ನಿನ್ನಲ್ಲಿ ಒಂದು ನೂತನ ಮನಸ್ಸನ್ನು ಹೊಂದಿಕೊಳ್ಳುವದು' ಎಂದರ್ಥ." ಅವುಗಳು ನಿಖರವಾಗಿ ಒಂದೇ ಪದಗಳಾಗಿರುವದಿಲ್ಲ, ಆದರೆ ಅವುಗಳ ಅರ್ಥದಲ್ಲಿ ಒಂದಕ್ಕೊಂದು ನಿಕಟ ನೆಂಟಸ್ತಿಕೆಯನ್ನು ಹೊಂದಿವೆ. ಅನೇಕ ಸಾರಿ ಅವುಗಳು ಒಂದೇ ವಚನದಲ್ಲಿ ಒಟ್ಟೊಟ್ಟಿಗೆ ಬಳಸಲ್ಪಟ್ಟಿರುತ್ತವೆ, ಉದಾಹರಣೆಗೆ ಅಪೊಸ್ತಲರ ಕೃತ್ಯಗಳು 3:19. ಪೌಲನು ಹೀಗೆ ಹೇಳಿದನು, "ನೀವು ತಿರುಗಿಕೊಂಡಿರುವಿರಿ. ನೀವು ತಿರುಗು-ಮುರುಗಾಗಿ ವಿಮುಖರಾಗಿರುವಿರಿ. ನೀವು ನಿಮಗಾಗಿ ಒಂದು ಹೊಸ ಮನಸ್ಸನ್ನು ಹೊಂದಿಕೊಂಡಿರುವಿರಿ, ಮತ್ತು ನಿಮ್ಮ ಜೀವನವು ಮಾರ್ಪಟ್ಟಿರುತ್ತದೆ."

*"ಜೀವವುಳ್ಳ ಸತ್ಯದೇವರನ್ನು ಸೇವಿಸುವವರಾದಿರಿ" (1:9).* ಪೌಲನು ಮುಂದುವರೆದು ಅವರು ವಿಗ್ರಹಗಳನ್ನು ಬಿಟ್ಟು "ಜೀವವುಳ್ಳ ಸತ್ಯದೇವರನ್ನು ಸೇವಿಸುವದಕ್ಕೆ" ತಿರುಗಿಕೊಂಡರು ಎಂದು ಹೇಳುತ್ತಾನೆ. ಪೌಲನು ಸಾರಿದ ದೇವರು "ಜೀವವುಳ್ಳ ಸತ್ಯ"

ದೇವರಾಗಿದ್ದನು. ಒಲಂಪಸ್ ಪರ್ವತದಲ್ಲಿನ ದೇವರುಗಳು ಸತ್ತವುಗಳು ಮತ್ತು ಸುಳ್ಳಾದವುಗಳಾಗಿದ್ದವು. ದೌಸ್ಯ ಮತ್ತು ಇತರ ದೇವರುಗಳಿಗೆ ವಾಸ್ತವಿಕತೆಯೇ ಇರಲಿಲ್ಲ.

ಅವರು "ಸೇವಿಸುವದಕ್ಕೆ" ತಿರುಗಿಕೊಂಡರು. ನಮ್ಮಲ್ಲಿ ಕೆಲವರು ತಿರುಗಿಕೊಂಡಿದ್ದೇವೆ, ಆದರೆ, ನಾವು ನಿಜವಾಗಿಯೂ ಸೇವಿಸುವದಕ್ಕಾಗಿ ತಿರುಗಿಕೊಂಡವರಲ್ಲವೆಂದು ತೋರುತ್ತದೆ. ಈ ಅಧ್ಯಾಯದಲ್ಲಿ, ತಕ್ಷಣದಲ್ಲೇ ಮೂಂದುವರೆಯುವ ವಚನಗಳಲ್ಲಿ, ಅವರ ಸೇವೆಯ ಕುರಿತ ಒಂದು ಕಾರ್ಯವನ್ನು ನಾವು ಕಾಣುತ್ತೇವೆ. "ಕರ್ತನ ವಾಕ್ಯವು ನಿಮ್ಮಿಂದಲೇ ಘೋಷಿತವಾದದ್ದು" ಎಂಬದಾಗಿ ಪೌಲನು ಅವರನ್ನು ಈ ಮಾತುಗಳಿಂದ ಶ್ಲಾಘಿಸಿದನು (ವ. 8). ಆತನು ಈ ಮುಂಚೆಯೇ ಅವರ ನಂಬಿಕೆಯ ಫಲಿತವಾದ ಕೆಲಸ ಹಾಗೂ ಪ್ರೀತಿಪೂರ್ವಕ ಪ್ರಯಾಸದ ಕುರಿತಾಗಿ ಮಾತಾಡಿದ್ದನು. ಇದೊಂದು ಸಕ್ರಿಯವಾದ, ಚೈತನ್ಯ ಮತ್ತು ತುಡಿತದಿಂದ ಕೂಡಿದ ಸಭೆಯಾಗಿದ್ದು ಅದು ನಂಬಿಕೆ ಮತ್ತು ಕೆಲಸ ಮಾಡುವದಕ್ಕೆ ಪ್ರಿಯ ಪಡುತ್ತಿದ್ದದ್ದಾಗಿತ್ತು. ಒಬ್ಬ ಪ್ರಸಂಗಿಯು ಹೀಗೆ ಹೇಳಿದನು, "ಕೆಲವರು 'ಏನನ್ನೂ ಮಾಡಬೇಡ' ಎಂಬ ಮಣೆಯ ಮೇಲೆ ಕುಳಿತುಕೊಳ್ಳುವದಕ್ಕೆ ತಿರುಗಿಕೊಂಡಿದ್ದಾರೆ ಮತ್ತು ಅವರು 'ನಾನು ಮಹಿಮೆಯೆಡೆಗೆ ಸಾಗಿದ್ದೇನೆ' ಎಂದು ಹಾಡುತ್ತಾ 'ಸ್ವಲ್ಪ ಕೆಲಸ ಮಾಡು' ಎಂಬ ಕೋಲನ್ನು ಕೆತ್ತುತ್ತಾ ಇರುತ್ತಾರೆ." ಹೇಗೂ, ಥೆಸಲೋನಿಕದವರ ವಿಷಯದಲ್ಲಿ ಈ ರೀತಿಯಾಗಿರಲಿಲ್ಲ.

ವಿಶ್ವಾಸಿಸುವದು ನಂಬಿಕೆಯ ಹೃದಯದಲ್ಲಿಯೇ ಇರುತ್ತದೆ. "ನಂಬಿಕೆ" ಎಂಬುದನ್ನು ಕರ್ತನಾದ ಯೇಸು ಕ್ರಿಸ್ತನಲ್ಲಿಡಲಾದ ವಿಧೇಯತೆಯೊಂದಿಗೆ ಜೊತೆಗೂಡಿದ ವಿಶ್ವಾಸವೆಂಬುದಾಗಿ ಅರ್ಥನಿರೂಪಿಸಲ್ಪಟ್ಟಿದೆ. ನಮ್ಮ ಜೀವಿತಗಳು ಚಟುವಟಿಕೆಗಳಿಂದ ತುಂಬಿದವುಗಳಾಗಿದ್ದು ನಮ್ಮಲ್ಲಿ ವಿಶ್ವಾಸ ಎಂಬುದಿಲ್ಲವಾದಲ್ಲಿ, ನಮ್ಮ ನಿಜವಾಗಿಯೂ ನಂಬಿಕೆಯ ಪ್ರಾಮುಖ್ಯವಾದ ಅಂಶದ ಕೊರತೆಯಿರುವದಾಗಿದೆ.

*"ಆಕಾಶದೊಳಗಿಂದ ಬರುವಂಥ ಆತನ ಕುಮಾರನನ್ನು ಎದುರುನೋಡುವವರಾಗಲು ತಿರುಗಿಕೊಂಡರು" (1:10).* ಅಲ್ಲದೆ ಪೌಲನು "ನೀವು ಎದುರುನೋಡುವವರಾಗಲು ತಿರುಗಿಕೊಂಡಿರಿ" ಎಂದು ಸಹ ಹೇಳಿದನು. ಅವರು ತಿರುಗಿಕೊಂಡು ಸತ್ತವರೊಳಗಿಂದ ಎಬ್ಬಿಸಲ್ಪಟ್ಟಂಥ ಯೇಸುವನ್ನು ಎದುರುನೋಡುವವರಾದರು. ಅದೊಂದು ಪೌಲನಿಗಿರುವ ಗುಣಸ್ವಭಾವವಲ್ಲವೋ? ಹೇಗೂ, ಯೇಸುವು ಹಿಂದಿರುಗಿ ಬರುತ್ತಿದ್ದಾನೆಂದು ಪೌಲನು ಹೇಳಿದಾಗ, ಆತನು ಕೇವಲ "ಆತನು ತಿರುಗಿ ಬರುತ್ತಿದ್ದಾನೆ" ಎಂದಷ್ಟೇ ಹೇಳಿ ತನ್ನ ಶ್ರೋತೃಗಳಿಗೆ ಯಾವದೇ ಪುರಾವೆಯನ್ನು ನೀಡದೆ ಬಿಟ್ಟುಬಿಡಲಿಲ್ಲ. ಆತನು ಹಿಂದಿರುಗಿ ಬರುತ್ತಿದ್ದಾನೆ ಎಂಬುದಕ್ಕೆ ಪುರಾವೆಯನ್ನು ಕೊಟ್ಟನು. ಇದಕ್ಕೆ ಮುಂಚೆ ಅಪೊಸ್ತಲರ ಕೃತ್ಯಗಳು 17:30, 31ರಲ್ಲಿ ಆತನು ಹೀಗೆ ಹೇಳಿದ್ದನು, "ಈಗಾಲಾದರೋ ಆತನು ನಾಲ್ಕು ದಿಕ್ಕಿನಲ್ಲಿರುವ ಮನುಷ್ಯರೆಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಅಪ್ಪಣೆಮಾಡುತ್ತಾನೆ. ಯಾಕೆಂದರೆ ಆತನು ನಿಷ್ಕರ್ಷೆ ಮಾಡಿದ ಪುರುಷನ ಕೈಯಿಂದ ನೀತಿಗನುಸಾರವಾಗಿ ಭೂಲೋಕದ ನ್ಯಾಯವಿಚಾರಣೆ ಮಾಡುವದಕ್ಕೆ ಒಂದು ದಿವಸವನ್ನು ಗೊತ್ತು ಮಾಡಿದ್ದಾನೆ." ಆಧಾರವು ಎಲ್ಲಿದೆ? ಪೌಲನು ಮುಂದುವರೆದು ಹೀಗೆ ಹೇಳುತ್ತಾನೆ, "ಅವನನ್ನು ಸತ್ತವರೊಳಗಿಂದ ಎಬ್ಬಿಸಿದ್ದರಲ್ಲಿ ಇದನ್ನು ನಂಬುವದಕ್ಕೆ ಎಲ್ಲರಿಗೂ ಆಧಾರ ಕೊಟ್ಟಿದ್ದಾನೆ."

ಆ ದೊಡ್ಡ ಕೇಂದ್ರಿಯ ಸತ್ಯವು ಆತನು ತಿರುಗಿ ಬರುತ್ತಿದ್ದಾನೆಂಬುದಕ್ಕೆ ನಿಶ್ಚಯತೆಯಾಗಿರುತ್ತದೆ. ತಾನು ಹಿಂದಿರುಗಿ ಬರುವನೆಂಬದಾಗಿ ಆತನು ನಮಗೆ ಬರಿದಾದ ಸಮಾಧಿಯ ಮೂಲಕ ಭರವಸೆಯನ್ನು ಕೊಟ್ಟನು. ಆದುದರಿಂದ, ಕ್ರೈಸ್ತ ಜೀವನವು ಎದುರುನೋಡುವಂಥ ಜೀವನ, ಆದರೆ ಅದೊಂದು ತಟಸ್ಥವಾದ, ನಿಷ್ಕ್ರಿಯವಾದ ಎದುರು ನೋಡುವಿಕೆಯಾಗಿರುವದಿಲ್ಲ. ಅದೊಂದು ಸಜೀವವಾದ, ತುಡಿತವುಳ್ಳ ಎದುರು ನೋಡುವಿಕೆಯಾಗಿದೆ.

ಆತನ ಪುನರಾಗಮನಕ್ಕಾಗಿ ನಾವು ಎದುರು ನೋಡುತ್ತಿದ್ದೇವೆಂಬ ವಾಸ್ತವಾಂಶವೇ ವಿಶ್ವಾಸಭರಿತ ಚಟುವಟಿಕೆ ಮತ್ತು ಸೇವೆಯಲ್ಲಿ ತೊಡಗಿಸಿಕೊಳ್ಳುವಂತೆ ನಮಗೆ ಆತ್ಮೀಕ ಉತ್ತೇಜನವನ್ನು ನೀಡತಕ್ಕದ್ದು. ನಾವು ಎದುರು ನೋಡುತ್ತಿರುವ ವೇಳೆಯಲ್ಲಿ, ಕೆಲಸ ಮಾಡುವವರಾಗಿದ್ದೇವೆ; ನಾವು ನಿರೀಕ್ಷಿಸುತ್ತಿರುವ ವೇಳೆ, ಸೇವೆಯನ್ನು ಮಾಡುವವರಾಗಿದ್ದೇವೆ. ನಾವು ಇದು "ಆ ದಿನವೇ" ಆಗಿರಬಲ್ಲದು ಎಂಬ ಪ್ರಜ್ಞೆಯೊಂದಿಗೆ ನಿರೀಕ್ಷೆಯುಳ್ಳವರಾಗಿ ಪ್ರತಿ ದಿನವನ್ನು ಬರಮಾಡಿಕೊಳ್ಳುವಾಗ, ಆ ಪ್ರಜ್ಞೆಯು ನಮ್ಮನ್ನು ಸೇವೆ ಮಾಡುವಂತೆ ಸ್ಫೂರ್ತಿಗೊಳಿಸುವದಾಗಿದೆ. ಪೌಲನು ಥೆಸಲೋನಿಕದವರಿಗೆ ಅವರು ಅಂದುಕೊಂಡಷ್ಟು ಶೀಘ್ರದಲ್ಲಿ ಕ್ರಿಸ್ತನು ಹಿಂದಿರುಗಿ ಬರುವದಿಲ್ಲ ಎಂಬುದಾಗಿ ಹೇಳುತ್ತಾನೆ. ಅವರು ಆತನ ಬರೋಣವನ್ನು ಎದುರು ನೋಡುವವರಾಗಿ ಮಾಡಬಹುದಾದ ಅತ್ಯುತ್ತಮ ಸಂಗತಿಯೆಂದರೆ ಕರ್ತವ್ಯದ ಹುದ್ದೆಯಲ್ಲಿ ಕೆಲಸವನ್ನು ನಿರ್ವಹಿಸುತ್ತಿರುವದೇ.

*ಮುಕ್ತಾಯ.* ಥೆಸಲೋನಿಕದವರು ಹೇಗೆ ಕ್ರೈಸ್ತರಾಗಿದ್ದರು? ". . . ನೀವು ವಿಗ್ರಹಗಳನ್ನು ಬಿಟ್ಟುಬಿಟ್ಟು ದೇವರ ಕಡೆಗೆ ತಿರುಗಿಕೊಂಡು ಜೀವವುಳ್ಳ ಸತ್ಯದೇವರನ್ನು ಸೇವಿಸುವವರಾದಿರೆಂತಲೂ ಆತನು ಸತ್ತವರೊಳಗಿಂದ ಎಬ್ಬಿಸಿದಂಥ ಆಕಾಶದೊಳಗಿಂದ ಬರುವಂಥ ಆತನ ಕುಮಾರನನ್ನು ಎದುರುನೋಡುವವರಾದಿರೆಂತಲೂ ತಿಳಿಸುತ್ತಾರೆ. ಆ ಯೇಸುವು ಮುಂದೆ ಬರುವ ದೈವಕೋಪದಿಂದ ನಮ್ಮನ್ನು ತಪ್ಪಿಸುವಾತನು" (1 ಥೆಸಲೋನಿಕ 1:9, 10). ಅವರು ವಿಗ್ರಹಗಳಿಂದ ವಿಮುಖರಾಗಿದ್ದರು. ಅವರು ತಿರುಗಿಕೊಂಡು ಜೀವವುಳ್ಳ ಸತ್ಯದೇವರನ್ನು ಸೇವಿಸುವವರಾಗಿದ್ದರು. ಅವರು ತಿರುಗಿಕೊಂಡು ಯೇಸುವಿನ ಪುನರಾಗಮನವನ್ನು ಎದುರು ನೋಡುವವರಾಗಿದ್ದರು.

ಯೇಸು ಕ್ರಿಸ್ತನೇ ಆ ವ್ಯತ್ಯಾಸವು, ಆತನಿಲ್ಲದೆ ಹೋದರೆ, ನಮಗೊಂದು ನಿರೀಕ್ಷೆಯಿಲ್ಲದಂಥ ಅಂತ್ಯ, ಒಂದು ನಿರೀಕ್ಷೆರಹಿತವಾದ ಸಮಾಧಿ, ಒಂದು ನಿರೀಕ್ಷೆರಹಿತ ಪುನರುತ್ಥಾನ, ಒಂದು ನಿರೀಕ್ಷೆರಹಿತ ನಿತ್ಯತ್ವ ಕಾದಿರುತ್ತದೆ; ಆತನೊಂದಿಗೆ ನಮಗೆ ಪರಲೋಕ ಮತ್ತು ಭೂಲೋಕ ಎರಡೂ ಇರುತ್ತವೆ. AM

---

**ಅಡಿಟಿಪ್ಪಣಿಗಳು**

[1]Leon Morris, *The First and Second Epistles to the Thessalonians*, The New International Commentary on the New Testament (Grand Rapids, Mich.: Wm. B. Eerdmans Publishing Co., 1959), 47. [2]Ethelbert Stauffer, "ἀγαπάω," in *Theological Dictionary of the New Testament*, ed. Gerhard Kittel, trans. and ed. Geoffrey W. Bromiley (Grand Rapids,

Mich.: Wm. B. Eerdmans Publishing Co., 1964), 1:44–48. [3]Morris, 51. [4]A. T. Robertson, *The Epistles of Paul*, vol. 4, *Word Pictures in the New Testament* (Nashville: Broadman Press, 1931), 9. [5]J. E. Frame, *A Critical and Exegetical Commentary on the Epistles of St. Paul to the Thessalonians*, The International Critical Commentary (New York: Charles Scribner's Sons, 1912; reprint, Edinburgh: T. & T. Clark, 1988), 81. [6]Robertson, 12. [7]Ibid., 13. [8]Ibid., 14. [9]Robertson, 14. [10]Raymond C. Kelcy, *The Letters of Paul to the Thessalonians*, The Living Word Commentary, vol. 13 (Austin, Tex.: R. B. Sweet Co., 1968), 28.

[11]Fanny J. Crosby, "Safe in the Arms of Jesus," *Songs of the Church*, comp. and ed. Alton H. Howard (West Monroe, La.: Howard Publishing Co., 1977). [12]Walter Bauer, *A Greek-English Lexicon of the New Testament and Other Early Christian Literature*, 3d ed., rev. and ed. Frederick William Danker (Chicago: University of Chicago Press, 2000), 1019–20.